ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 12 ಗುರುವಾರ 2024

₹4

ಸಂಪುಟ: 45 | ಸಂಚಿಕೆ: 147 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಮೈಸೂರು ದಸರಾ ಉತ್ಸವಕ್ಕೆ ಸ್ಫೂರ್ತಿ ಹಂಪಿಯಲ್ಲ, ತಲಕಾಡಿನ ಗಂಗರು

ಇದನ್ನು ಸಾರ್ವಜನಿಕವಾಗಿ ಹೇಳಬೇಕಿದೆ; ಇತಿಹಾಸ ವಿದ್ವಾಂಸ ಡಾ.ತಲಕಾಡು ಚಿಕ್ಕರಂಗೇಗೌಡ

ಮೈಸೂರು,ಸೆ.11(ಪಿಎಂ)– ಮೈಸೂರು ದಸರಾ ಉತ್ಸವಕ್ಕೆ ಸ್ಫೂರ್ತಿ ಹಂಪಿಯಲ್ಲ, ತಲಕಾಡಿನ ಗಂಗರು ಎಂಬುದನ್ನು ನಾವು ಸಾರ್ವಜನಿಕವಾಗಿ ಹೇಳಬೇಕಿದೆ ಎಂದು ಇತಿಹಾಸ ವಿದ್ವಾಂಸ ಡಾ.ತಲಕಾಡು ಚಿಕ್ಕರಂಗೇಗೌಡ ಹೇಳಿದರು.

ಮೈಸೂರಿನ ಮುಕ್ತ ಗಂಗೋತ್ರಿಯ ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ 'ಗಂಗರಾಜ ಮನೆತನಗಳು, ಕರ್ನಾಟಕ ಸಂಸ್ಕೃತಿ ಮತ್ತು ಸಮಾಜಕ್ಕೆ ಅವರ ಕೊಡುಗೆಗಳು' ಕುರಿತ ಎರಡನೇ ದಿನ ವಿಚಾರ ಸಂಕಿರಣದಲ್ಲಿ 'ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಗಂಗರ ಕೊಡುಗೆಗಳು' ಬಗ್ಗೆ ನಡೆದ ವಿಚಾರ ಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಂಗರು ನವರಾತ್ರಿ ಮತ್ತು ದಸರಾ ಉತ್ಸವ ನಡೆಸುತ್ತಿದ್ದರು ಎಂಬುದು ಗಂಗರ ತಾಮ್ರದ ಪಟ್ಟ ಚಿತ್ರಣದ ಅಧ್ಯಯನದಿಂದ ತಿಳಿದುಬಂದಿದೆ ಎಂದು ವಾಸ್ತುಶಿಲ್ಪಿ ಶಶಿಧರ್ ಚಿಕ್ಕರವರ ಗೋಷ್ಠಿಯಲ್ಲಿ ವಿಷಯ ಮಂಡಿಸಿದ್ದರ ಆಧಾರವಾಗಿ ಮಾತನಾಡಿದ ಡಾ.ತಲಕಾಡು ಚಿಕ್ಕರಂಗೇಗೌಡ, ಶಶಿಧರ್ ಚಿಕ್ಕ ಅವರ ವಿಚಾರ ಮಂಡನೆಯಿಂದ ಇಂದು ಹೊಸ ಒಂದು ವಿಷಯ ಬೆಳಕಿಗೆ ಬಂದಿತು. ನಾನು 10–12 ವರ್ಷಗಳಿಂದ ಟಿವಿಗಳಲ್ಲಿ ದಸರಾ ಜಂಬೂಸವಾರಿ ಲೈವ್ ನಿರೂಪಣೆ ಮಾಡುತ್ತಿದ್ದೇನೆ. ಹಲವು ಟಿವಿಗಳಲ್ಲಿ ಇದೇ ರೀತಿ ನಿರೂಪಣೆ ಪ್ರಸಾರವಾಗುತ್ತದೆ. ಆದರೆ ಶಶಿಧರ್ ಚಿಕ್ಕ ಅವರು ಇಂದು ಪ್ರಸ್ತುತಪಡಿಸಿದ ದೃಷ್ಟಿಕೋನದಲ್ಲಿ ಯಾರೂ ಅವಲೋಕನ ಮಾಡಿರಲಿಲ್ಲ ಎಂದು ತಿಳಿಸಿದರು.

ಮೈಸೂರು ದಸರಾದ ಮೂಲ ತಲಕಾಡಿನ ಗಂಗರಿಗೆ ಹೋಗಿ ನಿಲ್ಲುತ್ತದೆ. ಇನ್ನು ಮುಂದೆ ನಾವು ಧೈರ್ಯದಿಂದ ಮೈಸೂರು ದಸರಾಗೆ ಸ್ಫೂರ್ತಿ ಹಂಪಿಯಲ್ಲ, ತಲಕಾಡಿನ ಗಂಗರೆಂದು ಹೇಳಬಹುದು. ಅದಕ್ಕೆ ಬೇಕಾದ ಆಧಾರವನ್ನು ಇಂದು ಕೊಟ್ಟಿದ್ದಾರೆ. ಸಾರ್ವಜನಿಕರು ಇದನ್ನು ಒಪ್ಪುವಂತೆ ವಿನಂತಿ ಮಾಡಬೇಕು. ಒಪ್ಪದವರು ಏಕೆಂದು ಷರಾ ಬರೆದು ಹೇಳಬೇಕು. ಸರಿಯಿಲ್ಲವೆಂದು ಯಾರಾದರೂ ಸಾಬೀತು ಮಾಡಲಿ. ಅಲ್ಲಿಯವರೆಗೆ ಶಶಿಧರ್ ಚಿಕ್ಕ ಅವರ ವಾದವನ್ನು ಒಪ್ಪಲೇಬೇಕು. ತಲಕಾಡು ಗಂಗರ ಲಾಂಛನವನ್ನೇ ಆಧಾರವಾಗಿ ಇಟ್ಟುಕೊಂಡು ಮೈಸೂರಿನ ಅಂಬಾರಿ ರೂಪಿಸಲಾಗಿದೆ ಎಂದು ಹೇಳಿದರು.

ಮುಡುಕುತೊರೆಯಲ್ಲಿ ತಲಕಾಡು ಗಂಗರ ದೊರೆ ಶ್ರೀಪುರುಷನ ಸಮಾಧಿ ಸ್ಥಳವಿದ್ದು, ನಾವೆಲ್ಲಾ ದೇವಸ್ಥಾನಕ್ಕೆ ಹೋದಾಗ ಸಮಾಧಿಗೆ ಧೂಪ ಹಾಕಿ ಬರುತ್ತೇವೆ. ಆದರೆ ಜೀರ್ಣೋದ್ಧಾರಕ್ಕೆ ಮನವಿ ಸಲ್ಲಿಸಿದ್ದೆವು. ಕ್ರಮ ವಹಿಸುವ ಭರವಸೆಯೂ ಸಿಕ್ಕಿತ್ತು. ಅಷ್ಟರೊಳಗೆ ಒಂದು ಧರ್ಮದ ಬಗ್ಗೆ ಅತಿರೇಕದ ಅಭಿಮಾನ ಹೊಂದಿರುವ ಯುವಕರ ಗುಂಪು ಶ್ರೀಪುರುಷನ ಸಮಾಧಿಗೆ ಸಿಮೆಂಟ್ ಹಾಕಿ ಮಟ್ಟ ಮಾಡಿ ಹೋಗಿದ್ದಾರೆ.



ಮೈಸೂರಿನ ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಗಂಗರಾಜ ಮನೆತನಗಳ ಕುರಿತ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾಜಿ ಎಂಎಲ್‌ಸಿ ಡಿ.ಮಾದೇಗೌಡ ಮಾತನಾಡಿದರು.

ಈ ಬಗ್ಗೆ ದೂರು ನೀಡೋಣವೆಂದರೆ ಹೀಗೆ ಮಾಡಿರುವ ಹುಡುಗರು ಮುಗ್ಧರು. ಮತ್ತೊಂದೆಡೆ ಇದನ್ನು ರಾಜಕಾರಣಕ್ಕೆ ಬಳಸಿಕೊಳ್ಳಲಾಗುತ್ತದೆ ಎಂದು ಸುಮ್ಮನಾಗಬೇಕಾಯಿತು. ಈಗ ಕುರುಹುಗಳು ನಾಶವಾಗಿದ್ದು, ಸಮಾಧಿ ಅಗೆದು ಉತ್ಖನನ ಮಾಡದ ವಿನಾ ಏನೂ ದೊರೆಯುವುದಿಲ್ಲ ಎಂದರು.

ತಲಕಾಡಿನಲ್ಲಿ 1990ರಿಂದ ಎರಡು ಉತ್ಖನನ ನಡೆದಿವೆ. ಈ ಸಂಬಂಧ ವರದಿಯೂ ಬಂದಿದ್ದು, ಅದನ್ನು ಕನ್ನಡದಲ್ಲಿ ಪ್ರಕಟಿಸಿದರೆ ಸಾರ್ವಜನಿಕರಿಗೆ ಗಂಗರ ಕೊಡುಗೆ ಅರಿವಾಗಲಿದೆ. ತಲಕಾಡು ಗಂಗರ ಬಗ್ಗೆ ಇನ್ನು ಆಳವಾದ ಅಧ್ಯಯನ ನಡೆಯಬೇಕು. ಕೆಆರ್‌ಎಸ್ ಹಿಂಭಾಗದಲ್ಲಿ ಸೀತಾಪುರ ಮತ್ತು ರಾಮಪುರ ಎಂಬ ಸ್ಥಳಗಳಲ್ಲಿ, ಇಲ್ಲಿರುವ ಅಣೆಕಟ್ಟೆ ಅಧ್ಯಯನ ಮಾಡಿದರೆ ಅಣೆಕಟ್ಟೆ ಯಾವ ರೀತಿ ಕಟ್ಟಬೇಕು ಎಂಬ ತಂತ್ರಜ್ಞಾನ ತಿಳಿಯಬಹುದು. ಆದರೆ ತಂತ್ರಜ್ಞಾನ ಅಪ್‌ಗ್ರೇಡ್ ಆಗಿರುವ ವಿಚಾರ ಇಲ್ಲಿ ಬೇರೆಯಾಗುತ್ತದೆ. ತಲಕಾಡಿನ ಗಂಗರ ಕಾಲದಲ್ಲಿ ಹರಿಯುವ ನದಿ ನೀರು ತಡೆದು, ಕೃಷಿಗೆ ಬಳಸಿಕೊಳ್ಳುವ ಬಗ್ಗೆ ಚಿಕ್ಕ ಪ್ರಮಾಣದಲ್ಲಿ ಇದನ್ನು ಕಂಡುಹಿಡಿದಿದ್ದರು. ಕೆಆರ್‌ಎಸ್ ತಾಂತ್ರಿಕತೆಗೆ ತಲಕಾಡಿನ ಗಂಗರ ಈ ಅಣೆಕಟ್ಟು ಮೂಲವಾಗಿದೆ ಎಂದು ತಿಳಿಸಿದರು.

ಗಂಗರೇ ದಸರಾಗೆ ಮೂಲವೆಂದು ತಿಳಿಸುವುದು ನಮ್ಮ ಕರ್ತವ್ಯ

ವಿಚಾರ ಸಂಕಿರಣದ ಸಮಾರೋಪದಲ್ಲಿ ಡಿ.ಮಾದೇಗೌಡ

ಮೈಸೂರು,ಸೆ.11(ಪಿಎಂ)– ಮೈಸೂರು ದಸರಾ ಉತ್ಸವಕ್ಕೆ ಮೂಲ ಗಂಗರಸರು ಎಂಬುದನ್ನು ಇಡೀ ಜಗತ್ತಿಗೆ ತಿಳಿಸುವ ಕರ್ತವ್ಯ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಹೇಳಿದರು.

ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ಗಂಗರಸರ ಜಂಬೂಸವಾರಿ ಮತ್ತು ಮೈಸೂರು ಜಂಬೂಸವಾರಿ ಎರಡನ್ನೂ ಚಿತ್ರಸಹಿತ ಶಶಿಧರ್ ಚಿಕ್ಕ ಅವರು ಅದ್ಭುತವಾಗಿ ಸಾದರಪಡಿಸಿದರು. ನನ್ನನ್ನ ಸೇರಿದಂತೆ ಲಕ್ಷಾಂತರ ಜನ ಇಂದಿನ ವಿಶ್ವವಿಖ್ಯಾತ ಮೈಸೂರು ದಸರಾವು ವಿಜಯನಗರದ ಬಳುವಳಿ ಎಂದುಕೊಂಡಿದ್ದಾರೆ. ಆದರೆ ವಿಜಯನಗರ ಅರಸರಿಗೆ ಹೋಗಿದ್ದೇ ಗಂಗರಸರಿಂದ ಎಂಬ ಸತ್ಯವನ್ನು ಈ ವಿಚಾರ ಸಂಕಿರಣದಿಂದ ತಿಳಿದುಕೊಂಡಿದ್ದೇವೆ. ಇದನ್ನು ಇಡೀ ಜಗತ್ತಿಗೆ ತಿಳಿಸುವ ಕರ್ತವ್ಯ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು. ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಸಿ.ರಾಮೇಗೌಡ, ಇತಿಹಾಸ ತಜ್ಞ ಪ್ರೊ.ಎಂ.ವಿ.ಶ್ರೀನಿವಾಸ, ಮುಕ್ತ ವಿವಿ ಆಡಿಯೋ–ವಿಡಿಯೋ ವಿಭಾಗದ ಬಿ.ಸಿದ್ದೇಗೌಡ, ಮನೋವೈದ್ಯ ಡಾ.ಬಿ.ಎನ್.ರವೀಶ್, ಸಂಶೋಧಕ ಡಾ.ಮಂಜುಕುಮಾರ್ ಮತ್ತಿತರರು ಹಾಜರಿದ್ದರು.

ಇದಕ್ಕೂ ಮುನ್ನ ತಮ್ಮ ಸಂಶೋಧನಾ ವಿಷಯ ಮಂಡಿಸಿದ ಶಶಿಧರ್ ಚಿಕ್ಕ, ಹಲವು ದಶಕಗಳ ಹಿಂದೆ ಒಂದು ತಾಮ್ರದ ಪಟ್ಟ ಪ್ರಾಚ್ಯಸಂಶೋಧಕರಿಗೆ ದೊರೆತು ಅದನ್ನು ಅವರು 10ನೇ ಶತಮಾನದ ಗಂಗರ ಕಾಲದ್ದು ಎಂದು ಗುರುತಿಸಿದರು. ಅದರಲ್ಲಿ ಒಂದು ಆನೆ ಚಿತ್ರವಿದ್ದು, ಅದರ ಕೆಳಗಡೆ 'ಗಂಗಕಂದರ್ಪ' ಎಂದು ಹಳಗನ್ನಡದಲ್ಲಿ ನಮೂದಿಸಲಾಗಿದೆ. ಮೈಸೂರು ದಸರಾ ಜಂಬೂಸವಾರಿ ಮತ್ತು ತಾಮ್ರ ಪಟ್ಟಿಯಲ್ಲಿರುವ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಎರಡೂ ವಿಜಯೋತ್ಸವವನ್ನು ಸೂಚಿಸುತ್ತವೆ. ಪ್ರಾಯಶಃ ವಿಜಯನಗರ ಅರಸರು ತಲಕಾಡಿನ ಗಂಗರ ವಂಶಸ್ಥರಿಂದ ದಸರಾ ಆಚರಣೆಯ ಪರಂಪರೆಯನ್ನು ಪಡೆದಿರಬಹುದು. ಮತ್ತೆ ಅದನ್ನು ಮೈಸೂರು ಒಡೆಯರ್ ಮನೆತನದವರು ಮುಂದುವರೆಸಿರಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರಲ್ಲಿ ಹೈ ಲೈಫ್ ಬ್ರೈಡ್ಸ್ ಬೃಹತ್ ವಧು ವಸ್ತ್ರಗಳು, ಆಭರಣಗಳ ಪ್ರದರ್ಶನ, ಮಾರಾಟ ಮೇಳ



ಹೈ ಲೈಫ್ ಬ್ರೈಡ್ಸ್ ಬೃಹತ್ ವಧು ವಸ್ತ್ರಗಳು, ಆಭರಣಗಳ ಪ್ರದರ್ಶನ, ಮಾರಾಟ ಮೇಳಕ್ಕೆ ಬುಧವಾರ ಚಾಲನೆ ದೊರೆಯಿತು.

ಮೈಸೂರು, ಸೆ.11(ಜಿಎ)–ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಹೈ ಲೈಫ್ ವತಿಯಿಂದ ಆಯೋಜಿಸಿರುವ ಎರಡು ದಿನಗಳ ಹೈ ಲೈಫ್ ಬ್ರೈಡ್ಸ್ ಬೃಹತ್ ವಧು ವಸ್ತ್ರಗಳು ಮತ್ತು ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಬುಧವಾರ ಚಾಲನೆ ದೊರೆಯಿತು.

ಮೇಳದಲ್ಲಿ ಕರಕುಶಲತೆಗಳ ಗ್ಲಿಟ್ಜ್, ಟ್ಯಾಂಟಲೈಸಿಂಗ್ ಟ್ಯೂನಿಕ್ಸ್, ಚಿಕ್ ಕೇಪ್‌ಗಳು, ಸಿಜ್ಲಿಂಗ್ ಸಿಲ್ಕ್‌ನಲ್ಲಿ ಸೆಲೆಬ್ರೆಟಿ ಸ್ಟೈಲ್ ಜಾಕೆಟ್ ಮತ್ತು ಡ್ರೇಪ್‌ಗಳು, ಮೋಡಿ ಮಾಡುವ ಕಸೂತಿಯೊಂದಿಗಿನ ವಧುವಿನ ಉಡುಗೆಗಳು ಸೇರಿದಂತೆ ಅನೇಕ ಆಭರಣ ಮತ್ತು ಪರಿಕರಗಳು ಲಭ್ಯವಿದ್ದು, ಬೆಳಗ್ಗೆ 9ರಿಂದ ರಾತ್ರಿ 10ರವರೆಗೆ ಉಚಿತ ಪ್ರವೇಶವಿದೆ. ಆಯೋಜಕಿ ಶೋಮಿಕಾ ಎಸ್.ರಾವ್ ಮಾತನಾಡಿ, ಹೈ ಲೈಫ್ ಬ್ರೈಡ್ಸ್ ವಧು ಫ್ಯಾಷನ್‌ನ ಅತ್ಯುತ್ತಮತೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಆಗಿದೆ. ನಮ್ಮ ಈ ಸಂಗ್ರಹವು ಮೈಸೂರಿನ ವಧುಗಳ ಪರಂಪರೆಯ ಸೊಗಡನ್ನು ಮತ್ತು ಆಧುನಿಕತೆಯನ್ನು ಒಟ್ಟುಗೂಡಿಸಿದೆ ಎಂದರು.

ಎಕ್ಸಿಬಿಷನ್‌ನ ನಿರ್ದೇಶಕ ಪ್ಯಾಟ್ರಿಕ್ ಲಿಬೆರಾ ಮಾತನಾಡಿ, ಹೈ ಲೈಫ್ ಪ್ರದರ್ಶನವನ್ನು ಮೈಸೂರಿನಲ್ಲಿ ನಡೆಸುತ್ತಿರುವುದು ನಮ್ಮೆಲ್ಲರ ಹೆಮ್ಮೆ. ಮೈಸೂರಿನ ಸಂಸ್ಕೃತಿ ಮತ್ತು ಸೊಗಸಿನ ಮೆರಗು ಹೀಗೆ ಒಬ್ಬ ವಧುವಿನ ಕನಸುಗಳನ್ನು ಪೂರ್ಣಗೊಳಿಸುವ ಪ್ರದರ್ಶನವೇ ಹೈ ಲೈಫ್ ಬ್ರೈಡ್ಸ್ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಹೈ ಲೈಫ್ ಎಕ್ಸಿಬಿಷನ್‌ನ ಶ್ರೀಕಾಂತ್ ಎಸ್ ಮತ್ತು ಶುಭಾ ಅಚಯ್ಯ, ಡಾ.ಸೀಮಾ ಯೋಗಣ್ಣ, ಪದ್ಮಾವತಿ ಮಹೇಶ್, ಹರ್ಷಿದಾ ಹರಿಕುಮಾರ್, ಮುಕ್ತಾ ಸದಾನಂದ, ಕಾಮಿಯಾ ಶ್ರೀಧರ್, ಡಾ.ಪೂಜಾ ಜೋಷಿ ಇಗೂರ ಮತ್ತಿತರರು ಉಪಸ್ಥಿತರಿದ್ದರು.

ಪ್ರದೀಪ್‌ಕುಮಾರ್ ಹುಟ್ಟುಹಬ್ಬ ಆಚರಣೆ


ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯರು, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರಾದ ಎಂ.ಪ್ರದೀಪ್‌ಕುಮಾರ್ ಅವರನ್ನು ಹುಟ್ಟುಹಬ್ಬದ ಪ್ರಯುಕ್ತ ದಾರಿದೀಪ ಚಾರಿಟಬಲ್ ಟ್ರಸ್ಟ್‌ನ ಆವರಣದಲ್ಲಿ ಇಂಟರ್‌ನ್ಯಾಶನಲ್ ಲಿಂಗಾಯತ ಯೂತ್ ಫೋರಂ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಫೋರಂ ಅಧ್ಯಕ್ಷ ವಕೀಲ ಮಹದೇವಪ್ರಸಾದ್, ಸದಸ್ಯರಾದ ಎಸ್.ಲೋಕೇಶ್, ಹೆಚ್.ಎಸ್.ವಿರೇಶ್, ಜ್ಞಾನ ಪ್ರಾಪರ್ಟೀಸ್‌ನ ಸಿ.ಆರ್.ನಟರಾಜು, ಆರ್.ದೀಪು, ಕಟ್ಟಹಳ್ಳಿ ಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

ಲಡಾಖ್‌ನ ಲೇಹ್‌ಗೆ ಟ್ರೆಕ್ಕಿಂಗ್ ತೆರಳಿದ್ದ ಮೈಸೂರಿಗ ಸಾವು

18 ಸಾವಿರ ಅಡಿ ಎತ್ತರದಲ್ಲಿ ಉಸಿರಾಟ ಸಮಸ್ಯೆಗೆ ಬಲಿ

ಮೈಸೂರು, ಸೆ.11(ಆರ್‌ಕೆ)– ಮಹಾರಾಜ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಆರ್.ಎನ್.ಪದ್ಮನಾಭ ಅವರ ಪುತ್ರ, ನರೇನ್ ಕೌಶಿಕ್(44), ಟ್ರೆಕ್ಕಿಂಗ್ ತೆರಳಿದ್ದ ವೇಳೆ ಉಸಿರಾಟದ ತೊಂದರೆಯಿಂದ ಲಡಾಖ್‌ನ ಲೇಹ್‌ನಲ್ಲಿ ಸೆಪ್ಟೆಂಬರ್ 7ರಂದು ಮೃತಪಟ್ಟಿದ್ದಾರೆ.



ಸೆಪ್ಟೆಂಬರ್ 2 ರಂದು ಬೆಂಗಳೂರಿನಿಂದ ಸ್ನೇಹಿತರು, ಇಬ್ಬರು ವೈದ್ಯರು, ಇಬ್ಬರು ತರಬೇತುದಾರರೊಂದಿಗೆ ಟ್ರೆಕ್ಕಿಂಗ್‌ಗೆ ತೆರಳಿದ್ದರು. ಸೆಪ್ಟೆಂಬರ್ 7ರಂದು ಲೇಹ್ ಬಳಿ 18,000 ಮೀಟರ್ ಎತ್ತರದಲ್ಲಿ ಉಸಿರಾಟದ ತೊಂದರೆಯಿಂದ ನರೇನ್ ಸಾವಿಗೀಡಾಗಿದ್ದಾರೆ. ಸೆ.8ರಂದು ಸಂಜೆ ಅವರ ಕುಟುಂಬಕ್ಕೆ ಮಾಹಿತಿ ನೀಡಲಾಯಿತು. ನಂತರ ಮೃತದೇಹವನ್ನು ಹಸ್ತಾಂತರಿಸಲಾಗಿದೆ. ಸೆಪ್ಟೆಂಬರ್ 10ರಂದು ಬೆಳಿಗ್ಗೆ ಲೇಹ್‌ನಲ್ಲೇ ಅಂತಿಮ ವಿಧಿ–ವಿಧಾನಗಳನ್ನು ನೆರವೇರಿಸಲಾಗಿದೆ.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅವರು ಲೇಹ್‌ನ ಜಿಲ್ಲಾಧಿಕಾರಿ ಸಂತೋಷ್ ಸುಖದೇವ್ ಅವರೊಂದಿಗೆ ಮಾತುಕತೆ ನಡೆಸಿದ್ದರು.

ಲೇಹ್‌ನಲ್ಲೇ ಅಂತ್ಯಸಂಸ್ಕಾರ: 18 ಸಾವಿರ ಅಡಿ ಎತ್ತರ ಪ್ರದೇಶದಿಂದ ಮೃತದೇಹವನ್ನು ತರುವುದು ಸವಾಲಾಗಿತ್ತು. ಮೈಸೂರಿಗೆ ತರುವ ಬಗ್ಗೆಯೂ ಯೋಜಿಸಲಾಗಿತ್ತು. ಆದರೆ, ಶವವನ್ನು ಸ್ಥಳದಿಂದ ತಂದು ಶವಪರೀಕ್ಷೆಯ ನಂತರ ಕುಟುಂಬಕ್ಕೆ ಹಸ್ತಾಂತರಿಸುವಾಗ 72 ಗಂಟೆಗಳು ಕಳೆದಿದ್ದರಿಂದ ಅಂತಿಮ ವಿಧಿ–ವಿಧಾನಗಳನ್ನು ಲೇಹ್‌ನಲ್ಲಿಯೇ ನೆರವೇರಿಸಲು ಕುಟುಂಬ ನಿರ್ಧರಿಸಿತು.

ಸಿಆರ್‌ಪಿಎಫ್ ಐಜಿಪಿ ವಿಪುಲ್ ಕುಮಾರ್, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಲೇಹ್‌ನ ಜಿಲ್ಲಾ ವರಿಷ್ಠಾಧಿಕಾರಿ ಶ್ರುತಿ ಅರೋರಾ, ಬ್ರಿಗೇಡಿಯರ್ ಸೀತಾರಾಮ್ ಮತ್ತು ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ, ಅಂತಿಮ ಸಂಸ್ಕಾರವನ್ನು ಅಲ್ಲಿಯೇ ನಡೆಸಲಾಗಿದೆ.

ಮೃತ ನರೇನ್ ಕೌಶಿಕ್ ಅವರು ಬೆಂಗಳೂರಿನ ಜನರಲ್ ಎಲೆಕ್ಟ್ರಿಕಲ್ ಕಂಪನಿಯು (ಜಿಇ) ಉಪ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಮೈಸೂರಿನ ಎಸ್‌ಜೆಸಿಇ ಇಂಜಿನಿಯರ್ ಕಾಲೇಜಿನಲ್ಲಿ ಪಾಲಿಮರ್ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮೂರನೇ ರ್‍ಯಾಂಕ್ ಗಳಿಸಿದ್ದರು.

ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಪತ್ನಿ ರಾಧಿಕಾ, ಪುತ್ರಿ ವಾರುಣಿ, ತಂದೆ ಪ್ರೊ.ಆರ್.ಎನ್.ಪದ್ಮನಾಭ, ತಾಯಿ ನಾಗರತ್ನ ಪದ್ಮನಾಭ, ಆಸ್ಟ್ರೇಲಿಯಾದಲ್ಲಿ ಇಂಜಿನಿಯರ್ ಆಗಿರುವ ಸಹೋದರ ಪವನ್ ಕೌಶಿಕ್ ಅವರನ್ನು ಅಗಲಿದ್ದಾರೆ.

ಚೆನ್ನಾಗಿದ್ದ ರಸ್ತೆಗೆ ಮತ್ತೆ ಡಾಂಬರ್ ಭಾಗ್ಯ; ರೈಲ್ವೆ ನಿಲ್ದಾಣದ ಪಶ್ಚಿಮ ಗೇಟ್ ಬಂದ್

ಪ್ರಯಾಣಿಕರ ಪರಿಪಾಟಲು; ಅಧಿಕಾರಿಗಳ ಕಾರ್ಯವೈಖರಿಗೆ ಬೇಸರ

ಮೈಸೂರು, ಸೆ.11(ಎಂಕೆ)– ತೋರಿಕೆ, ಆಡಂಬರ, ನಟನೆ ಎಂಬುದು ಸದ್ಯಕ್ಕೆ ಮೈಸೂರು ರೈಲ್ವೆ ಅಧಿಕಾರಿಗಳ ಕಾರ್ಯವೈಖರಿಗೆ ಅನ್ವಯವಾಗುತ್ತದೆ...!

ರೈಲ್ವೆ ಮಿನಿಸ್ಟರ್ ಬರುತ್ತಾರೆಂಬ ಕಾರಣಕ್ಕೆ ಸುಸ್ಥಿತಿಯಲ್ಲಿದ್ದ ರಸ್ತೆಗೆ ಮರು ಡಾಂಬರೀಕರಣ ಮಾಡುತ್ತಿರುವ ರೈಲ್ವೆ ಅಧಿಕಾರಿಗಳು, ಪ್ರಯಾಣಿಕರಿಗೆ, ಸಾರ್ವಜನಿಕರಿಗೆ ತೊಂದರೆ ಕೊಡುವ ಚಾಳಿ ಮೈಗೂಡಿಸಿಕೊಂಡಿದ್ದಾರೆ. ರೈಲ್ವೆ ನಿಲ್ದಾಣದ ಹಿಂಭಾಗದ ಮ್ಯೂಸಿಯಂ ಪಕ್ಕದಲ್ಲಿರುವ (ಸಿಎಫ್‌ಟಿಆರ್‌ಐ ಎದುರು) ಹಾಗೂ ನೇರವಾಗಿ 6, 5 ಮತ್ತು 4ನೇ ಪ್ಲಾಟ್ ಫಾರಂ ಸಂಪರ್ಕಿಸುವ ರಸ್ತೆಗೆ ಬುಧವಾರ ಬೆಳಗ್ಗೆಯಿಂದಲೇ ದಿಢೀರ್ ಡಾಂಬರೀಕರಣಕ್ಕೆ ಮುಂದಾಗಿದ್ದರಿಂದ ಪ್ರಯಾಣಿಕರಿಗೆ ಕಿರಿಕಿರಿ ಉಂಟಾಯಿತು.

ಪ್ರತಿನಿತ್ಯ ಇದೇ ಮಾರ್ಗದಲ್ಲಿ ರೈಲ್ವೆ ನಿಲ್ದಾಣಕ್ಕೆ ಬರುತ್ತಿದ್ದ ಸಾವಿರಾರು ಪ್ರಯಾಣಿಕರು, ದಿಢೀರ್ ರಸ್ತೆ ಕಾಮಗಾರಿಯಿಂದ ಗೊಂದಲಕ್ಕೀಡಾದರಲ್ಲದೆ ರೈಲ್ವೆ ನಿಲ್ದಾಣದ ಮುಖ್ಯದ್ವಾರದಲ್ಲಿ ಉಂಟಾದ ವಾಹನ ಹಾಗೂ ಜನದಟ್ಟಣೆಯಿಂದ ಹೈರಾಣಾದರು. ನಂತರ ಟಿಕೆಟ್‌ಗಾಗಿ ಪರದಾಡುವಂತಾಯಿತು. ಕೆಲವರು ತಾವು ನಿತ್ಯ ಸಂಚರಿಸುತ್ತಿದ್ದ ಟ್ರೈನ್ ಮಿಸ್ ಮಾಡಿಕೊಂಡು ತಡವಾಗಿ ಮತ್ತೊಂದು ಟ್ರೈನ್‌ಗೆ ಹೋಗಬೇಕಾದ ಅನಿವಾರ್ಯ ಸ್ಥಿತಿ ಉಂಟಾಯಿತು.

ದೂರದ ಸ್ಥಳಗಳಿಗೆ ಪ್ರಯಾಣಿಸುವ ಶತಾಬ್ದಿ ಎಕ್ಸ್‌ಪ್ರೆಸ್, ಅಜ್ಮೀರ್ ಎಕ್ಸ್‌ಪ್ರೆಸ್, ನಿಜಾಮುದ್ದಿನ್ ಎಕ್ಸ್‌ಪ್ರೆಸ್, ಜೈಪುರ್ ಎಕ್ಸ್‌ಪ್ರೆಸ್, ವಾರಣಾಸಿ ಸೇರಿದಂತೆ ಮೈಸೂರಿನಿಂದ ರಾಜ್ಯದ ಹಾಗೂ ಹೊರರಾಜ್ಯಗಳ ಪ್ರಮುಖ ಸ್ಥಳಗಳಿಗೆ ಸಂಚರಿಸುವ ರೈಲುಗಾಡಿಗಳು ನಿಲ್ಲುವ 4, 5 ಮತ್ತು 6ನೇ ಪ್ಲಾಟ್‌ಫಾರಂಗೆ ತಲುಪಲು ಪರಿತಪಿಸುವಂತಾಯಿತು. ಪ್ರಯಾಣಿಕರು ಮಾತ್ರವಲ್ಲದೇ ಪ್ರವಾಸಿಗರೂ ಸಹ ತೊಂದರೆ ಅನುಭವಿಸುವಂತಾಯಿತು. ರೈಲ್ವೆ ಮ್ಯೂಸಿಯಂಗೆ ಬರುವ ಪ್ರವಾಸಿಗರು ಬಾಗಿಲವರೆಗೂ ಬಂದು ಮ್ಯೂಸಿಯಂ ಒಳಗೆ ಪ್ರವೇಶ ಪಡೆಯಲಾಗದೆ ವಾಪಸ್ ತೆರಳುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಗುಂಡಿ ಇಲ್ಲದೆ ಸಮತಟ್ಟಾಗಿದ್ದ ರಸ್ತೆಗೆ ದಿಢೀರ್ ಡಾಂಬರ್ ಸುರಿದು ಮಿನಿಸ್ಟರ್ ಮುಂದೆ ಶೋ ಕೊಡಲು ರೈಲ್ವೆ ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಗುಂಡಿಗೆ ತೇಪೆ ಹಚ್ಚುವುದನ್ನು ನೋಡಿದ್ದೇವೆ. ಆದರೆ, ಚೆನ್ನಾಗಿದ್ದ ರಸ್ತೆ ಮೇಲೆ ಮತ್ತೊಮ್ಮೆ ತೇಪೆ ಹಾಕುತ್ತಿರುವುದನ್ನು ಇಲ್ಲಿಯೇ ನೋಡಿದ್ದು. ಸಾರ್ವಜನಿಕರ ಹಣವನ್ನು ಪೋಲು ಮಾಡಿ, ಗುತ್ತಿಗೆದಾರರ ಜೇಬಿಗಿಳಿಸುವ ಪರಿ ಇದೇ ಇರಬಹುದು ಎಂದು ಪ್ರಯಾಣಿಕರು ಛೀಮಾರಿ ಹಾಕಿದರು.

ಡಾಂಬರ್ ಅಗತ್ಯವೇ ಇರಲಿಲ್ಲ: ರೈಲ್ವೆ ನಿಲ್ದಾಣದ ಹಿಂಭಾಗದ ರಸ್ತೆಗೆ ಡಾಂಬರ್ ಹಾಕುವ ಅಗತ್ಯವೇ ಇರಲಿಲ್ಲ. ರಸ್ತೆ ಚೆನ್ನಾಗಿತ್ತು. ರೈಲ್ವೆ ಮಿನಿಸ್ಟರ್ ಬರುತ್ತಾರೆ, ಬಂದು ವೀಕ್ಷಣೆ ಮಾಡುತ್ತಾರೆ ಎಂಬ ಕಾರಣಕ್ಕೆ ಇಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ತೋರಿಸಲು, ನಟನೆ ಮಾಡಲು ರೈಲ್ವೆ ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಎಂದು ಪ್ರಯಾಣಿಕರೊಬ್ಬರು 'ಮೈಸೂರು ಮಿತ್ರ'ನಲ್ಲಿ ದೂರಿದರು.

ಸಾಮಾನ್ಯವಾಗಿ ಜನಸಂದಣಿ ಹೆಚ್ಚಾಗಿರುವ ಮಾರ್ಗದಲ್ಲಿ ರಾತ್ರಿ ವೇಳೆ ಕಾಮಗಾರಿ ನಡೆಸುವುದನ್ನು ನೋಡಿದ್ದೇವೆ. ಆದರೆ, ತಮ್ಮ ತಮ್ಮ ಕೆಲಸ ಮುಗಿಸಿಕೊಂಡು ಪ್ರಯಾಣಿಕರು ಬರುವ ಹೊತ್ತಿನಲ್ಲಿ ಡಾಂಬರ್ ಹಾಕಲು ಮುಂದಾಗಿರುವುದು ಸರಿಯಲ್ಲ. ಮನಸ್ಸೋ ಇಚ್ಛೆ ಡಾಂಬರ್ ಸುರಿಯುತ್ತಿದ್ದಾರೆ. ಕೆ.ಆರ್.ಎಸ್ ರಸ್ತೆಯಲ್ಲೆಲ್ಲಾ ಡಾಂಬರ್ ಚೆಲ್ಲಾಡಿ ಬೇರೆ ವಾಹನಗಳಿಗೂ ತೊಂದರೆ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ಪ್ರವಾಸೋದ್ಯಮದ ಅಭಿವೃದ್ಧಿ ಹೇಗೆ: ಮಿನಿಸ್ಟರ್ ಮನವೊಲಿಸಲು ತೋರಿಕೆ ಕಾಮಗಾರಿ ನಡೆಸುವ ರೈಲ್ವೆ ಅಧಿಕಾರಿಗಳಿಂದ ಪ್ರವಾಸೋದ್ಯಮ ಅಭಿವೃದ್ಧಿ ಹೇಗೆ ಸಾಧ್ಯ. ಪ್ರವಾಸಿಗರು ಬರುವ ವೇಳೆಯೇ ರಸ್ತೆ ಬಂದ್ ಮಾಡಿದರೆ ಪ್ರವಾಸೋದ್ಯಮ ಬೆಳೆಯುವುದೇ ಎಂದು ಕೆಲವರು ಪ್ರಶ್ನಿಸಿದರು.

ಎಲ್ಲಾ ಶೋ ಅಪ್: ಮೈಸೂರು ರೈಲ್ವೆ ಅಧಿಕಾರಿಗಳು ಪ್ರಯಾಣಿಕರಿಗೆ ತೊಂದರೆ ಕೊಡುತ್ತಿರುವುದು ಹೊಸದಲ್ಲ. ಪ್ರತಿನಿತ್ಯ ಇದೇ ಮಾರ್ಗದಲ್ಲಿ ಬಂದು ಬೆಂಗಳೂರಿಗೆ ಹೋಗುತ್ತೇನೆ. ಇಂದು ಕೂಡ ಬೆಳಗ್ಗೆ ಹೋಗಿ ಮಧ್ಯಾಹ್ನ ಬರುವ ಹೊತ್ತಿಗೆ ಡಾಂಬರ್ ಹಾಕುತ್ತಿದ್ದಾರೆ. ಯಾವ ಪ್ರೀಪೈಡ್ ಆಟೋಗಳು ಇಲ್ಲ. ನಿಂತಿರುವ ಕೆಲ ಆಟೋ ಚಾಲಕರು ಎರಡು ಪಟ್ಟು ಹಣ ಕೇಳುತ್ತಿದ್ದಾರೆ. ಗೂಂಡಾಗಳ ರೀತಿಯಲ್ಲಿ ವರ್ತಿಸುತ್ತಾರೆ. ಬೇರೆ ದಾರಿ ಇಲ್ಲದೆ ಮೇನ್ ರೋಡ್‌ವರೆಗೂ ನಡೆದುಕೊಂಡು ಹೋಗಬೇಕು. ಇಲ್ಲಿನ ಅಧಿಕಾರಿಗಳದ್ದು ಬರೀ ಶೋ ಅಪ್ ಎಂದು ಜಯಲಕ್ಷ್ಮಿಪುರಂ ಹಿರಿಯ ನಾಗರಿಕರೊಬ್ಬರು ಬೇಸರ ವ್ಯಕ್ತಪಡಿಸಿದರು.


ಸುಸ್ಥಿತಿಯಲ್ಲಿದ್ದ ರೈಲ್ವೆ ನಿಲ್ದಾಣದ ಪಶ್ಚಿಮ ಗೇಟ್ ರಸ್ತೆಗೆ ಡಾಂಬರ್ ಹಾಕಿರುವುದು.

ಕ್ವಾಲಿಟಿ ಬರಲ್ವಂತೆ...!

ರಾತ್ರಿ ವೇಳೆ ರಸ್ತೆಗೆ ಡಾಂಬರ್ ಹಾಕೋದು ಕಷ್ಟ, ಕ್ವಾಲಿಟಿ ಬರಲ್ಲ. ಹಾಗಾಗಿ ಬೆಳಗ್ಗೆಯಿಂದ ರಸ್ತೆ ಬ್ಲಾಕ್ ಮಾಡಿ ಡಾಂಬರ್ ಹಾಕುತ್ತಿದ್ದೇವೆ. ರಸ್ತೆಯಲ್ಲಿ ಇಳಿಜಾರು ಇತ್ತು ಇದರಿಂದ ತೊಂದರೆಯಾಗಬಹುದು ಎಂದು ಸಮತಟ್ಟು ಮಾಡುತ್ತಿದ್ದೇವೆ ಆಟೋ, ಕಾರು, ಸ್ಕೂಟರ್‌ಗಳಲ್ಲಿ ಬರುವ ಪ್ರಯಾಣಿಕರನ್ನು ಮುಖ್ಯ ಗೇಟ್‌ಗೆ ಹೋಗಿ ಎಂದು ಹೇಳುತ್ತಿದ್ದೇವೆ ಎಂದು ಡಾಂಬರ್ ಹಾಕುವ ಕಾಮಗಾರಿ ಉಸ್ತುವಾರಿ ಸುಬ್ಬು ಹೇಳಿದರು.


ನಾಳೆ ಮೈಸೂರಿಗೆ ಕೇಂದ್ರ ಸಚಿವ ವಿ.ಸೋಮಣ್ಣ

ಮೈಸೂರು, ಸೆ.11–ಕೇಂದ್ರ ರೈಲ್ವೆ ಜಲ ಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಸೆ.13 ರಂದು ಬೆಳಗ್ಗೆ 8.30ಕ್ಕೆ ಮೈಸೂರು ನಗರಕ್ಕೆ ಆಗಮಿಸುತ್ತಿದ್ದಾರೆ.



ಅವರನ್ನು ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆ ಬಳಿ ಪಕ್ಷದ ಮುಖಂಡರು ಮತ್ತು ಅಭಿಮಾನಿಗಳು ಸ್ವಾಗತಿಸಲಿದ್ದಾರೆ. ಈ ಸಂದರ್ಭದಲ್ಲಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ವಿ.ಸೋಮಣ್ಣ ಅಭಿಮಾನಿ ಬಳಗ ಮೈಸೂರು, ಚಾಮರಾಜನಗರ ಜಿಲ್ಲೆಯ ಪದಾಧಿಕಾರಿಗಳು ಕೋರಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.09.2024 ಗುರುವಾರ, ಮಳೆ ನಕ್ಷತ್ರ: ಹುಬ್ಬ, 31.08.2024 ರಿಂದ 12.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ಮೂಲ, ರಾಹುಕಾಲ : ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಶ್ರೀಮತಿ ಸುಮಾ ವಸಂತ ಮತ್ತು ಸಂಗಡಿಗರಿಂದ ಭಕ್ತಿ ಗೀತೆಗಳು, ಸ್ಥಳ: ದೇವಸ್ಥಾನದ ಬಳಿ, ತ್ಯಾಗರಾಜ ವೃತ್ತ, ಕೆ.ಆರ್.ಮೊಹಲ್ಲಾ, ಸಂಜೆ 7 ಗಂಟೆಗೆ

■ **ಆಲ್ಜೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ:** ಚಾಮುಂಡಿಬೆಟ್ಟಕ್ಕೆ ಮರೆವಿನ ಕಾಯಿಲೆಯ ಜಾಗೃತಿಗಾಗಿ ಚಾರಣ, ನಮ್ಮ ನಡಿಗೆ ಆರೋಗ್ಯದೆಡೆಗೆ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು: ಇನ್ನರ್‌ವ್ಹೀಲ್ ಅಧ್ಯಕ್ಷೆ ಶ್ರೀಮತಿ ಪಲ್ಲವಿ ಅರುಣ್, ವಿಟಿಯು ಪ್ರಾದೇಶಿಕ ನಿರ್ದೇಶಕರಾದ ಡಾ.ಪಿ.ಸಂಧ್ಯಾ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಎಲ್.ಎನ್.ಶೆಣೈ, ಅಧ್ಯಕ್ಷತೆ: ಶಾರದಾ ವಿಲಾಸ ಫಾರ್ಮಸಿ ಕಾಲೇಜು ಅಧ್ಯಕ್ಷ ಡಾ.ಹನುಮಂತಾಚಾರ್ ಜೋಷಿ, ಸ್ಥಳ: ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಹೈ ಲೈಫ್ ಬ್ರೈಡ್ಸ್ :** ಬ್ರೈಡಲ್ ಕೌಚರ್, ಜ್ಯುವೆಲ್ಲರಿ, ಅಸೆಸ್ಸರೀಸ್, ದಿ ಫೈನೆಸ್ಟ್ ಬ್ರೈಡಲ್ ಎಕ್ಸಿಬಿಷನ್, ಸ್ಥಳ: ರ್‍ಯಾಡಿಸನ್ ಬ್ಲೂ ಫ್ಲಾಜಾ ಹೋಟೆಲ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ :** ಉಚಿತ ಸೈನಸೈಟಿಸ್ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10ರಿಂದ.

■ **ಮೈಸೂರು ಜಿಲ್ಲಾ ಮಡಿವಾಳರ ಸಂಘ :** ದಸರಾ ಅಂಬಾರಿ ಅರ್ಚಕ ಪ್ರಹ್ಲಾದರಾವ್ ಅವರಿಗೆ ಸನ್ಮಾನ ಸಮಾರಂಭ, ಸ್ಥಳ: ಜಲದರ್ಶಿನಿ ಅತಿಥಿ ಗೃಹ ಹೊಸ ಕಟ್ಟಡ, ಬೆಳಗ್ಗೆ 11ಕ್ಕೆ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ :** 44ನೇ ವರ್ಷದ ಗೌರಿ–ಗಣೇಶ ಹಬ್ಬದ ಪೂಜಾ ಮಹೋತ್ಸವ, ಸ್ಥಳ: ದೇವಸ್ಥಾನ, ವಿನಾಯಕನಗರ.

■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಂವಹನ ಸಮಾಚಾರ–ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಮ್, ಎಸ್.ಸಂಗೀತಾ, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕಲಾವತಿ ಅವಧೂತ್. ವಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಭಾಗವಹಿಸುವವರು: ಪ್ರಭುಗೌಡ ಐ.ಬಿ, ಉಪಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು, ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.30–ದೇವರನಾಮ–ಸಹನ. ಆರ್,12.45 ಚಿತ್ರಗೀತೆಗಳು, 1.20 ಭಾವಗೀತೆಗಳು–ರೂಪಾರಾವ್, ದೀಪಾರಾವ್, 4.00 ಜನಪದ ಸಂಗೀತ, 4.30 ರಸಮಂಜರಿ, 6.10 'ಸಂವಹನ ಸಮಾಚಾರ' ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಸಂಸ್ಥೆಗಳ ಅಭಿವೃದ್ಧಿಗೆ ಕೃಷಿ ಇಲಾಖೆಯ ಯೋಜನೆಗಳು. ಈ ಕುರಿತು ಮಂಡ್ಯ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ವಿ.ಎಸ್.ಅಶೋಕ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಯುವವಾಣಿ, 10.00 ನಾಟಕ: ದುರ್ಯೋಧನನ ದೂರ್ವಾಸಾತಿಥ್ಯ, ರಚನೆ: ಎಂ.ಎಸ್.ವೆಂಕಟರಾಮ್ ಕುಪ್ಪ, ನಿರ್ಮಾಣ: ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು

■ **ಸಮರ್ಥನ ಅಂಗವಿಕಲರ ಸಂಸ್ಥೆ :** ಸೈನ್ಸ್ ಲ್ಯಾಬ್ ಉದ್ಘಾಟನೆ, ಉಪಸ್ಥಿತರು: ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ಶಂಕರ ಗೌಡ ಪಾಟೀಲ್, ಸಮರ್ಥನ ಅಂಗವಿಕಲರ ಸಂಸ್ಥೆ ಶೈಕ್ಷಣಿಕ ವಿಭಾಗದ ಮುಖ್ಯಸ್ಥ ಗುರುರಾಘವೇಂದ್ರ, ಸಾಯಿರಂಗ ಶಿಕ್ಷಣ ಸಂಸ್ಥೆ ಅಧ್ಯಕ್ಷ ನಟರಾಜ, ಕಾರ್ಯದರ್ಶಿ ದಯಾನಂದ, ಸಮರ್ಥನ ಅಂಗವಿಕಲರ ಸಂಸ್ಥೆ ಮುಖ್ಯಸ್ಥ ಶಿವರಾಜು, ಸಾಯಿರಂಗ ವಿದ್ಯಾಸಂಸ್ಥೆ ಮುಖ್ಯೋಪಾಧ್ಯಾಯ ರಘುನಾಥ ಗೌಡ, ಸ್ಥಳ: ಸಾಯಿರಂಗ ವಿದ್ಯಾಸಂಸ್ಥೆಯ ಕಿವುಡು ಗಂಡು ಮಕ್ಕಳ ವಸತಿ ಶಾಲೆ, ಬನ್ನಿಮಂಟಪ, ಮಧ್ಯಾಹ್ನ 2ಕ್ಕೆ.

■ **ಎಸ್.ಪಿವಿಜಿಎಂಸಿ ಟ್ರಸ್ಟ್; ಪಾರಂಪರಿಕ ಸಂಗೀತೋತ್ಸವ,** 63ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ 6.30ರವರೆಗೆ ಗಮಕ ವಾಚನ ಕಾರ್ಯಕ್ರಮ, ಕಾವ್ಯ: ಶ್ರೀ ದತ್ತ ಭಾಗವತ ವಾಚನ: ವಿದುಷಿ ವಸಂತ ವೆಂಕಟೇಶ್, ವ್ಯಾಖ್ಯಾನ: ವಿದುಷಿ ಧರಿತ್ರೀ ಆನಂದರಾವ್, ಸಂಜೆ 6.45ಕ್ಕೆ ವಿದ್ವಾನ್ ಕಲ್ಯಾಣಪುರಂ ಎಸ್.ಅರವಿಂದ್–ಗಾಯನ, ವಿದ್ವಾನ್ ಎಚ್.ಎನ್.ಭಾಸ್ಕರ್–ವಯೋಲಿನ್, ವಿದ್ವಾನ್ ಕೆ.ಯು.ಜಯಚಂದ್ರ ರಾವ್–ಮೃದಂಗ, ವಿದ್ವಾನ್ ಬಿ.ಎಸ್.ಪುರುಷೋತ್ತಮ –ಖಂಜಿರಾ. ಸ್ಥಳ: ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಕ್ರಾಸ್, ವಿ.ವಿ.ಮೊಹಲ್ಲಾ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಭಾರತ ರತ್ನ ಡಾ. ಸರ್ ಎಂ. ವಿಶ್ವೇಶ್ವರಯ್ಯನವರ 163ನೇ ಜನ್ಮ ದಿನಾಚರಣೆ ಕುರಿತು ವಿಜ್ಞಾನಿ ಎ. ರಾಮಕೃಷ್ಣ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಸಂಜೆ 6 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 12 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 45 | ಸಂಚಿಕೆ: 147 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಗಣೇಶನ ವಿಸರ್ಜನೆ ವೇಳೆ ಕಲ್ಲು, ಬಾಟಲು, ಚಪ್ಪಲಿ, ಪೆಟ್ರೋಲ್ ಬಾಂಬ್ ತೂರಾಟ

ನಾಗಮಂಗಲ ಉದ್ವಿಗ್ನ

- ಪೊಲೀಸರು ಸೇರಿದಂತೆ ಹಲವರಿಗೆ ಗಾಯ
- ಹಲವು ವಾಹನಗಳು, ಅಂಗಡಿ–ಮುಂಗಟ್ಟಿಗೆ ಬೆಂಕಿ
- ಪೊಲೀಸರಿಂದ ಲಾಠಿ ಚಾರ್ಜ್, ಪರಿಸ್ಥಿತಿ ನಿಯಂತ್ರಣ
- ಸೆ.14ರವರೆಗೆ ನಾಗಮಂಗಲದಲ್ಲಿ ನಿಷೇಧಾಜ್ಞೆ









ನಾಗಮಂಗಲ, ಸೆ.11– ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಗಣೇಶೋತ್ಸವ ಮೆರವಣಿಗೆ ಮೇಲೆ ಯುವಕರ ಗುಂಪೊಂದು ಕಲ್ಲು, ಚಪ್ಪಲಿ, ಬಾಟಲು ಗಳ ತೂರಾಟ ನಡೆಸುವುದರೊಂದಿಗೆ ತಲ್ವಾರ್ ಝಳಪಿಸಿ, ಪೆಟ್ರೋಲ್ ಬಾಂಬ್ ಎಸೆದ ಘಟನೆ ನಾಗಮಂಗಲದಲ್ಲಿ ಇಂದು ರಾತ್ರಿ ನಡೆದಿದೆ. ಈ ವೇಳೆ ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದಾರೆ. ಇದರಿಂದಾಗಿ ನಾಗಮಂಗಲದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಮುನ್ನೆಚ್ಚರಿಕೆಯಾಗಿ ಸೆ.14ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದ್ದು, ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ಕಲ್ಲು ಹಾಗೂ ಬಾಟಲ್ ತೂರಾಟದಿಂದ ಸಬ್ ಇನ್ಸ್‌ಪೆಕ್ಟರ್ ರವಿಕುಮಾರ್ ಸೇರಿದಂತೆ ಹಲವು ಪೊಲೀಸರು ಹಾಗೂ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಯುವಕರು ಗಾಯಗೊಂಡಿದ್ದಾರೆ. ■ 10ನೇ ಪುಟಕ್ಕೆ

ಒಂದು ಸಮುದಾಯದ ಓಲೈಕೆ ಇಂಥ ಘಟನೆಗೆ ಕಾರಣ



ನವದೆಹಲಿ, ಸೆ.11– ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ಒಂದು ಸಮುದಾಯದ ಪುಂಡರು ನಡೆಸಿದ ದಾಳಿಯನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಖಂಡಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ನಡೆದಿರುವ ಘಟನೆಯನ್ನು ನಾನು ಉಗ್ರವಾಗಿ ಖಂಡಿಸುತ್ತೇನೆ ಎಂದು ತಿಳಿಸಿದ್ದಾರೆ. ಗಣಪತಿ ದೇವರ ಮೆರವಣಿಗೆಯಲ್ಲಿ ಶಾಂತಿಯುತವಾಗಿ ತೆರಳುತ್ತಿದ್ದ ಭಕ್ತರನ್ನು ಗುರಿ ಮಾಡಿ ಒಂದು ಸಮುದಾಯದ ■ 10ನೇ ಪುಟಕ್ಕೆ

ಸರ್ಕಾರ ಜಾಹೀರಾತು ನೀಡುವಲ್ಲಿ ತಾರತಮ್ಯ; 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ದನಿ

'ಎಕ್ಸ್' ಪೋಸ್ಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಧೋರಣೆಗೆ ಕಿಡಿ

Vijayendra Yediyurappa @B... · 1h

"ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್" ಮೈಸೂರಿನಿಂದ ಪ್ರಕಟವಾಗುತ್ತಿರುವ ದಶಕಗಳ ಇತಿಹಾಸದ ಜನಪ್ರಿಯ ಸೋದರ ಪತ್ರಿಕೆಗಳು. ಮೈಸೂರು ಭಾಗದಲ್ಲಿ ಬಹುದೊಡ್ಡ ಓದುಗ ಸಮುದಾಯವನ್ನು ಸೃಷ್ಟಿಸಿಕೊಂಡಿರುವ ಈ ಪತ್ರಿಕೆಗಳು ಮೈಸೂರು ಪರಂಪರೆಯ ರಾಯಭಾರಿಗಳಂತೆ ಕಾರ್ಯನಿರ್ವಹಿಸುವುದರ ಜತೆಗೇ ಪತ್ರಿಕಾ ಧರ್ಮದ ಬದ್ಧತೆಯನ್ನು ಕಾಪಾಡಿಕೊಂಡು ಬಂದಿವೆ. Show more





ಮೈಸೂರು, ಸೆ. 11–ರಾಜ್ಯ ಸರ್ಕಾರ 'ಮೈಸೂರು ಮಿತ್ರ' ಮತ್ತು ಸೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್'ಗೆ ಸರ್ಕಾರಿ ಜಾಹೀರಾತು ನೀಡುವುದರಲ್ಲಿ ತಾರತಮ್ಯ ಎಸಗುತ್ತಿರುವ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಿಡಿಕಾರಿ, ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮೈಸೂರಿನಿಂದ ಪ್ರಕಟವಾಗುತ್ತಿರುವ ದಶಕಗಳ ಇತಿಹಾಸದ ಜನಪ್ರಿಯ ಸೋದರ ಪತ್ರಿಕೆಗಳು. ಮೈಸೂರು ಭಾಗದಲ್ಲಿ ಬಹುದೊಡ್ಡ ಓದುಗ ಸಮುದಾಯವನ್ನು ಸೃಷ್ಟಿಸಿಕೊಂಡಿರುವ ಈ ಪತ್ರಿಕೆಗಳು ಮೈಸೂರು ಪರಂಪರೆಯ ರಾಯಭಾರಿಗಳಂತೆ ಕಾರ್ಯ ನಿರ್ವಹಿಸುವುದರ ಜೊತೆಗೆ ಪತ್ರಿಕಾ ಧರ್ಮದ ಬದ್ಧತೆಯನ್ನು ಕಾಪಾಡಿಕೊಂಡು ಬಂದಿವೆ ಎಂದು ವಿಜಯೇಂದ್ರ ತಿಳಿಸಿದ್ದಾರೆ.

ಸದ್ಯ ರಾಷ್ಟ್ರ ಮಟ್ಟದಲ್ಲಿ ಬಹುದೊಡ್ಡದಾಗಿ ಸದ್ದು ಮಾಡಿರುವ ಮೈಸೂರು ಮುಡಾ ಹಗರಣವನ್ನು ಹೊರ ತೆಗೆಯುವಲ್ಲಿ ಈ ಎರಡೂ ಪತ್ರಿಕೆಗಳು ಮಹತ್ವದ ಪಾತ್ರ ನಿರ್ವಹಿಸಿವೆ. ಇದರ ಜೊತೆ ಜೊತೆಗೇ ಸ್ಥಳೀಯ ಸಮಸ್ಯೆಗಳೂ ಹಾಗೂ ಸರ್ಕಾರದ ಹಳಿತಪ್ಪಿದ ಆಡಳಿತದ ನಡೆಯನ್ನು ಪಾರದರ್ಶಕವಾಗಿ ಜನರ ಮುಂದಿಡುವಲ್ಲಿ ನೈಜತೆ ಮೆರೆದಿವೆ ಎಂದು ತಮ್ಮ ಪೋಸ್ಟ್‌ನಲ್ಲಿ ಅವರು ಎರಡೂ ಪತ್ರಿಕೆಗಳ ಕಾರ್ಯವೈಖರಿ ಬಗ್ಗೆ ತಿಳಿಸಿದ್ದಾರೆ. ಹಗರಣಗಳ ಸರಮಾಲೆ ಹೊತ್ತ ಕಾಂಗ್ರೆಸ್ ಸರ್ಕಾರ ಈ ಸೋದರ ಪತ್ರಿಕೆಗಳ ಮೇಲೆ ತನ್ನ ಕೆಂಗಣ್ಣು ಬೀರಿ ಸರ್ಕಾರಿ ಜಾಹೀರಾತುಗಳನ್ನು ಈ ಪತ್ರಿಕೆಗಳಿಗೆ ಬಿಡುಗಡೆ ಮಾಡದಂತೆ ಅಲಿಖಿತ ನಿರ್ಬಂಧ ವಿಧಿಸಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರವಿದ್ದರೂ ಮಾಧ್ಯಮಗಳ ಟೀಕೆ–ಟಿಪ್ಪಣಿ ಹಾಗೂ ವರದಿಗಳನ್ನು ಹಳದಿ ಕಣ್ಣಿಂದ ನೋಡದೇ ಆತ್ಮಾವಲೋಕನದ ಮನಸ್ಥಿತಿಯಿಂದ ಸ್ವೀಕರಿಸುವುದು ಆದ್ಯತೆ ಹಾಗೂ ಔದಾರ್ಯವಾಗಬೇಕು. ಸಕಾರಾತ್ಮಕ ಅಂಶಗಳನ್ನು ಮಾತ್ರವೇ ನಿರೀಕ್ಷಿಸುವುದು, ನಕಾರಾತ್ಮಕ ಅಂಶಗಳನ್ನು ದ್ವೇಷದ ಕಣ್ಣುಗಳಿಂದ ದಿಟ್ಟಿಸುವುದು ಸರ್ಕಾರದ ಆರೋಗ್ಯಕರ ಮನಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ. ಬದಲಾಗಿ ನಿರಂಕುಶ ಪ್ರಭುತ್ವದ ಸಂಕೇತವನ್ನು ರವಾನಿಸುತ್ತದೆ. ತುರ್ತು ಪರಿಸ್ಥಿತಿಯ ಕರಾಳ ನೆರಳನ್ನು ಇನ್ನೂ ತೊರೆಯದಂತೆ ವರ್ತಿಸುತ್ತಿರುವ ಕಾಂಗ್ರೆಸ್ ಸರ್ಕಾರ, ರಾಜ್ಯದಲ್ಲಿ ■ 6ನೇ ಪುಟಕ್ಕೆ

ಮುಖ್ಯಮಂತ್ರಿಗಳ ಮೌಖಿಕ ಸೂಚನೆ; ನಿಯಮ ಉಲ್ಲಂಘಿಸಿ ವರುಣ, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಗಳಲ್ಲಿ

ಮುಡಾದಿಂದ 387 ಕೋಟಿಯ ಕಾಮಗಾರಿ

ದಾಖಲೆ ಸಮೇತ ಸಮಗ್ರ ವರದಿ ಸಲ್ಲಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ರಾಜ್ಯಪಾಲರ ಸೂಚನೆ

ಎಸ್.ಟಿ.ರವಿಕುಮಾರ್



ಗೆಹ್ಲೋಟ್



ಶಾಲಿನಿ

ಮೈಸೂರು, ಸೆ. 11– ರಾಜ್ಯವಷ್ಟೇ ಅಲ್ಲದೇ ದೇಶದಲ್ಲೇ ಸದ್ದು ಮಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಶೇ. 50:50ರ ಅನುಪಾತದಡಿ 14 ನಿವೇಶನ ನೀಡಿರುವ ಪ್ರಕರಣ ಸಂಬಂಧ ರಾಜ್ಯ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ಬೆನ್ನಲ್ಲೇ ಇದೀಗ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳ ನಡುವೆ ಮತ್ತೊಂದು ಕಡತ ಸಮರ ಆರಂಭವಾಗಿದೆ.

ಮುಖ್ಯಮಂತ್ರಿಗಳ ಮೌಖಿಕ ಆದೇಶದಂತೆ ಕರ್ನಾಟಕ ನಗರ ಅಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 15 ಮತ್ತು 25ರ ನಿಯಮಗಳನ್ನು ಗಾಳಿಗೆ ತೂರಿ ಸಿದ್ದರಾಮಯ್ಯ ಅವರ ಸ್ವಕ್ಷೇತ್ರವಾದ ವರುಣ ಮತ್ತು ಕಾಂಗ್ರೆಸ್ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡರು ಪ್ರತಿನಿಧಿಸುತ್ತಿರುವ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಬರೋಬ್ಬರಿ 387 ಕೋಟಿ ರೂ.ಗಳ ಕಾಮಗಾರಿಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕೈಗೆತ್ತಿಕೊಂಡಿದೆ ಎಂದು ಆರೋಪಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೃತ್ತ ನಗರ ಯೋಜನಾ ಸಹಾಯಕ ನಿರ್ದೇಶಕ ಹಾಗೂ ಮೈಸೂರು ಬೃಂದಾವನ ಬಡಾವಣೆ ನಿವಾಸಿ ಪಿ.ಎಸ್.ನಟರಾಜ್ ಆಗಸ್ಟ್ 27ರಂದು ರಾಜ್ಯಪಾಲರಿಗೆ ಲಿಖಿತ ದೂರು ನೀಡಿದ್ದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದ್ದರೂ, ಕೇವಲ ಈ ಎರಡೇ ಕ್ಷೇತ್ರಗಳಲ್ಲಿ ಬೃಹತ್ ಮೊತ್ತದ ಕಾಮಗಾರಿ ಕೈಗೊಂಡು ಅಧಿಕಾರ ದುರುಪ ಯೋಗಪಡಿಸಿಕೊಂಡಿರುವುದರ ವಿರುದ್ಧ ಸಿಬಿಐ ತನಿಖೆ ನಡೆಸಬೇಕೆಂದು ಕೋರಿದ ನಟರಾಜ್ ದೂರು ಅರ್ಜಿ ಪರಿಶೀಲಿಸಿದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಈ ಆರೋಪ ಗಂಭೀರ ಸ್ವರೂಪದ್ದಾಗಿದ್ದು, ಈ ಸಂಬಂದ ಅಗತ್ಯ ದಾಖಲೆಗಳೊಂದಿಗೆ ಶೀಘ್ರ ಸಮಗ್ರ ವರದಿ ಸಲ್ಲಿಸುವಂತೆ ಸೆಪ್ಟೆಂಬರ್ 5ರಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದು, ಸೂಚಿಸಿದ್ದಾರೆ.

ಮುಖ್ಯಮಂತ್ರಿಗಳ ಮೌಖಿಕ ಸೂಚನೆ ಮೇರೆಗೆ ವರುಣ ವಿಧಾನಸಭಾ ಕ್ಷೇತ್ರದ 24 ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ 2023ರ ಸೆ.6ರಂದು ■ 6ನೇ ಪುಟಕ್ಕೆ

ಡೌಟೇ ಬೇಡ...; ಪೂರ್ಣಾವಧಿಗೆ

ನಾನೇ ಮುಖ್ಯಮಂತ್ರಿ

ಬಿಜೆಪಿ ಆಡಳಿತಾವಧಿಯ ಭ್ರಷ್ಟಾಚಾರ ಹಗರಣಗಳಿಗೆ ಒಂದು ಗತಿ ಕಾಣಿಸ್ತೇನೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಘಂಟಾಘೋಷಣೆ
- ಬಿಜೆಪಿ ಅವಧಿಯ 21 ಪ್ರಮುಖ ಹಗರಣಗಳ ತನಿಖೆ
- ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸೋದು ಖಚಿತ
- ಬಿಜೆಪಿಯವರಂತೆ ನಾನು ದ್ವೇಷ ರಾಜಕಾರಣ ಮಾಡಲ್ಲ
- ಸಿಎಂ ಖುರ್ಚಿ ಖಾಲಿಯಾದರೆ ಅದಕ್ಕೆ ನಾವು ಅರ್ಹರಿದ್ದೇವೆ ಎಂದು ಕೆಲವರು ಹೇಳುತ್ತಿರುವುದರಲ್ಲಿ ತಪ್ಪಿಲ್ಲ



ಬೆಂಗಳೂರು, ಸೆ.11(ಕೆಎಂಶಿ)– ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಮುಗಿಸುವುದರಲ್ಲಿ ಯಾವುದೇ ಸಂಶಯ ಬೇಡ ಎಂದಿರುವ ಸಿದ್ದರಾಮಯ್ಯ, ಬಿಜೆಪಿ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರದ ಹಗರಣಗಳಿಗೆ ಗತಿ ಕಾಣಿಸುವುದಾಗಿ ಘೋಷಿಸಿದ್ದಾರೆ. ಬಿಜೆಪಿ ಮುಖಂಡರ ರೀತಿ ನಾವು ದ್ವೇಷ ರಾಜಕಾರಣ ಮಾಡುವುದಿಲ್ಲ. ಆದರೆ, ಅವರ ಆಡಳಿತಾವಧಿಯ 21 ಪ್ರಮುಖ ಹಗರಣಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವುದು ಖಚಿತ. ಮುಖ್ಯಮಂತ್ರಿ ■ 6ನೇ ಪುಟಕ್ಕೆ

ಇಂದು ಸಿಎಂ ಅರ್ಜಿಯ ವಿಚಾರಣೆ

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ರಾಜಭವನ ತಮ್ಮ ವಿರುದ್ಧ ನೀಡಿರುವ ಪ್ರಾಸಿಕ್ಯೂಷನ್ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿಯ ಮುಂದುವರೆದ ವಿಚಾರಣೆಯನ್ನು ಹೈಕೋರ್ಟ್ ನಾಳೆ ಮಧ್ಯಾಹ್ನ ಕೈಗೆತ್ತಿಕೊಳ್ಳಲಿದೆ.

ನ್ಯಾ. ಎಂ. ನಾಗಪ್ರಸನ್ನ ಅವರ ಪೀಠ ಈಗಾಗಲೇ ವಿಚಾರಣೆಗೆ ಸಂಬಂಧಿಸಿದ ವಾದ–ಪ್ರತಿವಾದ ಆಲಿಸಿದ್ದು, ನಾಳೆ ಅಂತಿಮ ಘಟ್ಟಕ್ಕೆ ಬರುವ ಸಾಧ್ಯತೆ ಇದೆ. ನ್ಯಾಯಮೂರ್ತಿಗಳು ಈಗಾಗಲೇ ಸೆ.12ಕ್ಕೆ ವಾದ–ಪ್ರತಿವಾದ ಮುಗಿಯಬೇಕು ಎಂದು ಮೌಖಿಕ ಸೂಚನೆ ನೀಡಿದ್ದಾರೆ.ಈ ಆದೇಶದ ಬೆನ್ನಲ್ಲೇ ಸಿಎಂ ಪರ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಅಭಿಷೇಕ್ ಮನು ಸಿಂಘ್ವಿ ಹಾಗೂ ಮಾಜಿ ಅಡ್ವೋಕೇಟ್ ಜನರಲ್ ರವಿವರ್ಮಕುಮಾರ್ ತಮ್ಮ ವಾದ ಮುಂದುವರೆಸಲಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಯಂಕ : ಕಾಲ ಕೆಟ್ಟೋಯ್ತು ಕಣೋ...
ಮಂಕ : ಯಾಕೋ, ಅಂಥದ್ದೇನಾಯ್ತು?
ಯಂಕ : ಎಷ್ಟು ಯತ್ನಿಸಿದರೂ ಅಂಗಡಿಯಲ್ಲಿ ಒಂದು ಶರ್ಟ್ ತೆಗಿಲಿಕೆ ಆಗ್ತಾನೇ ಇಲ್ಲ
ಮಂಕ : ಯಾಕೋ, ಬೆಲೆ ಜಾಸ್ತಿನಾ?
ಯಂಕ : ಅಲ್ಲಾ ಕಣೋ, ಅಂಗಡಿ ಸುತ್ತ ಕ್ಯಾಮರಾ ಜಾಸ್ತಿ!

ಮೈಸೂರು ಮಿತ್ರ

ಗುರುವಾರ, 12 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಜೀವನ ಅನ್ನೋದು ಸೋಲು ಗೆಲುವಿನ ಆಟ. ಗೆದ್ದವನಿಗೆ ಸೋಲಬಾರದೆಂಬ ಭಯ ಇದ್ದರೆ, ಸೋತವನಿಗೆ ಗೆಲ್ಲಲೇಬೇಕೆಂಬ ಛಲವಿರುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊಳೆಯುವುದೆಲ್ಲಾ ಚಿನ್ನವಲ್ಲ.

ನಿಮ್ಮ ಪತ್ರಗಳು

ಡಿಕೆಶಿ ಮೂಲೆಗುಂಪಾಗುತ್ತಿದ್ದಾರೆಯೇ?

ಮಾನ್ಯರೆ,

ಕಾಂಗ್ರೆಸ್ ಪಕ್ಷದಲ್ಲಿ ಮುಂದಿನ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಬಗ್ಗೆ ಹಸಿ ಬಿಸಿ ಚರ್ಚೆ ಪ್ರಾರಂಭವಾಗಿದ್ದು, ಇದು ಪಕ್ಷ, ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಾಕಷ್ಟು ಇರುಸುಮುರುಸು ಉಂಟು ಮಾಡುತ್ತಿದೆ. ಕಳೆದ ವರ್ಷ (2023) ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 136 ಸ್ಥಾನಗಳನ್ನು ಕಾಂಗ್ರೆಸ್ ಪಕ್ಷ ಗಳಿಸಿ, ನಿಚ್ಚಳ ಬಹುಮತ ಸಾಧಿಸಿದಾಗ ಮುಖ್ಯಮಂತ್ರಿ ಹುದ್ದೆಗೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ಭಾರಿ ಪೈಪೋಟಿ ನಡೆದು, ಅಂತಿಮವಾಗಿ ಪಕ್ಷದ ವರಿಷ್ಠರ ಮಧ್ಯಸ್ಥಿಕೆಯಿಂದ ಸಿದ್ದರಾಮಯ್ಯ ಎರಡನೆಯ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾದರು. ಅವರ ನಂತರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಅಲಿಖಿತ ಒಪ್ಪಂದ ಹೈಕಮಾಂಡ್ ಮಟ್ಟದಲ್ಲಿ ಏರ್ಪಟ್ಟಿದೆ ಎಂದು ಕೆಲವು ಕಾಂಗ್ರೆಸ್ ನಾಯಕರು ಆಗ ಹೇಳಿದ್ದರು. ಮುಡಾ ಹಗರಣದಿಂದ ಇದೀಗ ಪಕ್ಷ ಹಾಗೂ ಸರ್ಕಾರಕ್ಕೆ ತೀವ್ರ ರೀತಿಯ ಮುಜುಗರ ಉಂಟಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆಗೆ ಅನುಮತಿ ನೀಡಿದ ನಂತರ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ಸಾಕಷ್ಟು ಕುತೂಹಲ ಕೆರಳಿಸುತ್ತಿವೆ.

ಮುಂದಿನ ಮುಖ್ಯಮಂತ್ರಿ ಆಯ್ಕೆ ಬಗ್ಗೆ ಕೆಲವು ಸಚಿವರು ಈಗಾಗಲೇ ಬಹಿರಂಗವಾಗಿ ಹೇಳಿಕೆ ನೀಡುತ್ತಿದ್ದು, ಆ ಪೈಕಿ ಸತೀಶ್ ಜಾರಕಿಹೊಳಿಯವರ ಹೆಸರು ಮುಂಚೂಣಿಗೆ ಬಂದಿದೆ. ಗೃಹ ಸಚಿವ ಡಾ.ಪರಮೇಶ್ವರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಹೆಸರು ಕೇಳಿ ಬರುತ್ತಿದ್ದರೂ ಸಹ, ಸತೀಶ್ ಜಾರಕಿಹೊಳಿಯವರ ಹೆಸರು ಪ್ರಬಲವಾಗಿ ಕೇಳಿ ಬರುತ್ತಿದೆ. ಒಂದು ವೇಳೆ ಮುಡಾ ಹಗರಣಕ್ಕೆ ಸಂಬಂಧಿಸಿದ ಹಾಗೆ, ರಾಜ್ಯ ಹೈಕೋರ್ಟ್ ನೀಡುವ ತೀರ್ಪು ಸಿದ್ದರಾಮಯ್ಯನವರ ವಿರುದ್ಧ ಬಂದರೆ, ಅಂತಹ ಪರಿಸ್ಥಿತಿ ಎದುರಿಸಲು ಸ್ವತಃ ಪಕ್ಷದ ಹಿರಿಯ ನಾಯಕರೇ ಒಂದು ಪರ್ಯಾಯ ಸೂತ್ರ ರಚಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ಮುಖ್ಯಮಂತ್ರಿ ಹುದ್ದೆಗೆ ಡಿಕೆಶಿ ಹೆಸರನ್ನು ಯಾರೂ ಪ್ರಸ್ತಾಪಿಸದಿರುವುದು ಸೋಜಿಗದ ಸಂಗತಿ. ಇದರಿಂದ ಬೇಸತ್ತು ಡಿಕೆಶಿ ವಿದೇಶ ಯಾತ್ರೆ ಕೈಗೊಂಡಿದ್ದಾರೆ ಎಂದು ಅರ್ಥೈಸಲಾಗುತ್ತಿದೆ. ಸದ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲದಿರುವುದರಿಂದ ಆ ಬಗ್ಗೆ ಚರ್ಚೆ ನಡೆಸುವುದು ಪಕ್ಷ ಮತ್ತು ಸರ್ಕಾರದ ಮೇಲೆ ಗಂಭೀರ ಪರಿಣಾಮ ಉಂಟಾಗಬಹುದು. ವಿರೋಧ ಪಕ್ಷಗಳಿಗೆ ಸರ್ಕಾರದ ವಿರುದ್ಧ ಹರಿಹಾಯಲು ಮತ್ತೊಂದು ಅಸ್ತ್ರ ನೀಡಿದಂತಾಗುತ್ತದೆ. ಈ ಎಲ್ಲಾ ಬೆಳವಣಿಗೆಗಳ ಮಧ್ಯೆ ಡಿಕೆಶಿ ಮಾತ್ರ ಮೂಲೆಗೆ ಸರಿದವರಂತೆ ಕಂಡು ಬರುತ್ತಿರುವುದು ಮಹತ್ವದ ಬೆಳವಣಿಗೆಯಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಅತಂತ್ರ ಸ್ಥಿತಿಯಲ್ಲಿ ವಿಜಯನಗರ 4ನೇ ಹಂತ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ ಅತ್ಯಂತ ದೊಡ್ಡ ಬಡಾವಣೆ. ಸುಮಾರು 13 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಹೊಂದಿರುವ ಬಡಾವಣೆ. ಈ ಬಡಾವಣೆಯನ್ನು ಈವರೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವೇ ನಿರ್ವಹಣೆ ಮಾಡುತ್ತಿತ್ತು. ರಸ್ತೆ, ಯುಜಿಡಿ, ಕುಡಿಯುವ ನೀರು, ಬೀದಿದೀಪ ಹಾಗೂ ಸ್ವಚ್ಛತೆ ಇತ್ಯಾದಿ. ಪ್ರಸ್ತುತ ಈ ಬಡಾವಣೆಯನ್ನು ಹೂಟಗಳ್ಳಿ ನಗರಸಭೆ ವ್ಯಾಪ್ತಿಗೆ ಸೇರಿಸಲಾಗಿದೆ. ಆದರೆ ಅಧಿಕೃತವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹೂಟಗಳ್ಳಿ ನಗರಸಭೆಗೆ ಇನ್ನೂ ಹಸ್ತಾಂತರವಾಗಿಲ್ಲ. ಈ ಬಡಾವಣೆಯ ಕೆಲವು ಭಾಗಗಳಲ್ಲಿ 10 ಸಾವಿರ, 11 ಸಾವಿರ ಬೆಲ್ಟ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಮೂರು ದಿನಕ್ಕೊಮ್ಮೆ ನೀರು ಬಿಡುತ್ತಾರೆ. ಹಬ್ಬ ಹರಿದಿನಗಳಲ್ಲಿ ಹಾಗೂ ಇತರೆ ದಿನಗಳಲ್ಲಿಯೂ ಕೆಲವರಿಗೆ ನೀರು ಬಾರದೆ ಟ್ಯಾಂಕರ್‌ಗಳಲ್ಲಿ ಹಣ ಕೊಟ್ಟು ನೀರು ಹಾಕಿಸುತ್ತಿದ್ದೇವೆ. ಈ ಭಾಗಕ್ಕೆ ಪೂರ್ಣ ಪ್ರಮಾಣದಲ್ಲಿ ನೀರು ಪೂರೈಸಲು ಕೊಳವೆ ಬಾವಿಗಳ ಅವಶ್ಯಕತೆ ಇರುತ್ತದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳನ್ನು ಕೇಳಿದರೆ ಬಡಾವಣೆ ಅಭಿವೃದ್ಧಿಪಡಿಸುವುದಷ್ಟೆ ಮುಡಾ ಕೆಲಸ. ನಿರ್ವಹಣೆ ಹೂಟಗಳ್ಳಿ ನಗರಸಭೆಗೆ ಸೇರಿದ್ದು. ಆ ಕಾರಣ ಬೋರ್‌ವೆಲ್ ತೆಗೆಸಲು ನಿಯಮದಲ್ಲಿ ಅವಕಾಶವಿಲ್ಲ ಎನ್ನುತ್ತಾರೆ. ಪ್ರಸ್ತುತ ಮುಡಾದವರು ಕಸ ವಿಲೇವಾರಿಯನ್ನು ಮಾಡುತ್ತಿಲ್ಲ. ಕೋರಿಕೆ ಮೇರೆಗೆ ಹೂಟಗಳ್ಳಿ ನಗರಸಭೆಯವರೇ ಕೆಲ ದಿನಗಳಿಂದ ಕಸ ವಿಲೇವಾರಿ ಮಾಡುತ್ತಿದ್ದಾರೆ. ಹೂಟಗಳ್ಳಿ ನಗರಸಭೆಗೆ ಈ ಬಡಾವಣೆ ಹಸ್ತಾಂತರಿಸುವವರೆಗೆ ಮುಡಾವೇ ನಿರ್ವಹಣೆ ಮಾಡಬೇಕು. ಇದು ನಿಯಮ. ಹೀಗಿದ್ದು ನಗರಾಭಿವೃದ್ಧಿ ಇಲಾಖೆಯಿಂದ ಆದೇಶ ಬಂದಿದೆ. ನಿರ್ವಹಣೆ ಮಾಡುವಂತಿಲ್ಲ ಎಂದು ಕೈಚೆಲ್ಲಿ ಕುಳಿತರೆ ಬಡಾವಣೆ ಜನ ನರಕ ಅನುಭವಿಸಬೇಕೆ? ಜನ ರೊಚ್ಚಿಗೇಳುವ ಮುನ್ನ ಬಡಾವಣೆ ಸಮಸ್ಯೆ ಬಗೆಹರಿಸಿ.

ಹೀಗಾಗಿ ಈ ಬಡಾವಣೆಯಲ್ಲಿ ಕುಡಿಯುವ ನೀರಿಗೆ ತತ್ವಾರ, ಕೆಲ ಭಾಗಗಳಲ್ಲಿ ರಸ್ತೆ ಡಾಂಬರೀಕರಣವಾಗಿಲ್ಲ. ರಸ್ತೆ ಪಕ್ಕ ಗಿಡಗಂಟಿಗಳು ಬೆಳೆದು ತಿರುವು ರಸ್ತೆಗಳಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಪಾರ್ಕ್‌ಗಳು ಸ್ವಚ್ಛವಾಗಿಲ್ಲ. ಮೂಲಭೂತ ಸೌಲಭ್ಯಗಳಾದ ಸರ್ಕಾರಿ ಶಾಲೆ, ಆರೋಗ್ಯ ಕೇಂದ್ರ, ಸಾರ್ವಜನಿಕ ಗ್ರಂಥಾಲಯ, ಹಾಪ್‌ಕಾಮ್ಸ್ ಇತ್ಯಾದಿ ಯಾವುದೂ ಆಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಭಾಗದ ಶಾಸಕರು ಈ ಬಡಾವಣೆಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಈ ಸಮಸ್ಯೆಗಳನ್ನು ಬಗೆಹರಿಸಬೇಕಾಗಿ ಮನವಿ.

–ಬಿ.ಜಿ. ರಂಗೇಗೌಡ, ಮೈಸೂರು.

ಸಾಹಿತಿ–ಕವಿ!

ಮಾನ್ಯರೆ,

ಪತ್ರಿಕಾ ವಿದ್ಯಮಾನವೊಂದು ನನಗೆ ಆಶ್ಚರ್ಯಕರವಾಗಿದೆ. ನಾಲ್ಕಾರು ಕವನಗಳನ್ನು ಬರೆದವರನ್ನು (ಖ್ಯಾತ) ಕವಿ ಎಂದು ಕರೆಯುವುದು. ವಿಪರ್ಯಾಸವೆಂದರೆ, ನಾನು ಕಾವ್ಯ ಕ್ಷೇತ್ರದಲ್ಲೂ ವಿಪುಲ ಕೃಷಿ ಮಾಡಿದ್ದರೂ, ನನ್ನನ್ನು 'ಸಾಹಿತಿ' ಎಂದು ಕರೆಯಲಾಗುತ್ತದೆ. 'ಕವಿ' ಎಂದಲ್ಲ! (ಸಾಹಿತಿಯಲ್ಲಿ ಕವಿ ಅಂತರ್ಗತ ಎನ್ನುವುದು ಬೇರೆ ಮಾತು). ಹಾಗೆ ನೋಡಿದರೆ, ನನ್ನನ್ನು ಕವಿಯೆಂದು ಗುರುತಿಸಿ ಎತ್ತಿ ಹಿಡಿದದ್ದು ಶಿವಮೊಗ್ಗದ ಕರ್ನಾಟಕ ಸಂಘ: ಪ್ರತಿಷ್ಠಿತ ದ.ರಾ ಬೇಂದ್ರೆ ಕಾವ್ಯ ಪ್ರಶಸ್ತಿಯನ್ನು ನೀಡುವುದರ ಮೂಲಕ !

ನನಗೆ ಸೀಮಿತವಲ್ಲದ ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿಗಳು ಸಂದಿರುವುದು ಸಮಾಧಾನಕರ (ನೃಪತುಂಗನೆ ಚಕ್ರವರ್ತಿ, ಪಂಪನಲ್ಲಿ ಮುಖ್ಯಮಂತ್ರಿ' ಎಂಬ ಕುವೆಂಪು ಅವರ ಉಕ್ತಿ ಸ್ಮರಣೀಯ).

ಒಂದು ತಿದ್ದುಪಡಿ : "ಗುರುವೇ ನಮಃ" ಎನ್ನುವುದು ತಪ್ಪು. ಅದು ಕನ್ನಡವಲ್ಲ, ಸಂಸ್ಕೃತವಾದ್ದರಿಂದ 'ಗುರವೇ' ಎಂಬುದು ಸರಿಯಾದ ರೂಪ.

–ಸಿಪಿಕೆ, ಸಾಹಿತಿಗಳು, ಮೈಸೂರು.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ಕರ್ನಾಟಕದ ಶಿಲ್ಪ ಕಲಾ ವೈಭವದ ರೂವಾರಿಗಳು...





> "ಪ್ರಪಂಚದಲ್ಲಿ ಭಾರತಕ್ಕೆ ಹೆಗ್ಗುರುತನ್ನು ನೀಡಿರುವ ದೇವಳಗಳು, ಇತರ ರಚನೆಗಳ ಬಗ್ಗೆ ಮಾತನಾಡುವಾಗ ಸಾಮಾನ್ಯವಾಗಿ ಆ ದೇವಸ್ಥಾನಗಳನ್ನು ನಿರ್ಮಿಸಿದ ರಾಜಮಹಾರಾಜರ ಬಗ್ಗೆ ಮಾತನಾಡುತ್ತೇವೆಯೇ ಹೊರತು, ಅಷ್ಟು ಅದ್ಭುತವಾಗಿ ಕೆತ್ತನೆ ಮಾಡಿದ ಶಿಲ್ಪಿಯ ಬಗ್ಗೆ ಯಾರೂ ಮಾತನಾಡುವುದೇ ಇಲ್ಲ. ಕರ್ನಾಟಕದಲ್ಲೂ ಜಕಣಾಚಾರಿ ಅವರ ಮಗ ಡಂಕಣನು ಸ್ವಲ್ಪ ಪ್ರಸಿದ್ಧರೆನ್ನಬಹುದು. ಅವರನ್ನು ಬಿಟ್ಟರೆ, ಈ ನಾಡಿನಲ್ಲಿ ಆಗಿ ಹೋದ, ಈ ನಾಡಿಗೆ ಅದ್ಭುತವಾದ ರಚನೆಗಳನ್ನು ನೀಡಿದ ಶಿಲ್ಪಿಗಳ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲದಿರುವುದು ನಿಜಕ್ಕೂ ವಿಷಾದನೀಯ, ದುರ್ದೈವ.


ಭಾರತದ ಬಗ್ಗೆ ಮಾತು ಬಂದಾಗಲ್ಲೆಲ್ಲಾ ಮೊದಲು ಪ್ರಸ್ತಾಪವಾಗುವುದು ಭಾರತದ ಅದ್ಭುತ ಶಿಲ್ಪಕಲೆಯ ಬಗ್ಗೆ. ಭಾರತದ ನಾಲ್ಕೂ ದಿಕ್ಕುಗಳಲ್ಲಿರುವ ದೇವಸ್ಥಾನಗಳು, ಬಸದಿಗಳು, ಸ್ತೂಪಗಳು, ನಿಷಧಿಗಳು, ಶಾಸನಗಳು, ವೀರಗಲ್ಲುಗಳು, ಸ್ಮಾರಕಗಳು ಭಾರತದ ಅಸಾಮಾನ್ಯತೆಯನ್ನು ವಿಶ್ವ ಮಟ್ಟದಲ್ಲಿ ಎತ್ತಿಹಿಡಿಯುತ್ತವೆ. ಕೊನಾರ್ಕಿನ ಸೂರ್ಯ ದೇವಾಲಯ, ಪುರಿಯ ಜಗನ್ನಾಥನ ಮಂದಿರ, ಖಜುರಾಹೋನ ಅಪ್ರತಿಮ ಶಿಲ್ಪಗಳು, ಆಂಧ್ರ-ತಮಿಳುನಾಡಿನ ಬೃಹತ್ ಸುಂದರ ದೇವಸ್ಥಾನಗಳು, ಕೇರಳದ ವಿಶಿಷ್ಟ ಶೈಲಿಯ ದೇವಳಗಳು ಇನ್ನು ಕರ್ನಾಟಕವಂತೂ ಶಿಲ್ಪಕಲೆಯ ತೊಟ್ಟಿಲು.

**ಬಾಗಿಲೊಳು ಕೈಮುಗಿದು
ಒಳಗೆ ಬಾ ಯಾತ್ರಿಕನೇ
ಶಿಲೆಯಲ್ಲವೀ ಗುಡಿಯು
ಕಲೆಯ ಬಲೆಯು**

ಹೀಗೆ ರಸಋಷಿ ಕುವೆಂಪು ಅವರ ಉದ್ಗಾರಕ್ಕೆ ಪ್ರೇರಣೆಯಾದ ಸೋಮನಾಥಪುರ, ಸಾವಿರ ವರ್ಷಗಳ ಮಗು ಎಂದು ಕುವೆಂಪು ಅವರಿಂದಲೇ ಕರೆಸಿಕೊಂಡ ಗೊಮ್ಮಟ, ಅಂತಃಪುರ ಗೀತೆಗಳಿಗೆ ಡಿವಿಜಿ ಅವರಿಗೆ ಸ್ಫೂರ್ತಿ ನೀಡಿದ ಸಾಲಭಂಜಿಕೆಯರನ್ನೊಳಗೊಂಡ ಬೇಲೂರಿನ ಚೆನ್ನಕೇಶವ ದೇವಾಲಯ, ಬಾದಾಮಿ, ಪಟ್ಟದಕಲ್ಲುಗಳ ಗುಹಾಂತರ ದೇವಾಲಯಗಳು, ಭಗ್ನವಾಗಿ ನಿಂತಿದ್ದರೂ ಮನಸೂರೆಗೊಳ್ಳುವ ಹಂಪಿ, ಬೆಳವಾಡಿ– ಅಮೃತಾಪುರ ದೇವಳಗಳು, ಬಳ್ಳಿಗಾವೆ, ಲಕ್ಕುಂಡಿ, ಕಿಕ್ಕೇರಿ, ಮೊಸಳೆ, ನಾಗಮಂಗಲ, ಹಳೇಬೀಡು, ಒಂದೇ... ಎರಡೇ... ಚಿಕ್ಕ ಚಿಕ್ಕ ಹಳ್ಳಿಗಳಲ್ಲೂ ಮೂಗಿನ ಮೇಲೆ ಬೆರಳಿಡುವಂತಹ ರಚನೆಗಳು.

ಈ ನಿರ್ಮಾಣಗಳು ತಮ್ಮಲ್ಲಿ ಹುದುಗಿಸಿಕೊಂಡಿರುವ ವಿಷಯ ವಿಜ್ಞಾನ, ತಂತ್ರಜ್ಞಾನಗಳನ್ನು ನಾವಿನ್ನೂ ಬೇಧಿಸಲಾಗಿಲ್ಲ. ಬೇಲೂರು, ಹಳೇಬೀಡುಗಳ ದೇವಸ್ಥಾನಗಳ ಕಂಬಗಳ ನುಣುಪು ಲೇಥ್ ತಂತ್ರಜ್ಞಾನದಿಂದ ಮಾತ್ರ ಸಾಧ್ಯ ಎಂದು ಆಧುನಿಕ ವಿದ್ವಾಂಸರು ಹೇಳುತ್ತಾರೆ. ಆ ಕಾಲದಲ್ಲಿ ಹೇಗೆ ಸಾಧ್ಯವಾಯಿತು? ಅಷ್ಟು ಎತ್ತರವಿರುವ ಬೃಹತ್ ಕಂಬಗಳನ್ನು ಹೇಗೆ ನಿಲ್ಲಿಸಿದರು? ಬೃಹದೀಶ್ವರ ದೇವಸ್ಥಾನದ ಗೋಪುರದ ತುದಿಯಲ್ಲಿರುವ ಟನ್‌ಗಟ್ಟಲೆ ತೂಗುವ ಕಲ್ಲನ್ನು ಅಲ್ಲಿಗೆ ಹೇಗೆ ಒಯ್ದರು?

ಹೀಗೆ ಪ್ರಪಂಚದಲ್ಲಿ ಭಾರತಕ್ಕೆ ಹೆಗ್ಗುರುತನ್ನು ನೀಡಿರುವ ದೇವಳಗಳು, ಇತರ ರಚನೆಗಳ ಬಗ್ಗೆ ಮಾತನಾಡುವಾಗ ಸಾಮಾನ್ಯ ವಾಗಿ ಆ ದೇವಸ್ಥಾನಗಳನ್ನು ನಿರ್ಮಿಸಿದ ರಾಜ ಮಹಾರಾಜರ ಬಗ್ಗೆ ಮಾತನಾಡುತ್ತೇವೆಯೇ ಹೊರತು, ಅಷ್ಟು ಅದ್ಭುತವಾಗಿ ಕೆತ್ತನೆ ಮಾಡಿದ ಶಿಲ್ಪಿಯ ಬಗ್ಗೆ ಯಾರೂ ಮಾತನಾಡುವುದೇ ಇಲ್ಲ. ಕರ್ನಾಟಕದಲ್ಲಿಯೂ, ಜಕಣಾಚಾರಿ ಅವರ ಮಗ ಡಂಕಣನು ಸ್ವಲ್ಪ ಪ್ರಸಿದ್ಧರೆನ್ನಬಹುದು. ಅವರನ್ನು ಬಿಟ್ಟರೆ, ಈ ನಾಡಿನಲ್ಲಿ ಆಗಿ ಹೋದ, ಈ ನಾಡಿಗೆ ಅದ್ಭುತವಾದ ರಚನೆಗಳನ್ನು ನೀಡಿದ ಶಿಲ್ಪಿಗಳ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲದಿರುವುದು ನಿಜಕ್ಕೂ ವಿಷಾದನೀಯ ಮತ್ತು ದುರ್ದೈವ.





ಷ.ಶೆಟ್ಟರ್

ಇದಕ್ಕೆ ನಮ್ಮ ಅವಜ್ಞೆ ಮಾತ್ರವಲ್ಲ, ಶಿಲ್ಪಿಗಳ ಅನಾಮಿಕಪ್ರಿಯತೆಯೂ ಕಾರಣ ಎಂಬುದು ಸ್ವಲ್ಪಮಟ್ಟಿಗೆ ನಮ್ಮ ಅಪರಾಧೀ ಪ್ರಜ್ಞೆಯನ್ನು ಕಡಿಮೆ ಮಾಡಬಹುದು. ವಿಶ್ವಕರ್ಮ ಜಯಂತಿ ಸೆಪ್ಟೆಂಬರ್ 17ಕ್ಕೆ ರಾಷ್ಟ್ರಾದ್ಯಂತ ಆಚರಿಸಲ್ಪಡುತ್ತಿದೆ. ಆ ಹಿನ್ನೆಲೆಯಲ್ಲಿ ಕರ್ನಾಟಕದ ಅಸಂಖ್ಯ ಶಿಲ್ಪಿಗಳಲ್ಲಿ ಕೆಲವರ ಬಗ್ಗೆ ಈ ಲೇಖನದಲ್ಲಿ ಹೇಳುವ ಪುಟ್ಟ ಪ್ರಯತ್ನ.


ಓಂ ಆಧಾರ ಶಕ್ತಯೇ ನಮಃ, ಓಂ ಕೂಮಯಿ ನಮಃ, ಓಂ ಅನಂತಂ ನಮಃ, ಓಂ ಪೃಥಿವ್ಯೈ ನಮಃ.

ದೇವಶಿಲ್ಪಿ ಎಂದು ಕರೆಯಲಾಗುವ ವಿಶ್ವಕರ್ಮ ಅಷ್ಟವಸುಗಳಲ್ಲಿ ಒಬ್ಬನಾದ ಪ್ರಭಾಸ ಮತ್ತು ಯೋಗಸಿದ್ಧಿಯ ಪುತ್ರ ಎಂದು ಪುರಾಣದಲ್ಲಿ ಹೇಳಲಾಗಿದೆ. ಮನು, ದೈವಜ್ಞ, ಸಂಜ್ಞಾ, ವಿಶ್ವರೂಪರನ್ನೊಳಗೊಂಡಂತೆ ರಾಮಸೇತು ನಿರ್ಮಾಣದ ಹಿಂದಿನ ಶಕ್ತಿ ನಳ ಮತ್ತು ನೀಲ ಕೂಡ ವಿಶ್ವಕರ್ಮನ ಮಕ್ಕಳು ಎಂದು ನಂಬಲಾಗಿದೆ. ದೇವತೆಗಳ ಆಯುಧಗಳು, ರಥಗಳನ್ನಲ್ಲದೆ ಇಂದ್ರನ ವಜ್ರಾಯುಧವನ್ನೂ ವಿಶ್ವಕರ್ಮ ತಯಾರಿಸಿಕೊಟ್ಟನೆನ್ನಲಾಗಿದೆ. ಕೃಷ್ಣನ ದ್ವಾರಕೆ, ಈಶ್ವರನ ತ್ರಿಶೂಲ ಮಾತ್ರವಲ್ಲದೆ, ಇಂದ್ರನಗರಿಯನ್ನು ಹೋಲುವ ಇಂದ್ರಪ್ರಸ್ಥವನ್ನು ಪಾಂಡವರಿಗೆ ಇವನೇ ನಿರ್ಮಿಸಿಕೊಟ್ಟನೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ.

ವಿಶ್ವಕರ್ಮನ ಸಂತತಿಯೆನ್ನಲಾಗುವ ವಿಶ್ವಕರ್ಮರು ಹೇಮ ಕರ್ಮ, ಲೋಹ ಕರ್ಮ, ಶಿಲಾಕರ್ಮ, ಕಾಷ್ಠಕರ್ಮ, ರತ್ನಕರ್ಮ, ಚಿತ್ರಕರ್ಮ, ಪತ್ರಕರ್ಮ, ಪ್ರತಿಮಾ ಲಕ್ಷಣ ಮತ್ತು ಇತರ ಹಸ್ತ ಕುಶಲಕರ್ಮಗಳಲ್ಲಿ ಪರಿಣತರು.

ಇತ್ತೀಚೆಗೆ ಅಯೋಧ್ಯೆಯಲ್ಲಿ ನಿರ್ಮಾಣವಾದ ಶ್ರೀರಾಮಮಂದಿರದ ಬಾಲರಾಮನನ್ನು ನಿರ್ಮಿಸಿದ ಶಿಲ್ಪಿ ಅರುಣ್ ಯೋಗಿರಾಜ್ ಅತೀ ಹೆಚ್ಚು ಪ್ರಸಿದ್ಧಿಗೆ ಬಂದರು. ಕೇದಾರದಲ್ಲಿನ ಶಂಕರಾಚಾರ್ಯರ ಮೂರ್ತಿ, ದೆಹಲಿಯಲ್ಲಿನ ಸುಭಾಷರ ಮೂರ್ತಿಗಳನ್ನು ರೂಪಿಸಿದ್ದ ಅರುಣ್ ಯೋಗಿರಾಜ್ ಇಂದು ಬಹು ಬೇಡಿಕೆಯ ಶಿಲ್ಪಿಯಾಗಿದ್ದಾರೆ. ಅರುಣ್ ಯೋಗಿರಾಜ್ ಅವರಿಗೆ ಸ್ಫೂರ್ತಿಯನ್ನು ನೀಡಿರಬಹುದಾದ ಅನೇಕ ಶಿಲ್ಪಿಗಳು ಇತಿಹಾಸದಲ್ಲಿ ಅಡಗಿದ್ದಾರೆ. ಒಂದಷ್ಟು ಹೆಸರುಗಳನ್ನಾದರೂ ನಾವು ನೆನಪಿಟ್ಟುಕೊಳ್ಳುವಂತಾದರೆ ಅದು ನಾವು ಅವರಿಗೆ ತೋರಿಸುವ ಗೌರವ, ಕೃತಜ್ಞತೆ.





ಭಾರತ ಕಂಡ ಶ್ರೇಷ್ಠ ಇತಿಹಾಸಕಾರರಾದ ಷ.ಶೆಟ್ಟರ್ ಪ್ರಕಾರ, 'ಭಾರತದಲ್ಲಿ ಅತೀ ಹೆಚ್ಚು ಅವಜ್ಞೆಗೆ ಒಳಗಾದವರು ಶಿಲ್ಪಿಗಳು!. ಕಳಿಂಗ ಯುದ್ಧದ ನಂತರ, ಅಶೋಕ ಕೈಗೊಂಡ ಬೌದ್ಧಮತ ಪ್ರಚಾರದೊಂದಿಗೆ ಭಾರತದಲ್ಲಿ ಶಿಲ್ಪಿಗಳ ಅಧಿಕೃತ ಇತಿಹಾಸ ಪ್ರಾರಂಭವಾಗುತ್ತದೆ. ಅಶೋಕ ಭಾರತದ ನಾನಾ ಕಡೆಗೆ ತನ್ನ ಶಾಸನ, ಆಜ್ಞೆ ನಿರೂಪಗಳನ್ನು ಪ್ರಚುರಪಡಿಸಲು ಅನೇಕ ಸ್ಥಪತಿಗಳನ್ನು ನೇಮಕಮಾಡಿ ಅವರಿಂದ ಶಾಸನಗಳು, ಸ್ತೂಪಗಳು, ಸ್ಮಾರಕಗಳನ್ನು ಮಾಡಿಸುತ್ತಾನೆ. ಅವನೇ ಮಾಡಿಸಿದ ಸಾರನಾಥದ ಸಿಂಹಲಾಂಛನ ಕೆತ್ತಿದ ಶಿಲ್ಪಿಯ ಬಗ್ಗೆ ನಮಗೆ ತಿಳಿಯುವುದು ಸಾಧ್ಯವಾಗಿಲ್ಲವಾದರೂ, ಕನ್ನಡದ ಮೊದಲ ಶಾಸನ, ಖರೋಷ್ಠಿ ಲಿಪಿಯಲ್ಲಿ ಕೆತ್ತಿದ ಚಪಡ ಎಂಬ ಸ್ಥಪತಿಯ ಬಗ್ಗೆ ದೊರೆತಿರುವ ಆಧಾರ ಕರ್ನಾಟಕದ ಸ್ಥಪತಿಗಳ ಅಧಿಕೃತ ಇತಿಹಾಸದಲ್ಲಿ ದಾಖಲಾಗಿರುವ ಮೊದಲ ಹೆಸರು ಎಂದು ಶೆಟ್ಟರ್ ಸಾಬೀತು ಮಾಡುತ್ತಾರೆ. ಬಹುಶಃ ಆಫ್ಘಾನ್ ಮೂಲದ, ಬಹುಭಾಷೆಗಳನ್ನು ಬಲ್ಲ ಚಪಡ, ದಕ್ಷಿಣ ಭಾರತದೆಡೆಗೆ ಅಶೋಕನ ಆಜ್ಞೆಯಂತೆ ಬಂದು ಚಿತ್ರದುರ್ಗ ಜಿಲ್ಲೆ ಅಶೋಕ ಸಿದ್ದಾಪುರದ ಬಂಡೆಗಳ ಮೇಲೆ ಧಮ್ಮಶಾಸನಗಳನ್ನು ಕೆತ್ತಿದ್ದಾನೆ. ಇವನು ಒಬ್ಬ ಕಂಡರಣೆಕಾರನಾಗಿದ್ದ.

ಹೀಗೆ ಪ್ರಾರಂಭವಾಗುವ ಸ್ಥಪತಿಗಳ ಇತಿಹಾಸದಲ್ಲಿ, ಕನ್ನಡನಾಡನ್ನು ಆಳಿದ ಹಲವು ರಾಜಮನೆತನಗಳಿಗೆ ಕೆಲಸ ಮಾಡಿದ ಹಲವು ಶಿಲ್ಪಿಗಳು ಇದ್ದಾರೆ. ನಾವು ಜಕ್ಕಣನ ಬಗ್ಗೆ ಕೇಳಿದ್ದೇವೆ. ಬೇಲೂರಿನ ದೇವಸ್ಥಾನದ ರೂವಾರಿ ಅವನು ಎಂದು ನಂಬಿದ್ದೇವೆ. ಅವನ ಜೊತೆ ಕೆಲಸ ಮಾಡಿದವರು, ಅವನ ಸಮಕಾಲೀನರು, ಹಿಂದಿನವರು ಮುಂದಿನವರ ಬಗ್ಗೆ ಒಂದಷ್ಟು ಮಾಹಿತಿ.

ಉಪಾಧ್ಯಾಯ ಮತ್ತು ಆಚಾರ್ಯ ಎಂಬ ಸಂಸ್ಕೃತ ಪದಗಳ ಕನ್ನಡ ಅವತರಣಿಕೆ ಓಜ ಮತ್ತು ಆಚಾರ್ ಅನ್ನು ತಮ್ಮ ಹೆಸರುಗಳೊಂದಿಗೆ ಜೋಡಿಸಿಕೊಳ್ಳುವ ಪರಂಪರೆ ವಿಶ್ವಕರ್ಮರಲ್ಲಿ ಬೆಳೆದುಬಂದಿದೆ.

ಕರ್ನಾಟಕವನ್ನು ಆಳಿದ ವಿವಿಧ ರಾಜವಂಶಗಳ ಕಾಲದಲ್ಲಿದ್ದ ಶಿಲ್ಪಿಗಳು ಹಲವರು. ಆರಂಭದಲ್ಲಿ ನಮನಕಲ್ಲುಗಳು, ನಿಷಧಿ ಕಲ್ಲುಗಳು, ವೀರಗಲ್ಲುಗಳೇ ಹೆಚ್ಚಾಗಿದ್ದವು. ಕರ್ನಾಟಕದಲ್ಲಿ 14000ಕ್ಕೂ ಹೆಚ್ಚು ನಮನಕಲ್ಲುಗಳು ದೊರೆತಿವೆ ಮತ್ತು 314 ಶಿಲ್ಪಿಗಳ ಹೆಸರಷ್ಟೇ ತಿಳಿಯಲಾಗಿದೆ. ನಾನು ಮೊದಲೇ ಹೇಳಿದಂತೆ, ಅನಾಮಿಕರಾಗಿ ಉಳಿಯಲು ಇಚ್ಛಿಸುತ್ತಿದ್ದರೋ ಅಥವಾ ಆ ಕಾಲದ ಸಂದರ್ಭ ಹಾಗಿತ್ತೋ ಅನ್ನುವುದು ನಿಖರವಾಗಿ ತಿಳಿದಿಲ್ಲ.

ಗಂಗರು: ಗಂಗರ ಕಾಲದಲ್ಲಿ, ಪರಶುರಾಮಯ್ಯ, ದುಗ್ಗಯ್ಯ, ಬೆರ್ದಮಯ್ಯ ಮತ್ತು ವಿಭೋಗಗಂಗಾ ಎನ್ನುವ 4 ಶಿಲ್ಪಿಗಳ ಹೆಸರು ದೊರೆತಿವೆ.

ಕದಂಬರು: ಗಂಗೋಜ ಮತ್ತು ಹಕ್ಕಯ್ಯ ಎನ್ನುವವರು ಕದಂಬರ ಕಾಲದ ಶಿಲ್ಪಿಗಳು.

ಕಲ್ಯಾಣ ಚಾಲುಕ್ಯರು: ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶಾಸನಗಲ್ಲುಗಳು ಮಾತ್ರವಲ್ಲದೆ ಹಲವು ದೇವಸ್ಥಾನಗಳ ನಿರ್ಮಾಣವೂ ಆಯಿತು. ದಾಖಲಾಗಿರುವ ಶಿಲ್ಪಿಗಳು, ನಾ, ಸಿಗ್ಗೋಜ, ಪದೋಜ, ಆಯೋಜ, ಹೊಲ್ಲೋಜ, ಕಟುಕೋಜ, ಕೇತೋಜ, ಲೋಕೋಜ, ಹೋಜ.

ವಿಜಯನಗರ: ವಿಜಯನಗರದ ವೈಭವವನ್ನು ನಾವೆಲ್ಲ ಕೇಳಿ ಬಲ್ಲೆವು. ಮಡೇಜ, ತನ್ನನ್ನು ತಾನು 'ಸುಜನರ ಮನೋರಂಜನ ಎಂದು ಕರೆದುಕೊಂಡ ನಾಗೋಜ, ಮಲಿಯೋಜ, ಗುಂಡೋಜ, ದೇವೋಜ, ಈಶ್ವರಾಚಾರಿ, ಮನಿಯಾಚಾರಿ, ವೀರೋಜ, ಬಾಚಾಚಾರಿ ಮತ್ತು ತಿಮ್ಮಯ ಇವರುಗಳ ಹೆಸರುಗಳು ಇತಿಹಾಸದಲ್ಲಿ ದಾಖಲಾಗಿವೆ.

ಹೊಯ್ಸಳ: ಹೊಯ್ಸಳರ ಶಿಲ್ಪವೈಭವ ಅಚ್ಚಳಿಯದ್ದು. ಕಲ್ಯಾಣದ ಚಾಲುಕ್ಯರ ಪತನವಾದ ನಂತರ ಅಲ್ಲಿದ್ದ ಸ್ಥಪತಿಗಳು ಹೊಯ್ಸಳ ರಾಜ್ಯಕ್ಕೆ ವಲಸೆ ಬಂದರು. ಆಗ ಹೊಯ್ಸಳಾಧೀಶರು ನಿರ್ಮಿಸುತ್ತಿದ್ದ ಅಸಂಖ್ಯ ದೇವಸ್ಥಾನಗಳು ಇವರೆಲ್ಲರಿಗೆ ಕೆಲಸ ಕೊಟ್ಟಿತು. ದಾಸೋಜ, ಚಾವಣ, ಚಿಕ್ಕಹಂಪ, ಮೈನಾ, ಮಲ್ಲಿಯಯ್ಯ, ಏಚಣ್ಣ, ಕೆಂಚಮಲ್ಲಿಯಣ್ಣ, ಮಲ್ಲಣ್ಣಲಾಸೆ, ಧರ್ಮಾಚಾರಿ, ಬಿರುದು ರೂವಾರಿ ಮುಖತಿಲಕನೆಂದು ಕರೆದುಕೊಂಡ ವರ್ಧಮಾನಾಚಾರಿ ಅಥವಾ ಗಂಗಾಚಾರಿ, ಕೇತಾಚಾರಿ, ಕಾಂವಾಚಾರಿ, ಭೋಗೋಜ, ಮಲೋಜ, ಬೈಕೋಜ, ಮಧುಕೋಜ, ಹೊಯ್ಸಳಾಚಾರಿ ಮತ್ತು ಮಲ್ಲಿತಮ್ಮ ದಾಖಲಾಗಿರುವ ಪ್ರಮುಖರು.

ಶ್ರವಣಬೆಳಗೊಳ: ಬಾಹುಬಲಿಯನ್ನು ನಿರ್ಮಿಸಿದ ಅರಿಷ್ಟನೇಮಿ ಜಕ್ಕಣಾಚಾರಿಯ ಶಿಷ್ಯನೆನ್ನುತ್ತಾರೆ. ಶ್ರವಣಬೆಳಗೊಳದಲ್ಲಿ ಕಂಡುಬರುವ ನೂರಾರು ಶಾಸನಗಳನ್ನು ಹಲವು ಶಿಲ್ಪಿಗಳು ನಿರ್ಮಿಸಿದ್ದಾರೆ. ಇವ ರಲ್ಲಿ ಗಂಗಾಚಾರಿ ಪ್ರಮುಖ.

ಮಲ್ಲಿತಮ್ಮನ ಬಗ್ಗೆ ವಿಶೇಷವಾಗಿ ಹೇಳಲೇಬೇಕು. ಕರ್ನಾಟಕ ಕಂಡ ಶ್ರೇಷ್ಠಶಿಲ್ಪಿ ಮಲ್ಲಿತಮ್ಮ, 60 ವರ್ಷಗಳ ತನ್ನ ದೀರ್ಘ ವೃತ್ತಿಜೀವನದಲ್ಲಿ 6 ಪ್ರಮುಖ ದೇವಸ್ಥಾನಗಳ ನಿರ್ಮಾಣದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ. ಸುಬುಜಗ, ಮಲಯ, ಪರುಣ, ಪದ್ಮಮಯ, ಬಲುಗ, ಬೂತಯ್ಯ, ಮೂಲಣರನ್ನೊಳಗೊಂಡಂತೆ 22 ಸಹೋದ್ಯೋಗಿಗಳೊಂದಿಗೆ ಇವನು ನಿರ್ಮಾಣಕಾರ್ಯದಲ್ಲಿ ತೊಡಗಿಕೊಂಡಿದ್ದ ಎನ್ನಲಾಗಿದೆ. ಅಮೃತಾಪುರದ ಅಮೃತೇಶ್ವರ ದೇವಾ ಲಯ(1196–1206), ಹಾರನಹಳ್ಳಿಯ ಲಕ್ಷ್ಮೀ ನರಸಿಂಹ ದೇವಸ್ಥಾನ (1234–46), ಕೆ.ಆರ್.ಪೇಟೆಯ ಗೋವಿಂದನ ಹಳ್ಳಿಯ ಪಂಚಲಿಂಗೇಶ್ವರ ದೇವಾಲಯ (1237), ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಸ್ಥಾನ (1246–1250), ಜಾವಗಲ್ಲಿನ ಲಕ್ಷ್ಮೀನರಸಿಂಗ ದೇವಾಲಯ (1250), ನಾಗಲಾಪುರದ ಚೆನ್ನಕೇಶವ ಮತ್ತು ಕೇದಾರೇಶ್ವರ ದೇವಸ್ಥಾನ ಹಾಗೂ ಅತ್ಯಂತ ಪ್ರಮುಖವಾದ ಸೋಮನಾಥಪುರದ ದೇವಸ್ಥಾನ (1268). ವಿಷ್ಣು ಮೂರ್ತಿಯ ಶಿಲ್ಪಶಾಸ್ತ್ರದಲ್ಲಿ ಪರಿಣತನಾಗಿದ್ದ ಮಲ್ಲಿತಮ್ಮ ತನ್ನ ಜೀವಮಾನದಲ್ಲಿ ರಚಿಸಿದ ವಿಷ್ಣು ಮೂರ್ತಿಗಳ ಸಂಖ್ಯೆ 79! ಈಗಲೂ ಆಗಮ ಶಾಸ್ತ್ರ ಪಂಡಿತರು ಮಲ್ಲಿತಮ್ಮನ ವಿಷ್ಣು ಮೂರ್ತಿಗಳ ಕರಾರುವಾಕ್ ನಿರ್ಮಾಣವನ್ನು ಅಚ್ಚರಿಯಿಂದ ನೋಡುತ್ತಾರೆ. ಇಂತಹ ಅಪ್ರತಿಮ ಶಿಲ್ಪಿಯ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲದಿರುವುದು ಖೇದಕರ. ಇಂದು ಅವನ ಹೆಸರಿನಲ್ಲಿ ಒಂದು ಪ್ರಶಸ್ತಿಯು ಸ್ಥಾಪನೆಯಾಗಿದ್ದು ಅವನನ್ನು ಮರೆಯಬಾರದೆಂಬ ಯತ್ನ ನಡೆದಿರುವುದು ಸಂತಸದ ವಿಚಾರ.

ಇವರೆಲ್ಲರೂ ನಮ್ಮ ಕರ್ನಾಟಕದ ಶಿಲ್ಪ ಕಲಾವೈಭವದ ರೂವಾರಿಗಳು.

ವಿಶ್ವಕರ್ಮ ಜಯಂತಿ ಸಂದರ್ಭದಲ್ಲಿ ಇವರೆಲ್ಲರನ್ನೂ ನೆನಪಿಸಿಕೊಳ್ಳೋಣ. ಮುಂದೆ ಯಾವುದಾದರೂ ದೇವಸ್ಥಾನಕ್ಕೆ ಹೋದಾಗ ಇವರ ಗುರುತುಗಳನ್ನು ಹುಡುಕುವ ಪುಟ್ಟ ಪ್ರಯತ್ನ ಮಾಡೋಣ.

ಆ ಕಾಲದಲ್ಲಿ ತಮ್ಮ ಶ್ರಮ, ಪ್ರಯತ್ನ, ಕಲ್ಪನೆಗಳನ್ನು ಶಿಲೆಯಲ್ಲಿ ಮೂಡಿಸಿ, ಜಗತ್ತಿನಲ್ಲಿ ಭಾರತದ ವೈಭವವನ್ನು ಅಜರಾಮರವಾಗಿಸಿದ ಶಿಲ್ಪಿಗಳನ್ನು ನೆನೆಯುವ, ಅವರ ಕಲಾವೈಭವವನ್ನು ಸ್ಮರಿಸಿಕೊಳ್ಳುವ ವಿಶ್ವಕರ್ಮ ಜಯಂತಿಯನ್ನು ಅರ್ಥವತ್ತಾಗಿ ಆಚರಿಸುವ ಮೂಲಕ ಅವರಿಗೆ ಕೃತಜ್ಞತೆ ಸಲ್ಲಿಸಿ, ಕೃತಾರ್ಥರಾಗೋಣ.

ಇಂದಿನಿಂದ ಕೇರಳ ಸಮಾಜದಲ್ಲಿ ಓಣಂ ಜಾತ್ರೆ



ಮೈಸೂರು,ಸೆ.11–ಓಣಂ ಆಚರಣೆ ಅಂಗವಾಗಿ ಮೈಸೂರು ಕೇರಳ ಸಮಾಜ –ಕೇರಳಿಯರ ಸಾಂಸ್ಕೃತಿಕ ಸಂಸ್ಥೆಯು ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೇರಳ ಸಮಾಜದ ಸಭಾಂಗಣದಲ್ಲಿ ಸೆ.12ರಿಂದ 14ರವರೆಗೆ ಓಣಂ ಜಾತ್ರೆ ಆಯೋಜಿಸಿದೆ. ಮೂರು ದಿನಗಳ ಕಾಲ ನಡೆಯುವ ಓಣಂ ಜಾತ್ರೆಯಲ್ಲಿ ಬನಾನಾ ಚಿಪ್ಸ್, ಕೋಕೋನೆಟ್ ಆಯಿಲ್, ಕೇರಳ ಹಲ್ವಾ, ಪಾಯಸಂ ಮತ್ತು ಕೇರಳ ಸೀರೆಗಳು ಸೇರಿದಂತೆ ವಿವಿಧ ಬಗೆಯ ಓಣಂ ಸಂಬಂಧಿತ ಪದಾರ್ಥಗಳನ್ನು ಪ್ರದರ್ಶಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಕೆಎಸ್ಆರ್‌ಟಿಸಿ ಬಸ್ ಹರಿದು ಬೈಕ್ ಸವಾರ ಸಾವು



ಮೈಸೂರು, ಸೆ.11(ಆರ್‌ಕೆ)–ಕೆಎಸ್‌ಆರ್‌ಟಿಸಿ ಬಸ್ ಹರಿದ ಪರಿಣಾಮ ಮೆಡಿಕಲ್ ರೆಪ್ರೆಸೆಂಟೇಟಿವ್ ಸಾವನ್ನಪ್ಪಿದ ಘಟನೆ ಮೈಸೂರಿನ ನಂಜನಗೂಡು ರಸ್ತೆಯ ಗುಂಡೂರಾವ್ ನಗರ ಬಳಿ ಇಂದು ಮಧ್ಯಾಹ್ನ ಸಂಭವಿಸಿದೆ.

ಮೂಲತಃ ಕಿರುಗಾವಲಿನವರಾದ ಮೈಸೂರಿನ ರಾಜೀವ್‌ನಗರ ನಿವಾಸಿ ಸೈಯ್ಯದ್ ನೌವ್‌ಮನ್(27) ಸಾವನ್ನಪ್ಪಿದ ಯುವಕ. ನಂಜನಗೂಡು ಕಡೆಯಿಂದ ಮೈಸೂರಿಗೆ ಬೈಕಿನಲ್ಲಿ ಬರುತ್ತಿದ್ದ ನೌವ್‌ಮನ್‌ಗೆ ಅದೇ ಮಾರ್ಗ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸು, ಹಸುವೊಂದು ಅಡ್ಡ ಬಂದ ಕಾರಣ ಗುಂಡೂರಾವ್‌ನಗರ ಬಳಿ ಮಧ್ಯಾಹ್ನ 3.45 ಗಂಟೆ ವೇಳೆ ಬೈಕಿಗೆ ಡಿಕ್ಕಿ ಹೊಡೆಯಿತು. ಪರಿಣಾಮ ಆಯ ತಪ್ಪಿ ಬಲಕ್ಕೆ ಬಿದ್ದ ನೌವ್‌ಮನ್ ಮೇಲೆ ಬಸ್ಸಿನ ಹಿಂಬದಿ ಚಕ್ರ ಹರಿದು ಸ್ಥಳದಲ್ಲೇ ಸಾವನ್ನಪ್ಪಿದರು ಎಂದು ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್.ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸೆ.15ರಂದು 25 ಲಕ್ಷ ಜನರಿಂದ ಮಾನವ ಸರಪಳಿ



ಮೈಸೂರು,ಸೆ.11(ಬಿಎಲ್‌ಯು)–ಸೆಪ್ಟೆಂಬರ್ 15ರಂದು ನಡೆಯುವ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಬೀದರ್‌ನಿಂದ ಚಾಮರಾಜನಗರದ ತನಕ 25 ಲಕ್ಷ ಜನರನ್ನು ಸೇರಿಸಿ ಏಕ ಕಾಲಕ್ಕೆ ಮಾನವ ಸರಪಳಿ ರಚಿಸಿ ವಿಶ್ವ ದಾಖಲೆ ನಿರ್ಮಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಕರ್ನಾಟಕದ 2,500 ಕಿಲೋ ಮೀಟರ್‌ನಲ್ಲಿ 25 ಲಕ್ಷ ಜನರನ್ನು ಸೇರಿಸಿ ಏಕ ಕಾಲಕ್ಕೆ ಮಾನವ ಸರಪಳಿ ರಚಿಸಲಾಗುವುದು. ಈ ಮೂಲಕ ಪ್ರಜಾ ಪ್ರಭುತ್ವದ ಮಹತ್ವವನ್ನು ಸಾರಿ ಹೇಳಲಾಗುವುದು ಎಂದರು. ಬುದ್ಧ, ಬಸವಣ್ಣನವರ ಕಾಲದಿಂದಲೂ ಪ್ರಜಾಪ್ರಭುತ್ವ ಅವಶ್ಯಕತೆಯನ್ನು ಸಾರಿ ಹೇಳಲಾಯಿತು. ಡಾ.ಅಂಬೇಡ್ಕರ್ ಪ್ರಜಾಪ್ರಭುತ್ವದ ಮೌಲ್ಯವನ್ನು ಪ್ರತಿಪಾದಿಸಿದ್ದರು. ಪ್ರಜಾಪ್ರಭುತ್ವವಿದ್ದರೆ ಬದುಕು ಮತ್ತು ಏಳಿಗೆ ಸಾಧಿಸಲು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವಕ್ಕೆ ಯಾವುದೇ ಕಾರಣಕ್ಕೂ ಧಕ್ಕೆ ಬರಬಾರದು. ಇದನ್ನು ಮನದಟ್ಟು ಮಾಡಲು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಂದು ಬೃಹತ್ ಮಾನವ ಸರಪಳಿ ರಚಿಸಲಾಗುತ್ತಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ದಸರಾದಲ್ಲಿ ಟೈಟಲ್ ಪ್ರಾಯೋಜಕತ್ವಕ್ಕೆ ಮುಕ್ತ ಆಹ್ವಾನ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ಉದ್ಯಮಿಗಳ ಸಭೆ

- 5 ಲಕ್ಷದಿಂದ 2 ಕೋಟಿ ತನಕ ಪ್ರಾಯೋಜಕತ್ವ
- ಯಾರ ಮೇಲೂ ಒತ್ತಡವಿಲ್ಲ, ಬಲವಂತ ಮಾಡಲ್ಲ
- ಜಾಹೀರಾತು ನೀಡಿ, ದಸರಾದಲ್ಲಿ ಪ್ರಚಾರ ಪಡೆಯಿರಿ
- ಕಳೆದ ಬಾರಿ ಪ್ರಾಯೋಜಕತ್ವದಿಂದ 1.75 ಕೋಟಿ ಆದಾಯ



ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನಲ್ಲಿ ಬುಧವಾರ ದಸರಾ ಪ್ರಾಯೋಜಕತ್ವಕ್ಕೆ ಸಂಬಂಧಿಸಿದಂತೆ ನಡೆದ ಕಂಪನಿ ಪ್ರತಿನಿಧಿಗಳು ಹಾಗೂ ಉದ್ಯಮಿಗಳ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿದರು.

ಮೈಸೂರು, ಸೆ.11(ಬಿಎಲ್‌ಯು)–ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಜಂಬೂಸವಾರಿ ಮೆರವಣಿಗೆ, ಅರಮನೆ ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಹಲವು ಸಮಾರಂಭಗಳಲ್ಲಿ ಶೀರ್ಷಿಕೆ ಪ್ರಾಯೋಜಕತ್ವ (ಟೈಟಲ್ ಸ್ಪಾನ್ಸರ್‌ಶಿಪ್) ಪಡೆಯಲು ಕಂಪನಿ ಹಾಗೂ ಉದ್ಯಮಿಗಳಿಗೆ ಜಿಲ್ಲಾಡಳಿತ ಮುಕ್ತ ಆಹ್ವಾನ ನೀಡಿದೆ.

ಮೈಸೂರಿನ ಲಲಿತಮಹಲ್ ಪ್ಯಾಲೆಸ್ ಹೋಟೆಲ್‌ನಲ್ಲಿ ಇಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ಕಂಪನಿ ಪ್ರತಿನಿಧಿಗಳು ಹಾಗೂ ಉದ್ಯಮಿಗಳ ಸಭೆ ನಡೆಯಿತು.

ಈ ವೇಳೆ ಮಾತನಾಡಿದ ಡಾ.ಮಹದೇವಪ್ಪ, ಕಳೆದ ಬಾರಿ ಬರಗಾಲದ ಕಾರಣ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಣೆ ಮಾಡಲಾಯಿತು. ಆದರೆ ಈ ಬಾರಿ ಮಳೆ, ಬೆಳೆ ಸಮೃದ್ಧವಾಗಿರುವ ಕಾರಣ ವಿಜೃಂಭಣೆಯ ದಸರಾ ಆಚರಣೆಗೆ ಸರ್ಕಾರ ನಿರ್ಧರಿಸಿದ್ದು, ಈಗಾಗಲೇ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ ಎಂದು ತಿಳಿಸಿದರು.

ಅದ್ಧೂರಿ ದಸರಾ ಆಚರಣೆ ಮಾಡಲು ಸರ್ಕಾರದ ಜೊತೆಗೆ ಉದ್ಯಮಿಗಳು ಕೈ ಜೋಡಿಸಿ ಪ್ರಾಯೋಜಕತ್ವದ ಮೂಲಕ ಪ್ರಚಾರ ಪಡೆಯಬಹುದು. ಈ ಮೂಲಕ ಮೈಸೂರು ದಸರಾವನ್ನು ಮತ್ತಷ್ಟು ಆಕರ್ಷಣೀಯವಾಗಿ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪ್ರಾಯೋಜಕತ್ವ ಪಡೆಯುವಂತೆ ಯಾರ ಮೇಲೂ ಒತ್ತಡ ಹೇರಲ್ಲ, ಬಲವಂತ ಮಾಡಲ್ಲ. ಸ್ವಯಂ ಪ್ರೇರಣೆಯಿಂದ ಪ್ರಾಯೋಜಕತ್ವ ಪಡೆಯಬಹುದು. ಈ ನಿಟ್ಟಿನಲ್ಲಿ ಆಯ್ಕೆ ಮಾಡುವುದು, ಬಿಡುವುದು ನಿಮ್ಮ ವಿವೇಚನೆಗೆ ಬಿಟ್ಟಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು. ಈ ವೇಳೆ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಪ್ರಾಯೋಜಕತ್ವದ ಬಗ್ಗೆ ವಿವರಣೆ ನೀಡಿದರು.

ಜಂಬೂಸವಾರಿ ಪ್ರಾಯೋಜಕತ್ವ: ಜಂಬೂಸವಾರಿ ಪ್ರಾಯೋಜಕತ್ವವನ್ನು ಎರಡು ಕೋಟಿಗೆ ಒಬ್ಬರಿಗೆ ನೀಡಲಾಗುವುದು. ಇದರಲ್ಲಿ ಎರಡು ರೀತಿಯಲ್ಲಿ ಪ್ರಚಾರ ಪಡೆಯಲು ಅವಕಾಶವಿದೆ. ಜಂಬೂ ಸವಾರಿ ಮೆರವಣಿಗೆ ದಿನದಂದು ಮೈಸೂರು ಅರಮನೆಯ ಎಲ್ಲಾ ಪ್ರವೇಶ ದ್ವಾರದಲ್ಲಿ ಪ್ರಚಾರ ಫಲಕ ಅಳವಡಿಕೆಗೆ ಅವಕಾಶವಿದೆ. ಜೊತೆಗೆ ಜಂಬೂಸವಾರಿ ಮೆರವಣಿಗೆಯ ಟಿಕೆಟ್ ಹಿಂಭಾಗದಲ್ಲಿ 4 ನೇ 1 ಭಾಗದಲ್ಲಿ ಮುದ್ರಣಕ್ಕೆ ಪ್ರಚಾರದ ವಿಷಯವನ್ನು ಮುದ್ರಿಸಲಾಗುವುದು.

ಅಂಬಾರಿ ಪ್ರಾಯೋಜಕತ್ವ: ಒಂದು ಕೋಟಿ ರೂಪಾಯಿಗೆ ತಲಾ ಮೂವರು ಪ್ರಾಯೋಜಕತ್ವ ಪಡೆಯಲು ಅವಕಾಶವಿದೆ. ಅಕ್ಟೋಬರ್ 5 ರಿಂದ 9 ರವರೆಗೆ ನಡೆಯುವ ಯುವ ದಸರಾದಲ್ಲಿ ಐದು ದಿನಗಳ ಕಾಲ ವೇದಿಕೆಯ ಬ್ಯಾಕ್‌ಡ್ರಾಪ್‌ನಲ್ಲಿ ಎಲ್‌ಇಡಿ ಸ್ಕ್ರೀನ್‌ನಲ್ಲಿ ಪ್ರದರ್ಶನಕ್ಕೆ ಅವಕಾಶವಿದ್ದು, ಕಾರ್ಯಕ್ರಮದ ಸ್ಥಳದ ಪ್ರವೇಶ ದ್ವಾರದಲ್ಲಿ ಪ್ರಚಾರ ಫಲಕ ಅಳವಡಿಕೆಗೆ ಅವಕಾಶವಿದೆ.

ಅರಮನೆ ಆವರಣದಲ್ಲಿ ಅಕ್ಟೋಬರ್ 3ರಿಂದ 10ರವರೆಗೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಯ ಬ್ಯಾಕ್‌ಡ್ರಾಪ್‌ನಲ್ಲಿ ಎಲ್‌ಇಡಿ ಸ್ಕ್ರೀನ್‌ನಲ್ಲಿ ಪ್ರಚಾರಕ್ಕೆ ಅವಕಾಶವಿದ್ದು, ಅರಮನೆಯ ಎಲ್ಲಾ ಪ್ರವೇಶ ದ್ವಾರದಲ್ಲಿ ಪ್ರಚಾರ ಫಲಕ ಅಳವಡಿಸಬಹುದು.

ಅ.11 ಮತ್ತು 12 ರಂದು ಮೈಸೂರಿನ ಬನ್ನಿಮಂಟಪ ಮೈದಾನದಲ್ಲಿ ನಡೆಯುವ ಪಂಜಿನ ಕವಾಯತು ಕಾರ್ಯಕ್ರಮ ಸ್ಥಳದ ಎಲ್ಲಾ ಪ್ರವೇಶ ದ್ವಾರದಲ್ಲಿ ಮತ್ತು ಮೈದಾನದಲ್ಲಿ ಪ್ರಚಾರ ಫಲಕ ಅಳವಡಿಸಬಹುದಾಗಿದೆ. ಜೊತೆಗೆ ಪಾಸ್‌ನಲ್ಲಿ ಕೂಡ ಮುದ್ರಣ ಮಾಡಬಹುದು.

ಪ್ಲಾಟಿನಂ ಪ್ರಾಯೋಜಕತ್ವ: 75 ಲಕ್ಷ ರೂಪಾಯಿಗೆ ತಲಾ ಇಬ್ಬರಿಗೆ ಪ್ರಾಯೋಜಕತ್ವ ನೀಡಲಾಗುತ್ತದೆ. ಯುವ ಸಂಭ್ರಮ ಕಾರ್ಯಕ್ರಮದ ಒಳಗೆ ಮತ್ತು ಹೊರಗಿನ ಕಮಾನಿನಲ್ಲಿ ಪ್ರಚಾರ ಫಲಕ ಅಳವಡಿಸಲು ಅವಕಾಶವಿದೆ. ಮತ್ತೊಂದರಲ್ಲಿ ಆಹಾರ ಮೇಳದಲ್ಲಿ ಪ್ರಾಯೋಜಕತ್ವ ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ.

ಗೋಲ್ಡನ್ ಪ್ರಾಯೋಜಕತ್ವ: 50 ಲಕ್ಷ ರೂಪಾಯಿಗೆ ತಲಾ ಇಬ್ಬರಿಗೆ ಇದರ ಪ್ರಾಯೋಜಕತ್ವ ನೀಡಲಾಗುತ್ತದೆ. ಅಕ್ಟೋಬರ್ 3 ರಿಂದ 12 ರವರೆಗೆ 9 ದಿನಗಳ ಕಾಲ ನಡೆಯುವ ಫ್ಲವರ್ ಶೋನ ಒಳಗೆ ಮತ್ತು ಹೊರಗೆ ಪ್ರಾಯೋಜಕತ್ವ ಪಡೆಯಬಹುದಾಗಿದೆ.

ದಸರಾ ಆಹಾರ ಮೇಳ ನಡೆಯುವ ಲಲಿತ ಮಹಲ್ ಮೈದಾನದ ಒಳಗೆ ಮತ್ತು ಹೊರಗೆ ಪ್ರಾಯೋಜಕತ್ವಕ್ಕೆ ಅವಕಾಶ ಕಲ್ಪಿಸಲಾಗಿದೆ. ದಸರಾ ಚಲನಚಿತ್ರೋತ್ಸವ ನಡೆಯುವ ಡಿಆರ್‌ಸಿ ಮತ್ತು ಐನಾಕ್ಸ್‌ನಲ್ಲಿ ಪ್ರಾಯೋಜಕತ್ವ ಪಡೆಯಬಹುದಾಗಿದೆ.

ಸಿಲ್ವರ್ ಪ್ರಾಯೋಜಕತ್ವ: 25 ಲಕ್ಷ ರೂಪಾಯಿಗೆ ತಲಾ ನಾಲ್ವರಿಗೆ ಈ ಪ್ರಾಯೋಜಕತ್ವ ನೀಡಲಾಗುತ್ತದೆ. ಕ್ರೀಡಾ ದಸರಾದ ಒಳಗೆ ಮತ್ತು ಹೊರಗೆ, ನಂಜನಗೂಡು ದೇವಸ್ಥಾನದ ವೇದಿಕೆಯಲ್ಲಿ ಹತ್ತು ದಿನಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ಪ್ರಾಯೋಜಕತ್ವ ಪಡೆಯಬಹುದು. ಕುಸ್ತಿ ಬಹುಮಾನ, ವೇದಿಕೆ ಮತ್ತು ಕಮಾನಿನಲ್ಲಿ ಪ್ರಾಯೋಜಕತ್ವ ಪಡೆಯಬಹುದು. ಮೈಸೂರು ನಗರದ ಪ್ರಮುಖ ಸ್ಥಳಗಳಲ್ಲಿ ದೀಪಾಲಂಕಾರಕ್ಕೆ ಮಾಡುವ ಮೂಲಕ ಪ್ರಾಯೋಜಕತ್ವ ಪಡೆಯಬಹುದು.

ಇತರೆ ಪ್ರಾಯೋಜಕತ್ವ: ತಲಾ 5 ರಿಂದ 15 ಲಕ್ಷ ರೂಪಾಯಿಯಲ್ಲಿ ಮಹಿಳಾ ಮತ್ತು ಮಕ್ಕಳ ದಸರಾ, ರೈತ ದಸರಾ, ಲಲಿತ ಕಲೆ, ಕಲಾಮಂದಿರ, ಜಗನ್ಮೋಹನ ಅರಮನೆ ಹಾಗೂ ಇತರೆ ಸ್ಥಳದಲ್ಲಿ ಪ್ರಾಯೋಜಕತ್ವದ ಮೂಲಕ ಪ್ರಚಾರ ಪಡೆಯಬಹುದು.

ಇದಲ್ಲದೆ ಹಾರ್ಡಿಂಜ್ ವೃತ್ತ ಚಾಮರಾಜ ವೃತ್ತ, ರಾಮಸ್ವಾಮಿ ವೃತ್ತ ಹಾಗೂ ಒಂಟಿಕೊಪ್ಪಲ್ ವೃತ್ತದಲ್ಲಿ ಎಲ್‌ಇಡಿ ಜಾಹೀರಾತು ಫಲಕಗಳ ಮೂಲಕ ದಸರಾದಲ್ಲಿ ಪ್ರಾಯೋಜಕತ್ವ ಪಡೆಯಬಹುದು.

ಇದರ ಜೊತೆಗೆ ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯತ್, ಮೃಗಾಲಯ, ಕೊಲಂಬಿಯಾ ಏಷಿಯಾ ವೃತ್ತ ತಾಲೂಕು ಕಚೇರಿ, ಮೈಸೂರು ನಗರಪಾಲಿಕೆಯಲ್ಲಿ ಕೂಡ ಜಾಹೀರಾತು ಫಲಕ ಅಳವಡಿಸಲು ಪ್ರಾಯೋಜಕರಿಗೆ ಅವಕಾಶ ಕಲ್ಪಿಸಲಾಗಿದೆ. ಮೈಸೂರಿನ ಪ್ರಮುಖ ರಸ್ತೆ ರಸ್ತೆಗಳಲ್ಲಿ 40ರಿಂದ 50 ಜಾಹೀರಾತು ಫಲಕ ಅಳವಡಿಸಬಹುದು. ದಸರಾ ವೆಬ್‌ಸೈಟ್, ಸಾಮಾಜಿಕ ಜಾಲತಾಣ, ನೇರ ಪ್ರಸಾರಗಳಲ್ಲಿ ಕೂಡ ಜಾಹಿರಾತು ಪ್ರಕಟಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಸವಿತಾ ವಿವರಿಸಿದರು.

ತರುವಾಯ ಮಾತನಾಡಿದ ಡಾ.ಮಹದೇವಪ್ಪ, ಕಳೆದ ಬಾರಿಯ ದಸರಾದಲ್ಲಿ ಪ್ರಾಯೋಜಕತ್ವದಿಂದ 1.75 ಕೋಟಿ ರೂಪಾಯಿ ಬಂದಿತ್ತು. ಆದರೆ ಈ ಬಾರಿ ಅದ್ಧೂರಿ ದಸರಾ ಆಚರಣೆ ಹಿನ್ನೆಲೆ ಮತ್ತಷ್ಟು ಹಣ ಬರುವ ಸಾಧ್ಯತೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇಂದಿನ ಸಭೆಯಲ್ಲಿ ಸುಮಾರು 100 ಮಂದಿ ಕಂಪನಿ ಪ್ರತಿನಿಧಿ ಹಾಗೂ ಉದ್ಯಮಿಗಳು ಆಗಮಿಸಿದ್ದೀರಾ. ಪ್ರಾಯೋಜಕತ್ವದ ಬಗ್ಗೆ ವಿವರಿಸಿ ಹೇಳಿದ್ದೇವೆ. ಸ್ವಯಂ ಪ್ರೇರಣೆಯಿಂದ ಜಾಹೀರಾತು ನೀಡಬಹುದು, ಯಾರಿಗೂ ಬಲವಂತ ಮಾಡುವುದಿಲ್ಲ ಎಂದು ಡಾ. ಮಹದೇವಪ್ಪ ಪುನರುಚ್ಚರಿಸಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಜಾಹ್ನವಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಾಯತ್ರಿ ಸಭೆಯಲ್ಲಿ ಹಾಜರಿದ್ದರು.

ದಸರಾ ಸಂದರ್ಭ ಮೈಸೂರು ಅರಮನೆ ಸುತ್ತ ಝೀರೋ ಟ್ರಾಫಿಕ್

ಮೈಸೂರು, ಸೆ.11(ಬಿಎಲ್‌ಯು)– ವಿಶ್ವ ವಿಖ್ಯಾತ ದಸರಾ ಸಂದರ್ಭದಲ್ಲಿ ಮೈಸೂರು ಅರಮನೆಯ ಸುತ್ತ ಝೀರೊ ಟ್ರಾಫಿಕ್ ಅನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದರು. ದಸರಾ ಸಂದರ್ಭದಲ್ಲಿ ಅರಮನೆ ಸುತ್ತಲಿನ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗುವ ಕಾರಣ ಅರಮನೆ ಸೇರಿದಂತೆ ಇತರೆ ಸ್ಥಳಗಳ ವೀಕ್ಷಣೆಗೆ ಜನರು ಹೋಗಲು ತೊಂದರೆ ಆಗುತ್ತದೆ ಎಂಬುದನ್ನು ಮನಗಂಡು ಝೀರೊ ಟ್ರಾಫಿಕ್ ಜಾರಿಗೊಳಿಸಲಾಗುವುದು ಎಂದರು. ಪ್ರಾಯೋಗಿಕವಾಗಿ ಇದನ್ನು ಜಾರಿಗೊಳಿಸಲಾಗುವುದು. ಈ ಸಂಬಂಧ ಪೊಲೀಸ್ ಅಧಿಕಾರಿಗಳ ಜೊತೆ ಸಮಗ್ರವಾಗಿ ಚರ್ಚಿಸಲಾಗುವುದು. ಇದರಲ್ಲಿ ಎದುರಾಗುವ ಸಾಧಕ–ಬಾಧಕಗಳನ್ನು ಪರಿಶೀಲನೆ ಮಾಡಲಾಗುವುದು ಎಂದು ಹೇಳಿದರು. ದಸರಾ ಜಂಬೂ ಸವಾರಿ ಮೆರವಣಿಗೆಯ ಪ್ರಮುಖ ಆಕರ್ಷಣೆಯಾದ ಚಿನ್ನದ ಅಂಬಾರಿ ಆನೆ ಸುತ್ತ ಕೂಡ ಝೀರೊ ಜೋನ್ ವ್ಯವಸ್ಥೆ ಮಾಡಲಾಗುವುದು. ಪೊಲೀಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಹೊರತುಪಡಿಸಿ ಬೇರೆ ಯಾರಿಗೂ ಅಲ್ಲಿ ಪ್ರವೇಶ ನೀಡುವುದಿಲ್ಲ ಎಂದು ಡಾ.ಮಹದೇವಪ್ಪ ಮಾಹಿತಿ ನೀಡಿದರು. ಮೈಸೂರಿನ ಸಿಗ್ನಲ್ ಲೈಟ್‌ಗಳಲ್ಲಿ ತಾಂತ್ರಿಕ ಸಮಸ್ಯೆಗಳಿದ್ದು, ದಸರಾಗೂ ಮುನ್ನ ಇದನ್ನು ಸರಿಪಡಿಸಲಾಗುವುದು ಎಂದು ತಿಳಿಸಿದರು. ಕಳೆದ ಬಾರಿಯ ದಸರಾದಲ್ಲಿ ಕೆಲವು ಲೋಪದೋಷಗಳಿತ್ತು. ಆದರೆ ಈ ಬಾರಿ ಅದನ್ನೆಲ್ಲಾ ಸರಿಪಡಿಸಿಕೊಂಡು ಅಚ್ಚುಕಟ್ಟಾಗಿ ದಸರಾ ಆಚರಣೆ ಮಾಡೋಣ ಎಂದು ಡಾ.ಮಹದೇವಪ್ಪ ಭರವಸೆ ನೀಡಿದರು.

ದಸರಾ: ಕಲಾ ಪ್ರದರ್ಶನಕ್ಕೆ ಕಲಾಕೃತಿಗಳ ಆಹ್ವಾನ

ಮೈಸೂರು, ಸೆ.11–ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಸಂಬಂಧ ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ವತಿಯಿಂದ ಸಿದ್ದಾರ್ಥನಗರದ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಸಂಸ್ಥೆಯ ಆವರಣದಲ್ಲಿ ಅ.4ರಿಂದ 7 ರವರೆಗೆ ನಡೆಯುವ ರಾಜ್ಯ ಮಟ್ಟದ ದಸರಾ ಕಲಾ ಪ್ರದರ್ಶನಕ್ಕೆ ಕಲಾಕೃತಿಗಳನ್ನು ಆಹ್ವಾನಿಸಲಾಗಿದೆ.

ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ, ಛಾಯಾಚಿತ್ರ, ಅನ್ವಯ ಕಲೆ ವಿಭಾಗಗಳಲ್ಲಿ ವೃತ್ತಿಪರ ಹಾಗೂ ಹವ್ಯಾಸಿ ವಿಭಾಗಗಳಿರುತ್ತದೆ. ಕಲಾಕೃತಿಗಳನ್ನು ಸೆಪ್ಟೆಂಬರ್ 17 ರಿಂದ 30 ರೊಳಗೆ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಸಂಸ್ಥೆಯ ಕಚೇರಿ ಅವಧಿಯಲ್ಲಿ ಸಲ್ಲಿಸಬೇಕು. ಎಲ್ಲಾ ವಿಭಾಗಗಳಲ್ಲಿ ಅತ್ಯುತ್ತಮ ಮೂರು ಕಲಾಕೃತಿಗಳಿಗೆ ಬಹುಮಾನ ನೀಡಲಾಗುವುದು. ಕಲಾಕೃತಿಗಳನ್ನು ಸಲ್ಲಿಸುವ ಕಲಾವಿದರು ಸಂಪೂರ್ಣ ವಿವರವನ್ನು ಸ್ವಯಂ ದೃಢೀಕರಣದೊಂದಿಗೆ ಉಪಸಮಿತಿಗೆ ತಲುಪಿಸಬೇಕು. ಕಲಾಕೃತಿಯು ಅಕ್ಟೋಬರ್ 2023ರ ನಂತರ ರಚಿಸಿರಬೇಕು ಹಾಗೂ ಬಹುಮಾನ ಪಡೆದ ಕಲಾಕೃತಿಯಾಗಿರಬಾರದು. ಒಂದು ವಿಭಾಗಕ್ಕೆ ಎರಡು ಕಲಾಕೃತಿಗಳನ್ನು ಪ್ರದರ್ಶನಕ್ಕೆ ಕಳುಹಿಸಬಹುದು. ಯಾವುದೇ ಒಂದು ವಿಭಾಗದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಕಲಾಕೃತಿಯು 1x1 ಅಡಿಗಿಂತ ಚಿಕ್ಕದು, 3x3 ಅಡಿಗಿಂತ ದೊಡ್ಡದಿರಬಾರದು. ಶಿಲ್ಪವು 20 ಕೆಜಿಗಿಂತ ಕಡಿಮೆ ಭಾರವಾಗಿರಬೇಕು. ಚಿತ್ರಕಲಾಕೃತಿಯನ್ನು ಫ್ರೇಮ್‌ನೊಂದಿಗೆ ಮತ್ತು ಶಿಲ್ಪಕೃತಿಯನ್ನು ಪೀಠದೊಂದಿಗೆ ಕಳುಹಿಸಬೇಕು. ಶಿಲ್ಪವು ದುರ್ಬಲ (Fragile) ಮಾಧ್ಯಮದಿಂದ ನಿರ್ಮಿತವಾಗಿರಬಾರದು. ಕಲಾ ಪ್ರದರ್ಶನ ಮುಗಿದ ನಂತರ ಅ.8ರಿಂದ 14 ರೊಳಗೆ ಕಲಾಕೃತಿಗಳನ್ನು ಹಿಂಪಡೆಯಬೇಕು.

ಅರ್ಜಿ ನಮೂನೆಯನ್ನು https://cavamysore.karnataka.gov.in ಅಥವಾ https://mysore.nic.in ವೆಬ್‌ಸೈಟ್ ಮೂಲಕ ಪಡೆಯಬಹುದು.

ವಿವರಗಳಿಗಾಗಿ ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿಯ ಚಂದ್ರಶೇಖರ ಎ.ಪಿ ಅವರ ಮೊ.ಸಂ:9844595568, ರವಿಮೂರ್ತಿ, 9844082579 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ದಸರಾ ಮಹೋತ್ಸವದ ಲಲಿತಕಲೆ ಮತ್ತು ಕರಕುಶಲ ಉಪಸಮಿತಿಯ ಕಾರ್ಯಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಗಜಪಡೆ ಪರಿವಾರದ ಆರೋಗ್ಯ ತಪಾಸಣೆ



ಮೈಸೂರು ಅರಮನೆ ಆವರಣದಲ್ಲಿ ಬುಧವಾರ ದಸರಾ ಗಜಪಡೆಯ ಮಾವುತರು, ಕಾವಾಡಿಗಳಿಗೆ ನಾರಾಯಣ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು.

ಮೈಸೂರು, ಸೆ.11(ಎಂಟಿವೈ)– ದಸರಾ ಗಜಪಡೆಯ ಮಾವುತ, ಕಾವಾಡಿ ಹಾಗೂ ಕುಟುಂಬದ ಸದಸ್ಯರಿಗೆ ಬುಧವಾರ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ 150ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಮೈಸೂರು ಅರಮನೆ ಆವರಣದಲ್ಲಿರುವ ದಸರಾ ಗಜಪಡೆ ಬಿಡಾರದ ಬಳಿ ಅರಣ್ಯ ಇಲಾಖೆ ಮೈಸೂರಿನ ನಾರಾಯಣ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಈ ಶಿಬಿರದಲ್ಲಿ ಗಜಪಡೆ 14 ಆನೆಗಳ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬದ ಸದಸ್ಯರು, ಭದ್ರತಾ ಸಿಬ್ಬಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ನಾರಾಯಣ ಆಸ್ಪತ್ರೆಯ 20ಕ್ಕೂ ಹೆಚ್ಚು ವೈದ್ಯರು, ದಾದಿಯರು, ಲ್ಯಾಬ್ ಟೆಕ್ನಿಷಿಯನ್ ಸೇರಿದಂತೆ ಇನ್ನಿತರ ಸಿಬ್ಬಂದಿ ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಬಿಪಿ, ಇಸಿಜಿ, ಎಕೋ, ಬಿಎಂಡಿ ಹಾಗೂ ಇನ್ನಿತರ ತಪಾಸಣೆ ಮಾಡಲಾಯಿತು. ಮಹಿಳೆಯರಿಗಾಗಿ ಸ್ತ್ರೀರೋಗ ಸಮಸ್ಯೆ ತಪಾಸಣೆ ಮಾಡಿ ಅಗತ್ಯವುಳ್ಳವರಿಗೆ ಚಿಕಿತ್ಸೆ ನೀಡಲಾಯಿತು. ಈ ವೇಳೆ ಡಿಸಿಎಫ್ ಡಾ. ಐ.ಬಿ.ಪ್ರಭುಗೌಡ ಮಾತನಾಡಿ, ಅರಣ್ಯ ಇಲಾಖೆಯಿಂದ ದಸರಾ ಗಜಪಡೆಯೊಂದಿಗೆ ಮಾವುತರು, ಕಾವಾಡಿಗಳ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಹಾಗಾಗಿ ನಾರಾಯಣ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಎಲ್ಲಾ ಆನೆಗಳ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬದ ಸದಸ್ಯರು ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆ. ಈಗಾಗಲೇ ಅರಮನೆ ಆವರಣದಲ್ಲಿ ಗಜಪಡೆಯ ಸ್ವಾಸ್ಥ್ಯದತ್ತ ಹೆಚ್ಚಿನ ನಿಗಾ ಇಡಲಾಗಿದೆ. ಎಲ್ಲಾ ಆನೆಗಳಿಗೂ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಎಲ್ಲವೂ ಆರೋಗ್ಯದಿಂದಿವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ನಾರಾಯಣ ಆಸ್ಪತ್ರೆಯ ವೈದ್ಯಕೀಯ ಉಪ ಅಧೀಕ್ಷಕ ಡಾ.ದೀಪಕ್ ಬೆಟದೂರ್, ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಸಂತ ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಅರಮನೆ ಭದ್ರತಾ ವಿಭಾಗದ ಎಸಿಪಿ ಹೆಚ್. ಚಂದ್ರಶೇಖರ್, ಆಸ್ಪತ್ರೆಯ ಪಿಆರ್‌ಓ ನವೀನ್ ಕವಿರತ್ನ ಇನ್ನಿತರರು ಉಪಸ್ಥಿತರಿದ್ದರು.

ಕಂಗೊಳಿಸಲಿದೆ ದಸರಾ ಫಲಪುಷ್ಪ ಪ್ರದರ್ಶನ

- ಒಂದು ಲಕ್ಷ ಹೂವಿನ ಗಿಡಗಳ ಪಾಟ್
- 35 ರಿಂದ 40 ತಳಿಯ ನಾನಾ ಬಣ್ಣದ ಹೂವಿನ ಗಿಡಗಳು

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಸೆ.11– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಸದ್ದಿಲ್ಲದೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ತೋಟಗಾರಿಕಾ ಇಲಾಖೆಯ ವಿವಿಧ ನರ್ಸರಿಗಳಲ್ಲಿ 35 ಬಗೆಯ ಒಂದು ಲಕ್ಷ ಹೂವಿನ ಕುಂಡಗಳಲ್ಲಿ ಹೂವಿನ ಗಿಡ ಬೆಳೆಸಲಾಗಿದೆ.

ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿಯ ಕುಪ್ಪಣ್ಣ ಪಾರ್ಕ್‌ನಲ್ಲಿ ಅ.3ರಿಂದ ಅ.12 ಅಥವಾ 13ರವರೆಗೆ ದಸರಾ ಫಲಪುಷ್ಪ ಪ್ರದರ್ಶನ ನಡೆಯಲಿದ್ದು, ಈ ಬಾರಿ 35ರಿಂದ 40ಕ್ಕೂ ಹೆಚ್ಚು ತಳಿಯ ವಿವಿಧ ಬಣ್ಣಗಳ ಹೂವಿನ ಹಾಗೂ ಅಲಂಕಾರಿಕ ಗಿಡಗಳು ನೋಡುಗರ ಮನ ಸೂರೆಗೊಳ್ಳಲಿವೆ. ಫಲಪುಷ್ಪ ಪ್ರದರ್ಶನಕ್ಕಾಗಿ ಈಗಾಗಲೇ ವಿವಿಧ ನರ್ಸರಿಗಳಲ್ಲಿ 120 ದಿನದಿಂದ 30 ದಿನದಲ್ಲಿ ಹೂವು ಬಿಡುವ ಗಿಡಗಳನ್ನು ಪಾಟ್‌ಗಳಲ್ಲಿ ಬೆಳೆಸಲಾಗಿದ್ದು, ಫಲಪುಷ್ಪ ಪ್ರದರ್ಶನವನ್ನು ಎದುರು ನೋಡುತ್ತಿವೆ.

ಒಂದು ಲಕ್ಷ ಹೂವಿನ ಕುಂಡ: ನವರಾತ್ರಿಯ ವೇಳೆ ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯಲಿರುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಒಂದು ಲಕ್ಷಕ್ಕೂ ಹೆಚ್ಚು ಹೂವಿನ ಕುಂಡಗಳಲ್ಲಿ ಬಗೆಬಗೆಯ ಹೂವಿನ ಗಿಡಗಳನ್ನು ಬೆಳೆಸಲಾಗಿದೆ. ಫಲಪುಷ್ಪ ಪ್ರದರ್ಶನಕ್ಕೆ ಬಳಸುವ ಹೂವಿನ ಗಿಡಗಳುಳ್ಳ ಹೂವಿನ ಕುಂಡಗಳನ್ನು ಕೇಂದ್ರ ಸಸ್ಯಗಾರ, ಕುಪ್ಪಣ್ಣ ಪಾರ್ಕ್, ಸರ್ಕಾರಿ ಅತಿಥಿ ಗೃಹ, ಜಲದರ್ಶಿನಿ ವಿಭಾಗ, ಕರ್ಜನ್ ಪಾರ್ಕ್, ಗೋರ್ಡಾನ್ ಪಾರ್ಕ್ ಮತ್ತು ವಸ್ತು ಪ್ರದರ್ಶನದಲ್ಲಿರುವ ತೋಟಗಾರಿಕೆ ವಿಭಾಗಗಳಲ್ಲಿ ಪಾಲನೆ ಮಾಡಲಾಗುತ್ತಿದೆ. ಗಿಡಗಳಿಗೆ ಗೊಬ್ಬರ ಹಾಕಿ ಸಕಾಲಕ್ಕೆ ನೀರುಣಿಸುವ ಮೂಲಕ ಹೂವಿನ ಗಿಡದ ಸತ್ವವನ್ನು ಕಾಪಾಡಿಕೊಳ್ಳಲಾಗುತ್ತಿದೆ. ಈ ಹೂವಿನ ಗಿಡಗಳ ಪಾಟ್‌ಗಳಲ್ಲಿ ಕುಪ್ಪಣ್ಣ ಪಾರ್ಕ್‌ನ ಆಯ್ದ ಸ್ಥಳದಲ್ಲಿ, ವಾಕಿಂಗ್ ಪಾಥ್‌ನಲ್ಲಿ ಜೋಡಿಸಲಾಗುತ್ತದೆ. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಗಾಜಿನ ಮನೆಯಲ್ಲಿ: ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಪ್ರಮುಖ ಆಕರ್ಷಣೆ ಗಾಜಿನ ಮನೆ. ಇದರಲ್ಲಿ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷ ಸಂದ ಹಿನ್ನೆಲೆಯಲ್ಲಿ 'ಕರ್ನಾಟಕ ಸಂಭ್ರಮ', 'ಭಾರತದ ಸಂವಿಧಾನ' ಅಥವಾ 'ಮಹಿಳಾ ಶಿಕ್ಷಣ' ಕುರಿತ ಮೂರು ಥೀಮ್‌ನಲ್ಲಿ ಹೂವಿನ ಆಕೃತಿ ಮೂಡಿಸುವ ಪ್ರಸ್ತಾಪ ನೀಡಲಾಗಿದ್ದು, ಅವುಗಳಲ್ಲಿ ಯಾವ ಥೀಮ್ ಆಯ್ಕೆಯಾಗುತ್ತದೆ ಎಂದು ಇನ್ನೆರಡು ದಿನದಲ್ಲಿ ತೀರ್ಮಾನವಾಗಲಿದೆ. ಬಹುತೇಕ ಕರ್ನಾಟಕ ಸಂಭ್ರಮ ಥೀಮ್ ಆಯ್ಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಇದರೊಂದಿಗೆ ಕುಪ್ಪಣ್ಣ ಪಾರ್ಕ್‌ನಲ್ಲಿ ಭೂಮಿ ಉಳಿಸಿ, ಒಲಂಪಿಕ್ ಚಿನ್ನದ ಪದಕ ವಿಜೇತರು, ಟಿ–20 ವಿಶ್ವಕಪ್, ಕುಪ್ಪಳ್ಳಿ ಕವಿ ಮನೆ ಸೇರಿದಂತೆ ಇನ್ನಿತರ ಆಕೃತಿ ಹೂವುಗಳಿಂದ ತಲೆ ಎತ್ತಬಹುದು.

ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ: ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಹಬೀಬಾ ನಿಶಾಥ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಫಲಪುಷ್ಪ ಪ್ರದರ್ಶನಕ್ಕೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಸೆ.18ಕ್ಕೆ ಟೆಂಡರ್ ಸಲ್ಲಿಸಲು ಕೊನೆ ದಿನವಾಗಿದೆ. ಈ ಬಾರಿ ಪ್ರವೇಶ ಶುಲ್ಕ, ಆಹಾರ ಮಳಿಗೆ ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್ ಸೇರಿದಂತೆ ಟೆಂಡರ್ ಕರೆಯಲಾಗಿದೆ. ಮತ್ತೊಂದೆಡೆ ಫಲಪುಷ್ಪ ಪ್ರದರ್ಶನಕ್ಕೆ ಬೇಕಾದ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ. ಈ ವಾರದಲ್ಲಿ ಎಲ್ಲಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದರು.



ಫಲಪುಷ್ಪ ಪ್ರದರ್ಶನಕ್ಕೆ ಹೂವಿನ ಗಿಡ ಬೆಳೆಸಿರುವುದು

ಪುಣೆ, ಊಟಿಯಿಂದಲೂ ಬರುತ್ತಿದೆ ಹೂವಿನ ಗಿಡ...

ದಸರಾ ಫಲಪುಷ್ಪ ಪ್ರದರ್ಶನಕ್ಕಾಗಿ ಈಗಾಗಲೇ ಒಂದು ಲಕ್ಷಕ್ಕೂ ಹೆಚ್ಚು ಹೂವಿನ ಕುಂಡಗಳಲ್ಲಿ ಗಿಡಗಳನ್ನು ಬೆಳೆಸಲಾಗಿದೆ. ಫ್ರೆಂಚ್ ಮೇರಿ ಗೋಲ್ಡ್, ಡಯಾಂತರ್ಸ್, ವರ್ಬಿನ, ಬಿಗೋನಿಯಾ, ದಾಲಿಯಾ, ಫೈರ್ ಬುಸ್, ಆರ್ನಮೆಂಟಲ್ ಕೇಲಾ, ಜೀನಿಯಾ, ವಿಂಕಾ, ಸಾಲ್ವಿಯಾ, ಮಾರಿಗೋಲ್ಡ್, ಸ್ವೀಟ್ ವಿಲಿಯಮ್, ಸೆಲೋಶಿಯಾ ಸೇರಿದಂತೆ 40ಕ್ಕೂ ಹೆಚ್ಚು ತಳಿಯ ಗಿಡಗಳನ್ನು ಬೆಳೆಸಲಾಗಿದೆ. ಇದರೊಂದಿಗೆ ಎಕ್ಸಾಟಿಕ್ ಸ್ಪೀಶಿಯಸ್ ಹೂವಿನ ಗಿಡಗಳನ್ನು ಖರೀದಿಸಲಾಗುತ್ತಿದೆ. ಅವುಗಳಲ್ಲಿ ಲಿಲ್ಲೀಸ್, ಕುರ್ಕುಮಾ, ಚೆಲಾಂಚೋಸ್ ಹಾಗೂ ಇನ್ನಿತರ ಹೂವಿನ ಗಿಡಗಳಿವೆ. ಪುಣೆ, ಊಟಿಯಿಂದಲೂ ಹೂವಿನ ಗಿಡಗಳನ್ನು ಖರೀದಿಸಿ ತರಲಾಗುತ್ತಿದೆ. ಪ್ರದರ್ಶನದಲ್ಲಿ ಬಳಸಲಾಗುವ ಹೂವಿನ ಗಿಡಗಳು ಹಂತ ಹಂತವಾಗಿ ಹೂವು ಬಿಡುವುದರಿಂದ ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗಿದೆ. ಟೆಂಡರ್ ಕರೆಯಲಾಗಿದ್ದು, ಒಂದು ವಾರದಲ್ಲಿ ಎಲ್ಲಾ ಸಿದ್ಧತೆಯೂ ಪೂರ್ಣಗೊಳ್ಳಲಿದೆ.

–ಮಂಜುನಾಥ್ ಅಂಗಡಿ, ಉಪನಿರ್ದೇಶಕ, ತೋಟಗಾರಿಕಾ ಇಲಾಖೆ

ಈ ಬಾರಿ ದಸರಾದಲ್ಲಿ ದೊಡ್ಡಾಟ, ಯಕ್ಷಗಾನ, ಮೂಡಲಪಾಯ ಕಲಾ ಪ್ರಕಾರಗಳಿಗೆ ಅವಕಾಶ

ಮೈಸೂರು, ಸೆ.11(ಜಿಎ)–ಮೈಸೂರಿನ ರಂಗಾಯಣದ ವತಿಯಿಂದ ನವರಾತ್ರಿಯಲ್ಲಿ ಅಳಿವಿನಂಚಿನಲ್ಲಿರುವ ಕಲಾ ಪ್ರಕಾರಗಳಿಗೆ ವೇದಿಕೆ ಸೃಷ್ಟಿಸಲು ನಿರ್ಧರಿಸಲಾಗಿದೆ.



ಕಳೆದ ಬಾರಿಯಿಂದ ನಟನ ರಂಗಶಾಲೆ ಸೇರಿದಂತೆ ವಿವಿಧೆಡೆ ನಾಟಕ ಪ್ರದರ್ಶನ ಏರ್ಪಡಿಸುತ್ತಿರುವುದರಿಂದ ರಂಗಾಯಣ ಈ ಬಾರಿ ವಿಭಿನ್ನ ರೀತಿಯಲ್ಲಿ ಚಿಂತಿಸಿ, ಅಳಿವಿನಂಚಿನಲ್ಲಿರುವ ಕಲೆ ಮತ್ತು ಕಲಾವಿದರಿಗೆ ಅವಕಾಶ ನೀಡಿ ಪೋಷಿಸಲು ನಿರ್ಧರಿಸಿದೆ.

ದೊಡ್ಡಾಟ, ಯಕ್ಷಗಾನ, ಮೂಡಲಪಾಯ ಸೇರಿದಂತೆ ನಾಡಿನ ವಿವಿಧ ಭಾಗದಲ್ಲಿ ತಮ್ಮ ಸಂಸ್ಕೃತಿಗಳ ಮೂಲಕ ಖ್ಯಾತಿಗಳಿಸಿರುವ ಕಲೆ ಮತ್ತು ನಶಿಸುತ್ತಿರುವ ಕಲೆಗಳಿಗೆ ವೇದಿಕೆ ಸೃಷ್ಟಿಸಲು ಆಲೋಚಿಸಿರುವ ರಂಗಾಯಣ ಈ ಕಾರ್ಯಕ್ರಮ ರೂಪಿಸಲು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳುತ್ತಿದೆ.

ರಾಜ್ಯ ವಿವಿಧ ತಂಡಗಳ ಜೊತೆ ಚರ್ಚಿಸಲಾಗುತ್ತಿದ್ದು, ನವರಾತ್ರಿಯ 9 ದಿನ 9 ತಂಡಗಳು ಪ್ರದರ್ಶನ ನೀಡಲಿವೆ. ಸದ್ಯದಲ್ಲಿಯೇ ಎಲ್ಲಾ ರೀತಿಯ ಮಾಹಿತಿಯನ್ನು ಒದಗಿಸಲಾಗುತ್ತದೆ ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದಸರಾ ಮಹೋತ್ಸವದ ಸಂದರ್ಭದಲ್ಲಿ ನಗರ ರಮಾಗೋವಿಂದ, ನಟನ ರಂಗಶಾಲೆ, ಕಿರುರಂಗ ಮಂದಿರ ಸೇರಿದಂತೆ ವಿವಿಧ ಸ್ಥಳದಲ್ಲಿ ನಾಟಕ ಪ್ರದರ್ಶನಗಳು ನಡೆಯುವುದು ಸಾಮಾನ್ಯವಾಗಿದೆ. ಆದ್ದರಿಂದ ಈ ಬಾರಿ ರಂಗಾಯಣದ ವತಿಯಿಂದ ಅಳಿವಿನಂಚಿನಲ್ಲಿರುವ ಕಲೆಗೆ ವೇದಿಕೆ ಸೃಷ್ಟಿಸುವ ಆಲೋಚನೆ ಮಾಡಲಾಗಿದೆ. ರಾಜ್ಯ ವಿವಿಧ ಭಾಗದ ಕಲಾ ಪ್ರಕಾರಗಳು ಎಲ್ಲರಿಗೂ ತಿಳಿಯಬೇಕು ಎಂಬ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದ ನಮ್ಮ ಮುಂದಿನ ಪೀಳಿಗೆಗೂ ನಮ್ಮ ದೊಡ್ಡಾಟ, ಯಕ್ಷಗಾನ, ಮೂಡಲಪಾಯ ಸೇರಿದಂತೆ ನಾಡಿನ ವಿವಿಧ ಭಾಗದ ಕಲೆಗಳು ಪರಿಚಯವಾಗುತ್ತದೆ ಎಂದರು.

ಮಂಡ್ಯ ನಗರದಲ್ಲೇ ಸಾಹಿತ್ಯ ಸಮ್ಮೇಳನ ಆಯೋಜನೆಗೊಳ್ಳಲಿ



ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಜಿ.ಟಿ.ವೀರಪ್ಪ ಸಾಹಿತ್ಯ ಸಂವಾದದಲ್ಲಿ ಮಾತನಾಡಿದರು.

ಮಂಡ್ಯ,ಸೆ.11– ಮುಂಬರುವ ಡಿಸೆಂಬರ್‌ನಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಸಕ್ಕರೆ ನಗರಿ ಎಂಬ ಖ್ಯಾತಿ ಪಡೆದಿರುವ ಮಂಡ್ಯ ನಗರ ವ್ಯಾಪ್ತಿಯಲ್ಲೇ ಆಯೋಜನೆಗೊಳ್ಳುವುದು ಸೂಕ್ತ ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಹಾಗೂ 63ನೇ ಸಾಹಿತ್ಯ ಸಮ್ಮೇಳನದ ಆಯೋಜಕರಲ್ಲೊಬ್ಬರಾಗಿದ್ದ ಜಿ.ಟಿ.ವೀರಪ್ಪ ಅಭಿಪ್ರಾಯಿಸಿದ್ದಾರೆ.

ಬುಧವಾರ ನಗರದ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ವಾರದ ಸಾಹಿತ್ಯ ಸಂವಾದ ಕಾರ್ಯಕ್ರಮದ ಮೊದಲ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಪ್ರಸ್ತುತ ನಿಗದಿಯಾಗಿರುವ ಮಂಡ್ಯ ನಗರದ ಹೊರವಲಯದ ಜಾಗ ಸಮ್ಮೇಳನಕ್ಕೆ ಸೂಕ್ತವಲ್ಲ, ಮಂಡ್ಯ ನಗರ ವ್ಯಾಪ್ತಿಯಲ್ಲಿ ಸರ್.ಎಂ.ವಿ ಕ್ರೀಡಾಂಗಣ, ಮಂಡ್ಯ ವಿ.ವಿ. ಆವರಣ, ಪಿಇಎಸ್ ಶಿಕ್ಷಣ ಸಂಸ್ಥೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ, ಡಾ.ಬಿ.ಆರ್.ಅಂಬೇಡ್ಕರ್ ಭವನ, ರೈತ ಸಭಾಂಗಣ, ವಿವೇಕಾನಂದ ರಂಗ ಮಂದಿರ ಸೇರಿದಂತೆ ಹಲವು ಸ್ಥಳಗಳಿದ್ದು, ಮುಖ್ಯ ವೇದಿಕೆ ಹಾಗೂ ಉಪ ವೇದಿಕೆ ನಿರ್ಮಿಸಲು ಮತ್ತು ಜನ ಸಮೂಹ ಪಾಲ್ಗೊಳ್ಳಲು ಸಹಕಾರಿಯಾಗಲಿದೆ ಎಂದರು.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು, ಜಿಲ್ಲೆಯ ಉನ್ನತ ಅಧಿಕಾರಿಗಳು ಲಕ್ಷಗಟ್ಟಲೆ ಜನ ಸಮ್ಮೇಳನಕ್ಕೆ ಆಗಮಿಸುತ್ತಾರೆಂಬ ಭ್ರಮೆ ಬಿಡಬೇಕು. ಸಾಹಿತ್ಯಾಸಕ್ತರ ಸಂಖ್ಯೆ ಹತ್ತಾರು ಸಾವಿರಗಳಿಗಷ್ಟೇ ಮೀಸಲಾಗಿರುತ್ತದೆ. ಜನ ಸಾಮಾನ್ಯರ ಪಾಲ್ಗೊಳ್ಳುವಿಕೆ ಸಮ್ಮೇಳನದ ಯಶಸ್ಸನ್ನು ಬಿಂಬಿಸುತ್ತದೆ. ಆ ಕಾರಣಕ್ಕಾಗಿ ನಗರ ವ್ಯಾಪ್ತಿಯಲ್ಲೇ ಸಮ್ಮೇಳನ ಆಯೋಜನೆಯಾಗುವುದು ಸೂಕ್ತವೆಂದು ತಿಳಿಸಿದರು.

ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ವಿಸ್ತೃತವಾಗಿ ಸಾಹಿತ್ಯ ಕೃಷಿ ಮಾಡಿರುವ ಸಾಹಿತಿಗಳನ್ನು ಪಟ್ಟಿ ಮಾಡಿ ಸೂಕ್ತ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವುದು ಸೂಕ್ತ. ವಿದೇಶಿಗರು ಅಥವಾ ಸಾಹಿತ್ಯ ಕ್ಷೇತ್ರದ ಹೊರಗಿನ ವ್ಯಕ್ತಿಗಳನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡುವುದು ಸರಿಯಲ್ಲ. ನಿತ್ಯ ಸಚಿವ ಕೆ.ವಿ.ಶಂಕರಗೌಡ ಅವರಿಗೆ ಕಲೆ, ಸಾಹಿತ್ಯ, ಸಂಗೀತ ಹಾಗೂ ರಂಗಭೂಮಿಗಳಲ್ಲಿ ವಿಶೇಷವಾದ ಆಸಕ್ತಿ ಇತ್ತು, ಅದೇ ರೀತಿ ಸಾಹಿತ್ಯ ಕೃಷಿಯ ಅನುಭವಿಗಳನ್ನು ಅಧ್ಯಕ್ಷರನ್ನಾಗಿಸಲು ಮಹೇಶ್ ಜೋಷಿ ಹಾಗೂ ಉಸ್ತುವಾರಿ ಸಚಿವರು ಮತ್ತು ಜನಪ್ರತಿನಿಧಿಗಳು ಆಸಕ್ತಿ ತೋರಬೇಕೆಂದು ಹೇಳಿದರು.

ಸಾಹಿತ್ಯ ಸಮ್ಮೇಳನದ ಸಂಚಾಲಕರನ್ನಾಗಿ ಮೀರಾ ಶಿವಲಿಂಗಯ್ಯ ಅವರನ್ನು ಆಯ್ಕೆ ಮಾಡಿರುವುದು ಸಮಯೋಚಿತವಾಗಿದೆ. ಅವರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮ್ಮೇಳನ ಯಶಸ್ವಿಗೊಳಿಸುವ ಹೊಣೆಗಾರಿಕೆ ನಿಭಾಯಿಸುತ್ತಾರೆಂದ ಅವರು, 1994ರಲ್ಲಿ ಆಯೋಜನೆಗೊಂಡಿದ್ದ 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 42 ಲಕ್ಷ ರೂಪಾಯಿ ಹಣ ಸಂಗ್ರಹವಾಗಿ ಸಮ್ಮೇಳನಕ್ಕೆ 22 ಲಕ್ಷ ವ್ಯಯಿಸಿ, ಸಮ್ಮೇಳನ ಯಶಸ್ವಿಗೊಳಿಸಲಾಯಿತು. ಉಳಿದ 20 ಲಕ್ಷ ಪೈಕಿ 6.25 ಲಕ್ಷ ರೂ. ವೆಚ್ಚದಲ್ಲಿ ಸಾಹಿತ್ಯ ಭವನ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ನಿರ್ಮಾಣಕ್ಕೆ 8.50 ಲಕ್ಷ, ರೈತ ಸಭಾಂಗಣ ಆವರಣದಲ್ಲಿರುವ ಕುವೆಂಪು ಪ್ರತಿಮೆ ನಿರ್ಮಾಣಕ್ಕೆ 4 ಲಕ್ಷ ಹಾಗೂ ಜನಪದ ಲೋಕ ಅಭಿವೃದ್ಧಿಗೆ 1 ಲಕ್ಷ ವಂತಿಕೆ ನೀಡಲಾಗಿತ್ತು. ಅದೇ ರೀತಿ ಈ ಬಾರಿ ಸಂಗ್ರಹವಾಗುವ ಹಣದಲ್ಲಿ ಉಳಿದ ಹಣವನ್ನು ಸಾಹಿತ್ಯ ಚಟುವಟಿಕೆಗಳಿಗೆ ಪೂರಕವಾಗುವ ರೀತಿಯಲ್ಲಿ ಸುಸಜ್ಜಿತ ಭವನವನ್ನು ನಿರ್ಮಿಸಲು ಮುಂದಾಗಲಿ ಎಂದು ಸಲಹೆ ನೀಡಿದರು.

ಸಂವಾದದಲ್ಲಿ ಸಮ್ಮೇಳನದ ಜಿಲ್ಲಾ ಸಂಚಾಲಕಿ ಡಾ.ಮೀರಾ ಶಿವಲಿಂಗಯ್ಯ, ವಾರ್ತಾಧಿಕಾರಿ ಎಚ್.ಎಸ್.ನಿರ್ಮಲಾ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಪಿ.ಪ್ರಕಾಶ್, ಮಾಜಿ ಅಧ್ಯಕ್ಷರಾದ ಪಿ.ಜೆ.ಚೈತನ್ಯ ಕುಮಾರ್, ಸೋಮಶೇಖರ್ ಕೆರಗೋಡು, ಪ್ರಧಾನ ಕಾರ್ಯದರ್ಶಿ ಆನಂದ್, ಉಪಾಧ್ಯಕ್ಷ ನವೀನ್‌ಕುಮಾರ್ ಉಪಸ್ಥಿತರಿದ್ದರು.

ನಾಳೆ ಮಂಡ್ಯಕ್ಕೆ ಗವರ್ನರ್: ಕಪ್ಪುಬಾವುಟ ಪ್ರದರ್ಶನಕ್ಕೆ ನಿರ್ಧಾರ

ಮಂಡ್ಯ,ಸೆ.11– ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮಂಡ್ಯ ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮಕ್ಕೆ ಸೆ.13ರಂದು ಆಗಮಿಸಲಿದ್ದು ಈ ಸಂದರ್ಭದಲ್ಲಿ ರಾಜ್ಯಪಾಲರ ವಿರುದ್ಧ ರಾಜ್ಯಪಾಲ ತೊಲಗಿಸಿ ಕರ್ನಾಟಕ ಸಂರಕ್ಷಿಸಿ. ಕಪ್ಪು ಬಟ್ಟೆ ಪ್ರದರ್ಶನ ಚಳುವಳಿಯನ್ನು ಹಮ್ಮಿಕೊಂಡಿರುವುದಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸುಂಡಹಳ್ಳಿ ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ರಾಜ್ಯಪಾಲರಾದ ಥಾವರ್ ಚಂದ್ ಗೆಹಲೋಟ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ನೀಡುವ ಸಂದರ್ಭ ಸಂವಿಧಾನದ ಮೂಲ ತತ್ವಗಳನ್ನು ಹಾಗೂ ಪ್ರಜಾಪ್ರಭುತ್ವದ ಆಶಯಗಳನ್ನು ಗಾಳಿಗೆ ತೂರಿದ್ದಾರೆ ಎಂದು ದೂರಿದರು. ಕೋಮುವಾದಿ ರಾಜಕಾರಣ ಮಾಡುತ್ತಿರುವ ಬಿಜೆಪಿ ಮತ್ತು ಜಾತಿವಾದಿ ರಾಜಕಾರಣ ಮಾಡುತ್ತಿರುವ ಜೆಡಿಎಸ್ ಪಕ್ಷಗಳ ಕಚೇರಿಯನ್ನಾಗಿ ರಾಜಭವನವನ್ನು ಪರಿವರ್ತಿಸಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಜನರಿಂದ ಆಯ್ಕೆಯಾದ ಸರ್ಕಾರದ ಮುಖ್ಯಸ್ಥರಾಗಿರುವ ಮುಖ್ಯಮಂತ್ರಿಗಳ ವಿರುದ್ಧ ನಡೆಯುತ್ತಿರುವ ಪಿತೂರಿ ಷಡ್ಯಂತ್ರಗಳ ಭಾಗವಾಗಿ ರಾಜ್ಯಪಾಲರು ವರ್ತಿಸುತ್ತಿದ್ದು ಆ ಮೂಲಕ ಸಂವಿಧಾನಕ್ಕೆ ಅಪಮಾನ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಕರ್ನಾಟಕ ಲೋಕಾಯುಕ್ತ, ಎಸ್‌ಐಟಿ ಮುಂತಾದ ತನಿಖಾ ಸಂಸ್ಥೆಗಳು ಪ್ರಾಥಮಿಕ ತನಿಖೆ ನಡೆಸಿ, ಪ್ರಾಥಮಿಕ ತನಿಖೆಯಲ್ಲಿ ತಪ್ಪಿತಸ್ಥರು ಎಂದು ಮೇಲ್ನೋಟಕ್ಕೆ ಸಾಬೀತಾದ ಪ್ರಕರಣಗಳ ಕುರಿತು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿ ಎಂದು ಕೋರಿಕೆ ಸಲ್ಲಿಸಿದರೂ ರಾಜ್ಯಪಾಲರು ಅದನ್ನು ಕಸದ ಬುಟ್ಟಿಗೆ ಎಸೆದು ಪಕ್ಷಪಾತ ಮಾಡುತ್ತಿದ್ದಾರೆ ಎಂದು ಆಪಾದಿಸಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ವಕ್ತಾರ ಸಿ.ಎಂ.ದ್ಯಾವಪ್ಪ, ನಗರಸಭೆ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ರಾಘುನಂದನ್, ಮುಖಂಡರಾದ ನಾಗರಾಜು, ರಾಜಣ್ಣ ಮುಜಾಹಿದ್, ಅಮುಜದ್ ಪಾಷಾ ಇತರರಿದ್ದರು.


ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ,ಸೆ.11– ಕೋಲಕಾರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಸೆ.12ರಂದು ಬೆಳಿಗ್ಗೆ 9ಗಂಟೆಯಿಂದ ಸಂಜೆ 6ರವರೆಗೆ ತಗ್ಗಹಳ್ಳಿ, ಕೋಲಕಾರನದೊಡ್ಡಿ, ಹೆಮ್ಮಿಗೆ, ಸೂನಗನಹಳ್ಳಿ, ಪುರ, ಲೋಕಸರ, ಹಲುವಾಡಿ, ಕಮ್ಮಾಯಕನಹಳ್ಳಿ, ಟಿ.ಮಲ್ಲಿಗೆರೆ, ಕಬ್ಬನಹಳ್ಳಿ, ತಿಮ್ಮನಹೊಸೂರು, ಬಿ ಹೊಸೂರು, ಗೋಪನಹಳ್ಳಿ, ಯಡಗನಹಳ್ಳಿ, ಮಾದರಹಳ್ಳಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಮಂಡ್ಯ ಸೆಸ್ಕ್, ಕಾ ಮತ್ತು ಪಾ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ನೀರು ಸರಬರಾಜು ವ್ಯತ್ಯಯ

ಮಂಡ್ಯ,ಸೆ.11– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆ ಅಡಿ ಶ್ರೀರಂಗಪಟ್ಟಣ ಸಮೀಪವಿರುವ ಮೂಲಸ್ಥಾವರದ ಬಳಿ 1016 ಮಿ.ಮೀ. ವ್ಯಾಸದ ಎಂ.ಎಸ್. ನೀರು ಸರಬರಾಜು ಕೊಳವೆ ಮಾರ್ಗದಲ್ಲಿ ಗಣನೀಯ ಪ್ರಮಾಣದಲ್ಲಿ ನೀರು ಸೋರುವಿಕೆ ಕಂಡು ಬಂದಿದ್ದು, ಸದರಿ ಕೊಳವೆ ಮಾರ್ಗದ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವುದರಿಂದ ಸೆ.12 ರಂದು ಮಂಡ್ಯದಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸೀತಾಪುರ ಶಾಲೆಯ ಮುಖ್ಯ ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ



ಶ್ರೀರಂಗಪಟ್ಟಣ ಜಿಲ್ಲಾ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಆಯ್ಕೆಯಾದ ಶ್ರೀರಂಗಪಟ್ಟಣ ಸೀತಾಪುರ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಎಂ.ಚಂದ್ರು ಅವರನ್ನು ಶ್ರೀರಂಗಪಟ್ಟಣದ ಗಾಣಿಗ ಸಮಿತಿ ಶಿವಜ್ಯೋತಿ ಬಣದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸಮಿತಿ ಮುಖಂಡರಾದ ನಾಗೇಶ್, ಪರಮೇಶ್ವರ, ಪ್ರಭಾಕರ್, ರವಿ, ಮಂಜುನಾಥ್, ಪ್ರಕಾಶ್, ಪ್ರವೀಣ್ ಸೇರಿದಂತೆ ಇತರರು ಇದ್ದರು.

ವಾಣಿಜ್ಯ ಮಳಿಗೆಗಳ ಹೊಸದಾಗಿ ಹರಾಜು



ಪುರಸಭೆ ಅಧ್ಯಕ್ಷೆ ಜ್ಯೋತಿಲಕ್ಷ್ಮಿ ಬಾಬು ನೇತೃತ್ವದಲ್ಲಿ ಸಭೆ

ಪಾಂಡವಪುರ, ಸೆ.11– ಪುರಸಭೆಯ ವಾಣಿಜ್ಯ ಮಳಿಗೆಗಳನ್ನು ಹೊಸದಾಗಿ ಹರಾಜು ಪ್ರಕ್ರಿಯೆ ನಡೆಸುವ ಮೂಲಕ ಮಳಿಗೆಗಳಿಗೆ ಹೊಸ ಬಾಡಿಗೆ ದರ ನಿಗದಿಪಡಿಸಲು ಪುರಸಭೆಯಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಅಧ್ಯಕ್ಷೆ ಜ್ಯೋತಿಲಕ್ಷ್ಮಿ ಬಾಬು ಅವರ ಅಧ್ಯಕ್ಷತೆಯಲ್ಲಿ ನಡೆದ ತುರ್ತು ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಪುರಸಭೆಯ ಮಳಿಗೆಗಳಿಗೆ ಹರಾಜು ಪ್ರಕ್ರಿಯೆ ನಡೆಸಿ 30 ವರ್ಷಗಳೇ ಕಳೆದಿವೆ, ಅಲ್ಲಿಂದ ಇಲ್ಲಿಯವರೆಗೆ ಅವುಗಳ ಹರಾಜು ಪ್ರಕ್ರಿಯೆ ನಡೆದಿಲ್ಲ, ಹಾಗಾಗಿ ಪುರಸಭೆ ಮಳಿಗೆಗಳನ್ನೂ ಹೊಸದಾಗಿ ಹರಾಜು ನಡೆಸಿ ಬಾಡಿಗೆ ನಿಗದಿ ಮಾಡಲು ಕ್ರಮವಹಿಸಬೇಕಾಗಿದೆ. ಪುರಸಭೆಯ ಸಭೆಯಲ್ಲಿ ಅನುಮೋದನೆ ಸಿಕ್ಕರೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದು ಹರಾಜು ಪ್ರಕ್ರಿಯೆ ನಡೆಸಲಾಗುವುದು ಎಂದು ಮುಖ್ಯಾಧಿಕಾರಿ ಸತೀಶ್‌ಕುಮಾರ್ ಸಭೆಗೆ ತಿಳಿಸಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ನೂತನ ಅಧ್ಯಕ್ಷೆ ಜ್ಯೋತಿಲಕ್ಷ್ಮೀ ಬಾಬು ಅವರ ಅಧ್ಯಕ್ಷತೆಯಲ್ಲಿ ಪುರಸಭೆಗೆ ಸೇರಿದ ವಾಣಿಜ್ಯ ಮಳಿಗೆಗಳ ಬಹಿರಂಗ ಹರಾಜು, ಹಳೇ ಬಸ್ ನಿಲ್ದಾಣದಲ್ಲಿರುವ ಮಳಿಗೆಗಳನ್ನು ತೆರವುಗೊಳಿಸಿ ಹೊಸದಾಗಿ ನಿರ್ಮಿಸುವುದು, ಒಳಚರಂಡಿ ಕಾಮಗಾರಿ, ಸಂತೆ ಮೈದಾನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಹಾಗೂ ಪಾದಚಾರಿ ರಸ್ತೆ ಮೇಲಿನ ಶೆಡ್ಡುಗಳನ್ನು ತೆರವುಗೊಳಿಸುವ ಸಂಬಂಧ ಬುಧವಾರ ತುರ್ತು ಸಭೆ ನಡೆಯಿತು.

ಈ ವಿಚಾರವಾಗಿ ಪ್ರತಿಕ್ರಿಯಿಸಿದ ಹಲವು ಸದಸ್ಯರು ಇದೀಗ ಪುರಸಭೆ ಮಳಿಗೆಗಳನ್ನು ಬಾಡಿಗೆ ಪಡೆದಿರುವವರು ವಾಣಿಜ್ಯ ಮಳಿಗೆಗಳ ಮೂಲ ಸ್ವರೂಪವನ್ನು ಬದಲಾಯಿಸಿ ವಿಭಜನೆ ಮಾಡಿದ್ದಾರೆ. ಅಲ್ಲದೆ ಪುರಸಭೆಗೆ ಕಡಿಮೆ ಬಾಡಿಗೆ ನೀಡಿ ಖಾಸಗಿ ವ್ಯಕ್ತಿಗಳ ಹೆಚ್ಚಿನ ಹಣಕ್ಕೆ ಉಪ ಬಾಡಿಗೆ ನೀಡಿ ಲಕ್ಷಾಂತರ ರೂ, ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ಪುರಸಭೆಗೆ ಸಾಕಷ್ಟು ನಷ್ಟವಾಗುತ್ತಿದೆ. ಹಿಂದಿನ ಶಾಸಕರಾಗಿದ್ದ ಸಿ.ಎಸ್.ಪುಟ್ಟರಾಜು ಅವರು ಪುರಸಭೆ ಮುಂಭಾಗ ಇರುವ ವಾಣಿಜ್ಯ ಮಹಿಳೆಗಳನ್ನು ತೆರವುಗೊಳಿಸಿ ಹೊಸದಾಗಿ ನಿರ್ಮಿಸಲು ಕ್ರಮವಹಿಸಿದ್ದರು, ಅದು ಕಾರ್ಯಗತವಾಗಿಲ್ಲ. ಹೊಸದಾಗಿ ಮಳಿಗೆ ಹರಾಜು ನಡೆಸಿ ನಮ್ಮಲ್ಲಿರುವ 82 ಮಳಿಗೆಗಳಿಗೆ ಪ್ರತಿ ಮಳಿಗೆಗಳಿಗೂ ನಂಬರ್ ಹಾಕಿ ಎಂದು ಮುಖ್ಯಾಧಿಕಾರಿಗೆ ಸೂಚಿಸಿದರು.

ಮುಖ್ಯಾಧಿಕಾರಿ ಸತೀಶ್‌ಕುಮಾರ್ ಮಾತನಾಡಿ, ಒಳಚರಂಡಿ ಸಂಸ್ಕರಣಾ ಘಟಕಕ್ಕೆ ರೈತರಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಪರಿಹಾರದ ವಿಚಾರಕ್ಕೆ ಸಂಬಂಧಿಸಿದಂತೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಜತೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಪರಿಹಾರದ ಮೊತ್ತ 24 ಕೋಟಿ ಅನುದಾನಕ್ಕೆ ಮನವಿ ಸಲ್ಲಿಸಲಾಗಿದೆ. ಆದರೆ, ಇಲಾಖಾ ಕಾರ್ಯದರ್ಶಿಗಳು ಅಷ್ಟು ಅನುದಾನ ಕೊಡಲು ಸಾಧ್ಯವಿಲ್ಲ. ಸದ್ಯ 4 ಕೋಟಿ ಲಭ್ಯವಿರುವುದಾಗಿ ಹೇಳಿದರು. ಜತೆಗೆ ಕೆಯುಐಡಿಎಫ್‌ಸಿ ವ್ಯವಸ್ಥಾಪಕರು 4 ಕೋಟಿ ಕೊಡುವುದಾಗಿ ತಿಳಿಸಿದ್ದಾರೆ ಎಂದು ಸಭೆಗೆ ವಿವರಣೆ ನೀಡಿದರು.

ಸೆ.15, ಕೆಂಪೇಗೌಡ ಪುತ್ಥಳಿ ಅನಾವರಣ

ಮಂಡ್ಯ,ಸೆ.11– ನಾಡಪ್ರಭು ಶ್ರೀ ಕೆಂಪೇಗೌಡ ಯುವಕರ ಸಂಘದ ವತಿಯಿಂದ ನಾಡಪ್ರಭು ಶ್ರೀ ಕೆಂಪೇಗೌಡ ಪುತ್ಥಳಿ ಅನಾವರಣ ಹಾಗೂ ಕೆಂಪೇಗೌಡರ ಜಯಂತ್ಯುತ್ಸವವನ್ನು ಸೆ.15ರ ಭಾನುವಾರ ಮಳವಳ್ಳಿ ತಾಲೂಕಿನ ಹಿಟ್ಟನಹಳ್ಳಿ ಕೊಪ್ಪಲು ವಿಶ್ವೇಶ್ವರಯ್ಯ ಸರ್ಕಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಸೇನೆ ಜಿಲ್ಲಾಧ್ಯಕ್ಷ ಹೆಚ್.ಸಿ.ಮಂಜುನಾಥ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು ಬೆಂಗಳೂರು ನಿರ್ಮಾತೃ, ಎಲ್ಲಾ ವರ್ಗದ ಸಮುದಾಯದ ಅಭಿವೃದ್ಧಿಗೆ ದೂರದೃಷ್ಟಿ ನಾಯಕ ಕೆಂಪೇಗೌಡರು ಅವರ ನಡೆದು ಬಂದ ದಾರಿಗಳನ್ನು ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಸೆ.15ರ ಭಾನುವಾರ ಶ್ರೀ ಆದಿಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯಸಾನ್ನಿಧ್ಯದಲ್ಲಿ ಕಾರ್ಯಕ್ರಮವನ್ನು ಕೇಂದ್ರ ಉಕ್ಕು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ. ಕೆಂಪೇಗೌಡರ ಪ್ರತಿಮೆಯನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಲೋಕಾರ್ಪಣೆಗೊಳಿಸಲಿದ್ದಾರೆ. ಈ ಸಂದರ್ಭದಲ್ಲಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸಮಾರಂಭಕ್ಕೆ ಅದ್ದೂರಿ ಚಾಲನೆ ಸಿಗಲಿದ್ದು ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಸ್ವಾಮಿಗೌಡ, ಸೋಮಣ್ಣ ಹಾಜರಿದ್ದರು.

ನಾಳೆ ವಿದ್ಯಾರ್ಥಿ, ಕೃಷಿ ಪ್ರಶಸ್ತಿ ಪ್ರದಾನ

ಮಂಡ್ಯ,ಸೆ.11– ಕರ್ನಾಟಕ ಸಂಘ ಮಂಡ್ಯ ಹಾಗೂ ಪಟೇಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ 4ನೇ ವರ್ಷದ ವೀರಯೋಧ ಆರ್.ಲೋಕೇಶ್ ಪಟೇಲ್ ಜ್ಞಾಪಕಾರ್ಥ ವಿದ್ಯಾರ್ಥಿ ಪುರಸ್ಕಾರ ಹಾಗೂ ಶ್ರೀಮತಿ ನಿಂಗಮ್ಮ ಪಟೇಲರ ಜೋಗಿಗೌಡ ಕೃಷಿ ಪ್ರಶಸ್ತಿ ಪ್ರದಾನ ಸಮಾರಂಭ ಸೆ.13ರ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಆಯೋಜನೆ ಮಾಡಲಾಗಿದೆ ಎಂದು ಕರ್ನಾಟಕ ಸಂಘದ ನಿರ್ದೇಶಕ ಕೋಣನಹಳ್ಳಿ ಜಯರಾಮು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂದು ನಡೆಯುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಆದಿಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಕೊಮ್ಮೇರಹಳ್ಳಿ ವಿಶ್ವಮಾನವ ಶಾಖಾಮಠದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ವಹಿಸಲಿದ್ದು, ವಿದ್ಯಾರ್ಥಿ ಪುರಸ್ಕಾರ ಮತ್ತು ಪ್ರಶಸ್ತಿ ಪ್ರದಾನವನ್ನು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ನೆರವೇರಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ವಹಿಸಲಿದ್ದಾರೆ ಎಂದರು.

ಮೂರನೇ ಪುಟದಿಂದ

ನಾನೇ ಮುಖ್ಯಮಂತ್ರಿ

ಹುದ್ದೆ ಖಾಲಿ ಇಲ್ಲ. ಹೀಗಾಗಿ ಯಾರೂ ಕುರ್ಚಿಗೆ ಆಸೆಪಡುತ್ತಿಲ್ಲ. ಕೆಲವು ಸಚಿವರು ಸೇರಿದಂತೆ ಪಕ್ಷದ ಮುಖಂಡರು ಸಿದ್ದರಾಮಯ್ಯ ಅವರೇ ಮುಂದುವರೆಯಬೇಕು ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಕುರ್ಚಿ ಖಾಲಿಯಾದರೆ ನಾವು ಅದಕ್ಕೆ ಅರ್ಹರಿದ್ದೇವೆ ಎಂದು ಹೇಳುತ್ತಿದ್ದಾರೆ ಅಷ್ಟೇ ಎಂದರು. ಅದರಲ್ಲಿ ಏನೂ ತಪ್ಪಿಲ್ಲ. ಎಲ್ಲರಲ್ಲೂ ನಾನೇ ಮುಖ್ಯ ಮಂತ್ರಿಯಾಗಿ ಮುಂದುವರೆಯಬೇಕು ಎಂಬ ಇಚ್ಛೆ ಇರುವಾಗ ಆಡಳಿತದಲ್ಲಿ ನಾನು ಮುಂದುವರೆಯುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಅರಣ್ಯ ಭವನದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಆಡಳಿತದ 40 ತಿಂಗಳಲ್ಲಿ ಅಂದಿನ ಮುಖ್ಯಮಂತ್ರಿ ಸೇರಿದಂತೆ ಸಚಿವರು ಭಾರಿ ಭ್ರಷ್ಟಾಚಾರ ನಡೆಸಿದ್ದಾರೆ.

ಅವರು ಮಾಡಿರುವ ಭ್ರಷ್ಟಾಚಾರದ ಪಟ್ಟಿಯನ್ನು ಸದನದಲ್ಲೇ ಬಿಡುಗಡೆ ಮಾಡಿದ್ದೇನೆ. ಅವುಗಳ ಬಗ್ಗೆ ಒಂದಲ್ಲ ಒಂದು ತನಿಖೆ ಆರಂಭಗೊಂಡಿದೆ.

ತನಿಖೆಯ ಪ್ರಗತಿ ಮತ್ತು ಅದಕ್ಕೆ ವೇಗ ಕೊಡುವ ಉದ್ದೇಶದಿಂದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಸಚಿವರ ಸಮಿತಿ ರಚಿಸಿದ್ದೇನೆ. ಈ ಎಲ್ಲಾ ಹಗರಣಗಳ ತನಿಖೆಗೆ ತ್ವರಿತ ಚಾಲನೆ ನೀಡುವ ಉದ್ದೇಶ ದಿಂದಲೇ ಸಮಿತಿ ನೇಮಕ ಮಾಡಲಾ ಗಿದೆ. ಈ ಸಮಿತಿ ಎರಡು ತಿಂಗಳಲ್ಲಿ ವರದಿ ನೀಡುವಂತೆ ಗಡುವು ನೀಡಿದ್ದೇನೆ. ಪಿಎಸ್‌ಐ ಹಗರಣ, 40% ಕಮಿಷನ್, ಕೋವಿಡ್–19, ಬಿಟ್ ಕಾಯಿನ್ ಹಗರಣಗಳ ಬಗ್ಗೆ ಎಸ್‌ಐಟಿ ಹಾಗೂ ಕೆಲವು ಆಯೋಗ ಗಳಿಂದ ತನಿಖೆ ನಡೆಯುತ್ತಿದೆ. ಇವು ಸೇರಿದಂತೆ ಉಳಿದ ಹಗರಣಗಳ ಬಗ್ಗೆಯೂ ಸಮಿತಿ ಕೂಲಂಕಷವಾಗಿ ಸಮಿತಿ ಪರಿಶೀಲನೆ ನಡೆಸಿ ಅವುಗಳಿಗೆ ಚುರುಕುಗೊಳಿಸಲು ಕ್ರಮ ಕೈಗೊಳ್ಳುವುದು. ತ್ವರಿತವಾಗಿ ತನಿಖೆ ಮುಗಿಸಲು ಸಂಬಂಧ ಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುತ್ತಾರೆ ಎಂದು ಅವರು ಹೇಳಿದರು.ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಉದ್ದೇಶ ದಿಂದ ಸಮಿತಿ ರಚಿಸಲಾಗಿದೆಯೇ ಹೊರತು ಬಿಜೆಪಿ ವಿರುದ್ಧ ದ್ವೇಷ ರಾಜಕಾರಣ ಮಾಡಲು ಅಲ್ಲ. ಆದರೆ, ಅವರು ನನ್ನ ಬಗ್ಗೆ ದ್ವೇಷ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಮಾತ್ರ ಅಂತಹ ಕೆಲಸ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕರ್ನಾಟಕದಲ್ಲಷ್ಟೇ ಅಲ್ಲ, ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿಯೂ ದ್ವೇಷ ರಾಜಕಾರಣವನ್ನೇ ಮಾಡಿಕೊಂಡು ಬರಲಾಗುತ್ತಿದೆ.

ದೆಹಲಿ, ತೆಲಂಗಾಣ, ಬಿಹಾರ, ಜಮ್ಮು ಮತ್ತು ಕಾಶ್ಮೀರ, ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ಎಲ್ಲಾ ರಾಜ್ಯಗಳಲ್ಲೂ ತಮಗಾಗದವರ ವಿರುದ್ಧ ಕೇಂದ್ರ ತನಿಖಾ ತಂಡಗಳ ಮೂಲಕ ಹೆದರಿಸುವುದು–ಬೆದರಿಸುವ ಕೆಲಸ ಮಾಡಲಾಗುತ್ತಿದೆ.

ಮುಡಾದಿಂದ 387 ಕೋಟಿಯ ಕಾಮಗಾರಿ

ನಡೆದ ಮುಡಾ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿತ್ತು. ಬಂಚಳ್ಳಿಹುಂಡಿ, ಚಿಕ್ಕಯ್ಯನ ಛತ್ರ, ತಾಂಡವಪುರ, ಏಚಗಳ್ಳಿ, ಹೆಜ್ಜಿಗೆ, ಕೆಂಪಿಸಿದ್ದನಹುಂಡಿ, ತೊರೆಮಾವು, ಬಸವನಪುರ, ಹಳ್ಳಿದಿಡ್ಡಿ, ಮರಳೂರು–ಗೊದ್ದನಪುರ, ಹಳ್ಳಿಕೆರೆಹುಂಡಿ, ಕಾಳಿಸಿದ್ದನಹುಂಡಿ, ಯಾಂದಳ್ಳಿ, ಉತ್ತನಹಳ್ಳಿ, ಲಲಿತಾದ್ರಿ ನಗರ (ದಕ್ಷಿಣ), ಶಾಂತವೇರಿ ಗೋಪಾಲಗೌಡನಗರ, ಲಾಲ್‌ಬಹದ್ದೂರ್ ಶಾಸ್ತ್ರಿನಗರ, ಏಳಿಗೆಹುಂಡಿ, ದೇವಲಾಪುರ, ಹಡಜನ, ಮರಸೆ, ಮಕನಹುಂಡಿ, ಹಲಗಯ್ಯನಹುಂಡಿ, ಚಿಕ್ಕಹಳ್ಳಿ ಹಾಗೂ ವಾಜಮಂಗಲ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಬಗ್ಗೆ ಚರ್ಚಿಸ ಲಾಯಿತು ಎಂದು ಅರ್ಜಿದಾರರು ದೂರಿ ನಲ್ಲಿ ತಿಳಿಸಿದ್ದಾರೆ. ವಿಸ್ತೃತ ಚರ್ಚೆ ನಡೆದು ಪ್ರಸ್ತಾವನೆಯಲ್ಲಿ ನಮೂದಿಸಿರುವ ಗ್ರಾಮ ಗಳಲ್ಲಿ ಅಗತ್ಯವಿರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಸರ್ಕಾರದ ಮಾರ್ಗದರ್ಶನ ಕೋರಿ ಸೂಕ್ತ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು. ನಂತರ ಈ ಕಾಮಗಾರಿಗಳನ್ನು ನಿರ್ವಹಿಸಲು ಅನು ಮೋದನೆ ನೀಡಿ ಎರಡೇ ತಿಂಗಳಲ್ಲಿ ಆದೇಶಿಸಿದೆ ಎಂದು ಅವರು ಆರೋಪಿಸಿದ್ದಾರೆ.

ಸಾರ್ವಜನಿಕ ಹಣವನ್ನು ದುರುಪ ಯೋಗ ಮಾಡುತ್ತಿರುವ ಅಧಿಕಾರಿಗಳನ್ನು ಅಮಾನತ್ತಿನಲ್ಲಿರಿಸಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು ಹಾಗೂ ಸಿಬಿಐನಿಂದ ತನಿಖೆ ನಡೆಸಿ ಪ್ರಾಧಿಕಾರ ಆರ್ಥಿಕವಾಗಿ ದಿವಾಳಿಯಾಗುವುದನ್ನು ತಡೆಯಬೇಕು ಎಂದು ದೂರುದಾರರು ಒತ್ತಾಯಿಸಿದ್ದಾರೆ. ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಪ್ರಕರಣದಲ್ಲಿ ನೀಡಿರುವ ದೂರುಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರು, ಇದೀಗ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಬಹುಕೋಟಿ ರೂ.ಗಳ ಕಾಮಗಾರಿ ಕುರಿತು ಸಮಗ್ರ ಮಾಹಿತಿ ನೀಡುವಂತೆ ಸಿಎಸ್‌ಗೆ ಪತ್ರ ಬರೆದಿರುವುದು ಸರ್ಕಾರ ಮತ್ತು ರಾಜಭವನ ನಡುವೆ ಮತ್ತೊಂದು ಸಮರಕ್ಕೆ ನಾಂದಿ ಹಾಡಿದಂತಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ದನಿ

ಅಕ್ರಮ ವ್ಯವಹಾರಗಳನ್ನು ಬಯಲಿಗೆಳೆಯುತ್ತಿರುವ ಮಾಧ್ಯಮಗಳ ಮೇಲೆ ವಕ್ರದೃಷ್ಟಿ ಬೀರುತ್ತಿರುವ ಪರಿಯನ್ನು ನೋಡಿದರೆ "ಇದ್ದದ್ದು ಇದ್ದಂಗೆ ಹೇಳಿದ್ರೆ ಎದ್ದು ಬಂದು ಎದೆಗೆ ಒದ್ದಂಗೆ" ಎಂಬ ಗಾದೆ ಮಾತು ನೆನಪಿಸುವಂತಿದೆ ಎಂದು ಅವರು ಪೋಸ್ಟ್‌ನಲ್ಲಿ ಹೇಳಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆಯನ್ನು ತಮ್ಮ ಬಳಿಯೇ ಇಟ್ಟುಕೊಂಡಿರುವ ಮಾನ್ಯ ಮುಖ್ಯಮಂತ್ರಿಗಳು ತಮ್ಮ ತವರು ಜಿಲ್ಲೆಯ ಈ ಸೋದರ ಪತ್ರಿಕೆಗಳ ಮೇಲೆ ಸರ್ಕಾರಿ ಜಾಹೀರಾತು ಕತ್ತರಿ ಪ್ರಯೋಗಿಸುತ್ತಿರುವುದು ಎಷ್ಟು ಸರಿ? ಎಂದು ಉತ್ತರಿಸಲಿ. ಇಲ್ಲವಾದರೆ ಮುಡಾ ಮಾದರಿಯ ಹಗರಣಗಳನ್ನು ಬಯಲಿಗೆಳೆಯುವ ಮಾಧ್ಯಮಗಳಿಗೆ 'ಕೈ' ಸರ್ಕಾರದ ಟಾರ್ಗೆಟ್ ಏಟು ತಪ್ಪಿದ್ದಲ್ಲ ಎಂಬ ಸಂದೇಶ ರವಾನೆಯಾಗುತ್ತದೆ ಎಂದು ಪೋಸ್ಟ್ ಮಾಡಿರುವ ಬಿ.ವೈ.ವಿಜಯೇಂದ್ರ, ತಮ್ಮ ಪೋಸ್ಟ್‌ನಲ್ಲಿ 'ಮೈಸೂರು ಮಿತ್ರ' ಹಾಗೂ ಸೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಅನ್ನು ಲಗತ್ತಿಸಿದ್ದಾರೆ. ವಿಜಯೇಂದ್ರ ಅವರು ಪೋಸ್ಟ್ ಮಾಡಿದ ಕೇವಲ ಒಂದು ಗಂಟೆಯಲ್ಲೇ ಪೋಸ್ಟ್ ಅನ್ನು 1200 ಮಂದಿ ವೀಕ್ಷಿಸಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವರಿಗೆ ಟ್ಯಾಗ್ ಆಗಿದ್ದು, 21 ಮಂದಿ ಈ ಪೋಸ್ಟ್ ಅನ್ನು ರೀಪೋಸ್ಟ್ ಮಾಡಿದ್ದಾರೆ. 44 ಮಂದಿ ಹಾರ್ಟ್ ಚಿನ್ಹೆ ನಮೂದಿಸಿದ್ದಾರೆ.

ಸಿಎಂ ಬದಲಾವಣೆ ಪ್ರಸಂಗ ಬಂದರೆ ನಾನೇ ಸ್ಪರ್ಧೆ ಮಾಡ್ತೀನಿ



ಶಾಮನೂರು ಶಿವಶಂಕರಪ್ಪ

ದಾವಣಗೆರೆ, ಸೆ.11– ಮುಖ್ಯಮಂತ್ರಿ ಬದಲಾವಣೆ ಪ್ರಸಂಗ ಬಂದರೆ ನಾನೇ ಸ್ಪರ್ಧೆ ಮಾಡುತ್ತೇನೆ ಎಂದು ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ. ದಾವಣಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ರಾಜ್ಯದಲ್ಲಿ ನಡೆಯುತ್ತಿರುವ ಸಿಎಂ ಕುರ್ಚಿ ಬದಲಾವಣೆ ವಿಚಾರದ ಬಗ್ಗೆ ಸಚಿವರ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ್ದಾರೆ. ಈ ವೇಳೆ ಸಿಎಂ ಸ್ಥಾನ ಖಾಲಿ ಇಲ್ಲ. ಆದರೆ ಲಿಂಗಾಯತ ಸಿಎಂ ಆಗಬೇಕು ಎಂದು ಬಂದರೆ ಸೆಡ್ಡು ಹೊಡೆಯುತ್ತೇವೆ ಎಂದಿದ್ದಾರೆ.

ಸಿದ್ದರಾಮಯ್ಯ ಒಳ್ಳೆಯ ಆಡಳಿತ ಮಾಡುತ್ತಿದ್ದಾರೆ. ಅವರ ಅವಧಿ ಮುಗಿದ ಮೇಲೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಅದಕ್ಕೂ ಮೊದಲು ನಮ್ಮ ಎಂಎಲ್‌ಎಗಳು ಯಾರನ್ನು ಆಯ್ಕೆ ಮಾಡುತ್ತಾರೋ ಅವರನ್ನು ಹೈಕಮಾಂಡ್ ಸಿಎಂ ಮಾಡುತ್ತದೆ. ಹಲವು ಸಚಿವರಿಗೆ ಸಿಎಂ ಆಗಬೇಕು ಎನ್ನುವ ಆಸೆ ಜಾಸ್ತಿ ಇದೆ. ಆಸೆ ಇದ್ದವರಿಗೆ ನಿರಾಸೆ ಆಗಲಿದೆ. ಕೆಲವರು ಬಾಯಿಗೆ ಬಂದಂತೆ ಮಾತಾಡಿಕೊಂಡು ಹೋಗೋದ್ರಿಂದ ಏನು ಪ್ರಯೋಜನ ಆಗಲ್ಲ ಎಂದರು. ಸಚಿವ ಎಂ.ಬಿ.ಪಾಟೀಲ್, ರಾಯರೆಡ್ಡಿ, ಡಿಕೆಶಿ ಎಲ್ಲರೂ ರೇಸ್‌ನಲ್ಲಿ ಇದ್ದಾರೆ. ಹೆಸರು ಇದ್ದವರು, ಇಲ್ಲದವರು ಕೂಡ ಸಿಎಂ ರೇಸ್‌ನಲ್ಲಿ ಇರುತ್ತಾರೆ. ರಾಜಕೀಯದಲ್ಲಿ ಜೂನಿಯರ್, ಸೀನಿಯರ್ ಎಂಬ ಪ್ರಶ್ನೆ ಬರೋದಿಲ್ಲ ಎಂದಿದ್ದಾರೆ.

ಮುಡಾದಿಂದ ಆಘಾತಕ್ಕೀಡಾದ ನಿವೇಶನದಾರನಿಗೆ ಹೈಕೋರ್ಟ್‌ನಿಂದ ಪರಿಹಾರ!

ಬಡಾವಣೆಗೆ ಭೂ ಸ್ವಾಧೀನಪಡಿಸಿಕೊಂಡು ನಿವೇಶನ ಮಾರಾಟ ಮಾಡಿದ ಮುಡಾ: ಪುನಃ ಭೂ ಮಾಲೀಕರಿಗೆ ಪರಿಹಾರವಾಗಿ ಭೂಮಿ ಬಿಟ್ಟುಕೊಟ್ಟು ಚೆಲ್ಲಾಟ

ಮೈಸೂರು, ಸೆ.11–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ 50:50 ಅನುಪಾತದಲ್ಲಿ ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಿರುವ ಪ್ರಕರಣಗಳು ಒಂದರ ಹಿಂದೊಂದರಂತೆ ಹೊರ ಬರುತ್ತಿವೆ. ಇದಕ್ಕೆ ಮತ್ತೊಂದು ಸೇರ್ಪಡೆಯಾಗಿದೆ. ಮುಡಾ ಭೂ ಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸಿದ ಹಲವು ವರ್ಷದ ನಂತರ ಭೂ ಸ್ವಾಧೀನಪಡಿಸಿಕೊಳ್ಳದೇ ಬಡಾವಣೆ ನಿರ್ಮಾಣಕ್ಕೆ ಜಮೀನು ಬಳಸಿಕೊಳ್ಳಲಾಗಿದೆ ಎಂದು ಭೂ ಮಾಲೀಕರಿಗೆ ಮೂರನೇ ಒಂದರಷ್ಟು ಜಮೀನನ್ನು ಬಿಟ್ಟು ಕೊಟ್ಟ ಪರಿ ಣಾಮ ಮುಡಾದಿಂದ ನಿವೇಶನ ಖರೀದಿಸಿದವರು ಹೈಕೋರ್ಟ್ ಮೊರೆ ಹೋಗಿ ಹರಸಾಹಸದಿಂದ ತಮ್ಮ ನಿವೇಶನ ದಕ್ಕಿಸಿಕೊಂಡ ಪ್ರಕರಣವೊಂದು ಬೆಳಕಿಗೆ ಬಂದಿದೆ.



ಮುಡಾ ಕಚೇರಿ

ವಿವರ: ಸಾತಗಳ್ಳಿ ಸರ್ವೆ ನಂ.37/1ರಲ್ಲಿ 1.12 ಎಕರೆ ಜಮೀನನ್ನು ದೇವಯ್ಯ ಮತ್ತು ಚಿಕ್ಕದೇವಯ್ಯ ಎಂಬುವರು ಪರಸ್ಪರ ಒಪ್ಪಂದದ ಮೇರೆಗೆ ಎಕರೆಗೆ 20 ಸಾವಿರದಂತೆ ಮುಡಾಗೆ ನೀಡಿದ್ದರು. ಅದರಂತೆ 1986ರ ಫೆ.12ರಂದು ಇವರಿಬ್ಬರು ಜಮೀನನ್ನು ಮುಡಾಗೆ ಹಸ್ತಾಂತರಿಸಿದ್ದಾರೆ. ಆದರೆ, ಶ್ರೀಮತಿ ಪುಟ್ಟಮಲ್ಲಿ ಮತ್ತು ಶ್ರೀಮತಿ ಮಂಚಮ್ಮ ಎಂಬುವರು ಪರಿಹಾರದಲ್ಲಿ ತಮಗೂ ಪಾಲು ಬರಬೇಕು ಎಂದು ದೇವಯ್ಯ, ಚಿಕ್ಕದೇವಯ್ಯ ಮತ್ತು ಮುಡಾವನ್ನು ಪ್ರತಿವಾದಿಗಳಾಗಿ ಮಾಡಿ, ಮುನ್ಸಿಫ್ ನ್ಯಾಯಾಲಯದಲ್ಲಿ ದಾವೆ ಹೂಡಿದ ಪರಿಣಾಮ ಪರಿಹಾರ ನೀಡುವುದನ್ನು ತಡೆ ಹಿಡಿಯಲಾಗಿದೆ ಎಂದು ಮುಡಾ 2018ರ ಸೆ.3ರಂದು ಮಾಹಿತಿ ಹಕ್ಕಿನಡಿ ನೀಡಿದ ಮಾಹಿತಿಯಿಂದ ತಿಳಿದು ಬಂದಿದೆ. ಅಂದರೆ ಜಮೀನು ಭೂ ಸ್ವಾಧೀನ ಪ್ರಕ್ರಿಯೆ ಮುಗಿದಿದ್ದು, ಪರಿಹಾರ ನೀಡುವುದು ಮಾತ್ರ ಬಾಕಿ ಉಳಿದಿದೆ.

ನಂತರ ಈ ಜಮೀನನ್ನು ಬಳಸಿಕೊಂಡು ಮುಡಾ ಸಾತಗಳ್ಳಿ ಒಂದನೇ ಹಂತ ಬಡಾವಣೆ ನಿರ್ಮಿಸಿ, ನಿವೇಶನಗಳ ಹಂಚಿಕೆ ಮಾಡಿದೆ. ಅದೇ ವೇಳೆ ಕೆಜಿ.ಕೊಪ್ಪಲಿನ ಶ್ರೀನಿವಾಸ್ ಎಂಬುವರು ಸಾತಗಳ್ಳಿ ಸರ್ವೆ ನಂ.29ರಲ್ಲಿ 4 ಎಕರೆ ಜಮೀನನ್ನು ಪರಸ್ಪರ ಒಪ್ಪಂದದ ಮೇರೆಗೆ ಮುಡಾಗೆ ವಹಿಸಿಕೊಟ್ಟ ಕಾರಣ ಅವರಿಗೆ ಸಾತಗಳ್ಳಿ 1ನೇ ಹಂತದಲ್ಲಿ ಮುಡಾ ರಚಿಸಿದ್ದ ನಿವೇಶನ ಸಂಖ್ಯೆ 315 ಅನ್ನು ಮುಡಾ ಮಂಜೂರು ಮಾಡಿತ್ತು. 2003ರ ಜ.25ರಂದು ಶ್ರೀನಿವಾಸ್ ಅವರ ಹೆಸರಿಗೆ ಮುಡಾ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಕ್ರಯಪತ್ರವೂ ಆಗಿದೆ. ಅದೇ ವರ್ಷ ಫೆ.10ರಂದು ಶ್ರೀನಿವಾಸ್ ಹೆಸರಿಗೆ ಖಾತೆ ಹಾಗೂ ಕಂದಾಯ ಪತ್ರವನ್ನು ಮುಡಾದಲ್ಲಿ ಮಾಡಿಕೊಡಲಾಗಿದೆ. ಮುಡಾದಿಂದ ನಿವೇಶನ ಪಡೆದಿದ್ದ ಶ್ರೀನಿವಾಸ್ ಅವರು ತಮ್ಮ ನಿವೇಶನವನ್ನು 2003ರ ಜೂ.30ರಂದು ಕಲ್ಯಾಣಗಿರಿ ನಗರದ ರಿಯಾಜ್ ಪಾಷಾ ಎಂಬುವರಿಗೆ ಮಾರಾಟ ಮಾಡಿದ್ದು, ಅವರ ಹೆಸರಿಗೆ 2003ರ ಅ.10ರಂದು ನಗರ ಪಾಲಿಕೆಯಿಂದ ಖಾತೆಯೂ ಆಗಿದೆ. ಕೆಲ ವರ್ಷ ಬಿಟ್ಟು ರಿಯಾಜ್ ಪಾಷಾ ತಮ್ಮ ನಿವೇಶನದಲ್ಲಿ ಮನೆ ನಿರ್ಮಿಸಲು ಹೋದಾಗ ಸದರಿ ನಿವೇಶನವನ್ನು ಶೈಲಜಾ ಎಂಬುವರಿಂದ ತಾವು ಖರೀದಿಸಿರುವುದಾಗಿ ಬೇರೊಬ್ಬರು ಬಂದು ಹಕ್ಕು ಚಲಾಯಿಸಿದ್ದಾರೆ. ಇದರಿಂದ ಗಲಿಬಿಲಿಗೊಳಗಾದ ರಿಯಾಜ್ ಪಾಷಾ ಅವರು, ಮುಡಾದಲ್ಲಿ ಮಾಹಿತಿ ಹಕ್ಕು ಕಾಯಿದೆಯಡಿ ದಾಖಲೆಗಳನ್ನು ಪಡೆದಾಗ ಬೇರೊಂದು ಕತೆ ನಡೆದಿರುವುದು ಬೆಳಕಿಗೆ ಬಂದಿದೆ.

ಮುಡಾದಲ್ಲಾದ ಪವಾಡ: 1986ರಲ್ಲೇ ಭೂ ಸ್ವಾಧೀನಪಡಿಸಿಕೊಂಡು ನಂತರ ಬಡಾವಣೆ ನಿರ್ಮಿಸಿದ್ದ ಸಾತಗಳ್ಳಿ 37/1ರ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳದೇ ಮುಡಾ ಬಡಾವಣೆ ನಿರ್ಮಾಣಕ್ಕೆ ಬಳಸಿಕೊಂಡಿದೆ ಎಂದು ಚಿಕ್ಕದೇವಯ್ಯ ಮತ್ತು ಮರಯ್ಯ ಎಂಬುವರು ನೀಡಿರುವ ಅರ್ಜಿಯಂತೆ ಅವರಿಗೆ ಜಮೀನಿನ ಮೂರನೇ ಒಂದು ಭಾಗ ನೀಡಲು 2005ರ ಮೇ 28ರಂದು ನಡೆದಿದ್ದ ಮುಡಾ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಆನಂತರ 2011ರ ಡಿ.24ರಂದು ನಡೆದ ಮುಡಾ ಸಭೆಯಲ್ಲಿ ಸಾತಗಳ್ಳಿ ಸರ್ವೆ ನಂ.37/1 ಅನ್ನು ವಿಂಗಡಿಸಿ 37/5 ಎಂಬ ಹೊಸ ಸರ್ವೆ ನಂಬರ್ ನಲ್ಲಿ 17 ಗುಂಟೆ ಜಮೀನಿನಲ್ಲಿ 13 ನಿವೇಶನ ಗಳನ್ನು ರಚಿಸಲು ನಕ್ಷೆಗೆ ಅನುಮೋದನೆ ನೀಡಲು ನಿರ್ಣಯ ಕೈಗೊಳ್ಳಲಾಗಿದೆ. ಅದರಂತೆ 13 ನಿವೇ ಶನಗಳ ನಕ್ಷೆಗೆ 2012ರ ಏ.9ರಂದು ಮುಡಾ ದಿಂದ ಅನುಮೋದನೆಯನ್ನೂ ನೀಡಲಾಗಿದೆ.

ವಿಚಿತ್ರವೆಂದರೆ ಭೂ ಮಾಲೀಕರಿಗೆ 13 ನಿವೇಶನ ರಚನೆಗಾಗಿ ಮುಡಾ ಅನುಮೋದನೆ ನೀಡಿದ ಜಾಗದಲ್ಲೇ ಕೆ.ಜಿ.ಕೊಪ್ಪಲಿನ ಶ್ರೀನಿವಾಸ್ ಅವರಿಗೆ ಮುಡಾ ಮಂಜೂರು ಮಾಡಿದ್ದ ಸಾತಗಳ್ಳಿ 1ನೇ ಹಂತದ ನಿವೇಶನ ಸಂಖ್ಯೆ 315 ಕೂಡ ಒಳಪಡುತ್ತದೆ ಎಂಬುದು ಮಾಹಿತಿ ಹಕ್ಕು ಕಾಯಿದೆಯಡಿ ರಿಯಾಜ್ ಪಾಷಾ ಪಡೆದ ಮಾಹಿತಿಯಿಂದ ತಿಳಿದು ಬಂದಿದೆ.

ಈ ವಿಚಾರವಾಗಿ ಮುಡಾ ಕಚೇರಿಗೆ ಎಷ್ಟೇ ಅಲೆದರೂ ಅವರಿಗೆ ನ್ಯಾಯ ದೊರೆಯಲೇ ಇಲ್ಲ. ಅದು ಮಾತ್ರವಲ್ಲದೇ ಸಾತಗಳ್ಳಿ 1ನೇ ಹಂತದ ಸರ್ವೆ ನಂ.315 ಸೇರಿದಂತೆ ಕೆಲ ನಿವೇಶನಗಳನ್ನು ಯಾರಿಗೆ ಮಂಜೂರು ಮಾಡಲಾಗಿದೆ ಎಂದು ಮಾಹಿತಿ ಹಕ್ಕಿನಡಿ ಕೇಳಿದಾಗ ಈ ನಿವೇಶನಗಳನ್ನು ಯಾರಿಗೂ ಮಂಜೂರಾಗಿರುವುದು ಲೆಡ್ಜರ್ ಪರಿಶೀಲನೆಯಲ್ಲಿ ಕಂಡು ಬರುತ್ತಿಲ್ಲ ಎಂದು 2023ರ ಜುಲೈ 21ರಂದು ಮುಡಾ ಮಾಹಿತಿ ನೀಡಿದೆ.

ಕೊನೆಗೂ ದಿಕ್ಕು ತೋಚದ ರಿಯಾಜ್ ಪಾಷಾ ಅವರು ಹೈಕೋರ್ಟ್ ಮೊರೆ ಹೋಗಬೇಕಾಯಿತು. ಸಾತಗಳ್ಳಿ 1ನೇ ಹಂತದ ನಿವೇಶನ ಸಂಖ್ಯೆ 315 ಅನ್ನು ಶ್ರೀನಿವಾಸ್ ಅವರಿಗೆ ಮುಡಾ ಮಂಜೂರು ಮಾಡಿರುವುದು ಹಾಗೂ ಶ್ರೀನಿವಾಸ್ ಅವರಿಂದ ರಿಯಾಜ್ ಪಾಷಾ ಅವರು ಸದರಿ ನಿವೇಶನವನ್ನು ಖರೀದಿ ಮಾಡಿರುವುದು ಕಾನೂನುಬದ್ಧವಾಗಿದೆ ಎಂದು ಹೈಕೋರ್ಟ್ ತೀರ್ಪು ನೀಡಿದ ನಂತರ ರಿಯಾಜ್ ಪಾಷಾ ತಮಗೆ ನ್ಯಾಯ ದೊರೆತಿದೆ ಎಂದು ನಿಟ್ಟುಸಿರು ಬಿಟ್ಟಿದ್ದಾರೆ.

ಈ ಪ್ರಕರಣದಲ್ಲಿ ಕಾನೂನುಬದ್ಧವಾಗಿ ನಿವೇಶನ ಖರೀದಿಸಿದ್ದ ರಿಯಾಜ್ ಪಾಷಾ ಅವರು ಮುಡಾ ಮಾಡಿದ್ದ ಎಡವಟ್ಟಿನಿಂದ ಇಕ್ಕಟ್ಟಿಗೆ ಸಿಲುಕಿ ಮಾನಸಿಕವಾಗಿ ತೊಂದರೆ ಅನುಭವಿಸಿದ್ದಲ್ಲದೇ ಕೋರ್ಟ್‌ಗೆ ಅಲೆದು ನಿವೇಶನ ದಕ್ಕಿಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. 1986ರಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ಮುಡಾ ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ ಮಾಡಿದೆ ಎಂಬುದು ಮುಡಾದಿಂದಲೇ ಮಾಹಿತಿ ಹಕ್ಕಿನಡಿ ನೀಡಲಾಗಿರುವ ಮಾಹಿತಿಯಿಂದ ತಿಳಿದು ಬಂದಿದೆ. ಅಂದರೆ ಸಾತಗಳ್ಳಿ ಸರ್ವೆ ನಂ.37/1ರಲ್ಲಿನ 1.12 ಎಕರೆ ಭೂಮಿ ಕಾನೂನುಬದ್ಧವಾಗಿ ಮುಡಾ ಸ್ವಾಧೀನದಲ್ಲಿತ್ತು. ಆ ಹಿನ್ನೆಲೆಯಲ್ಲೇ ಬಡಾವಣೆ ನಿರ್ಮಾಣ ಮಾಡಿ ನಿವೇಶನ ಹಂಚಿಕೆಯೂ ನಡೆದಿದೆ. ಈ ಕುರಿತು ಮುಡಾ ದಾಖಲೆಗಳೇ ಹೇಳುತ್ತಿವೆಯಾದರೂ ಸದರಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳದೇ ಬಡಾವಣೆ ನಿರ್ಮಾಣಕ್ಕೆ ಬಳಸಿಕೊಳ್ಳಲಾಗಿದೆ ಎಂದು ಮುಡಾ ಸಭೆಯಲ್ಲಿ ಯಾವ ಆಧಾರದ ಮೇರೆಗೆ ನಿರ್ಣಯ ಕೈಗೊಂಡು ಭೂ ಮಾಲೀಕರಿಗೆ 17 ಗುಂಟೆ ಜಮೀನಿನಲ್ಲಿ 13 ನಿವೇಶನ ರಚನೆಗೆ ಬಿಟ್ಟು ಕೊಡಲಾಯಿತು ಎಂಬುದು ಯಕ್ಷಪ್ರಶ್ನೆಯಾಗಿದೆ.

ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ಹುಟ್ಟುಹಬ್ಬದ ಶುಭಾಶಯ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವತಿಯಿಂದ ಮೈಸೂರು ನಗರ ಬಿಜೆಪಿ ಅಧ್ಯಕ್ಷರು ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ಅವರ ಹುಟ್ಟುಹಬ್ಬವನ್ನು ಬಿಜೆಪಿ ಕಚೇರಿಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಮಾಜಿ ಅಧ್ಯಕ್ಷ ಅರುಣ್‌ಕುಮಾರ್‌ಗೌಡ, ಮಂಡಲ ಬಿಜೆಪಿ ಅಧ್ಯಕ್ಷ ಪೈ.ಟಿ.ರವಿ ಲಕ್ಷ್ಮೀಪುರ, ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಗೋಪಾಲ್‌ರಾವ್, ಪ್ರಧಾನ ಕಾರ್ಯದರ್ಶಿ ಹೇಮಂತ್ ಅಪ್ಪಾಜಿಗೌಡ, ಶಿವಕುಮಾರ್ ಚಿಕ್ಕಾನ್ಯ ಮತ್ತಿತರರಿದ್ದರು.



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಪುನೀತ್ ಹಾಗೂ ಸ್ನೇಹಿತರು ಶುಭ ಕೋರಿದರು.



ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕರಾದ ಕೆ.ಉಮಾಶಂಕರ್, ಹೆಚ್.ಹರೀಶ್‌ಕುಮಾರ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಎಸ್.ಪ್ರಶಾಂತ (ಶಾಂತಿ) ಶುಭಕೋರಿದರು.



ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ನಗರಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್ ಹುಟ್ಟುಹಬ್ಬದ ಶುಭಕೋರಿದರು. ಈ ವೇಳೆ ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಕೇಬಲ್ ಮಹೇಶ್, ಮುಖಂಡ ಲೋಹಿತ್ ಶರ್ಮ ಇದ್ದಾರೆ.



ಮಾಜಿ ಶಾಸಕ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅವರ ಹುಟ್ಟುಹಬ್ಬದ ಅಂಗವಾಗಿ ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ತದನಂತರ ಭಕ್ತರು, ಅಭಿಮಾನಿಗಳಿಗೆ ಲಾಡು ಪ್ರಸಾದವನ್ನು ವಿತರಿಸಿದರು. ದೇವಾಲಯದ ಸಂಸ್ಥಾಪಕರಾದ ಪ್ರೊ.ಡಾ. ಭಾಷ್ಯಂ ಸ್ವಾಮೀಜಿ, ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಇನ್ನಿತರರು ಉಪಸ್ಥಿತರಿದ್ದರು.

ಕೆಲಸ ಮಾಡದ ಅಸಮರ್ಥರಿಗೆ ಅಧಿಕಾರದಿಂದ ಕೊಕ್

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಎಚ್ಚರಿಕೆ

ಮೈಸೂರು, ಸೆ.11(ಬಿಎಲ್‌ಯು)– ಕಾಂಗ್ರೆಸ್ ಪಕ್ಷದ ರಾಜ್ಯ ಸಮಿತಿ, ಜಿಲ್ಲಾ ಸಮಿತಿ, ಬ್ಲಾಕ್ ಸಮಿತಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಕೆಲಸ ಮಾಡಲು ಅಸಮರ್ಥರಾದರೆ ನಿರ್ದಾಕ್ಷಿಣ್ಯವಾಗಿ ಅಧಿಕಾರದಿಂದ ತೆರವು ಮಾಡಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ ಎಚ್ಚರಿಕೆ ನೀಡಿದ್ದಾರೆ.

ನಗರ ಕಾಂಗ್ರೆಸ್ ಕಚೇರಿಯಲ್ಲಿ ಇಂದು ನಡೆದ ಮುಂಚೂಣಿ ಘಟಕಗಳ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ಕೆಲಸ ಮಾಡದ ಅಸಮರ್ಥರನ್ನು ತೆರವು ಮಾಡಲು ಕೆಪಿಸಿಸಿ ಹಾಗೂ ಎಐಸಿಸಿಯಿಂದ ಕಟ್ಟುನಿಟ್ಟಿನ ಸೂಚನೆ ಬಂದಿದೆ ಎಂದು ತಿಳಿಸಿದರು.



ಮೈಸೂರು ನಗರ ಕಾಂಗ್ರೆಸ್ ಕಚೇರಿಯಲ್ಲಿ ಮುಂಚೂಣಿ ಘಟಕಗಳ ಜಿಲ್ಲಾ ಕಾರ್ಯಕಾರಿಣಿ ಸಭೆ ಬುಧವಾರ ನಡೆಯಿತು.

ಪಕ್ಷದಲ್ಲಿ ಆಂತರಿಕ ಸಮಸ್ಯೆಗಳಿದ್ದರೆ ಅದನ್ನು ಬಹಿರಂಗವಾಗಿ ವ್ಯಕ್ತಪಡಿಸದೆ ಪಕ್ಷದ ಚೌಕಟ್ಟಿನಲ್ಲಿ ಪರಿಹರಿಸಿಕೊಳ್ಳಬೇಕು. ಎಂದ ಅವರು, ಮಹಿಳಾ ಘಟಕವು ಚುನಾವಣೆಯಲ್ಲಿ ಸ್ವಾಭಿಮಾನದಿಂದ ಕೆಲಸ ನಿರ್ವಹಿಸಿದೆ. ಯಾವುದೇ ಆಮಿಷಗಳಿಗೆ ಒಳಗಾಗದೆ ಪ್ರಾಮಾಣಿಕತೆಯಿಂದ ಸಂಘಟನೆಯಲ್ಲಿ ತೊಡಗಿದೆ ಎಂದು ಪ್ರಶಂಸಿಸಿದರು. ದಸರಾ ಉಪಸಮಿತಿಗಳಲ್ಲಿ ಕಾಂಗ್ರೆಸ್ ಮಹಿಳಾ ಪದಾಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಪ್ರಾಧಾನ್ಯತೆ ನೀಡಲಿದ್ದಾರೆ. ಈ ಮೂಲಕ ದಸರಾ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳಿ ಎಂದು ಸಲಹೆ ನೀಡಿದರು. ಕಾಂಗ್ರೆಸ್ ಪಕ್ಷ ನೀಡಿರುವ ಗ್ಯಾರಂಟಿಗಳಲ್ಲಿ ಮೂರು ಯೋಜನೆಗಳು ಮಹಿಳೆಯರ ಪರವಾಗಿದೆ. ಇಷ್ಟಾದರೂ ಮಹಿಳೆಯರು ಹಲವು ಸಮಸ್ಯೆ ಎದುರಿಸುತ್ತಿದ್ದು, ಅದನ್ನು ಪರಿಹರಿಸಲು ಸರ್ಕಾರ ಮುಂದಾಗಲಿದೆ. ಈ ಮೂಲಕ ಕಾಂಗ್ರೆಸ್ ಪಕ್ಷ ಮಹಿಳಾ ಸಂಘಟನೆ ಹಾಗೂ ಹೊಸ ನಾಯಕತ್ವಕ್ಕೆ ಪೂರ್ಣ ಸ್ವಾತಂತ್ರ್ಯ ನೀಡಿದೆ ಎಂದು ಡಾ.ವಿಜಯಕುಮಾರ್ ಹೇಳಿದರು.

ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ಧಶೆಟ್ಟಿ, ರಾಜ್ಯ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ಪುಷ್ಪವಲ್ಲಿ, ಮುಖಂಡರಾದ ಲತಾ ಮೋಹನ್, ಸುಧಾ, ಲೇಖ ವೆಂಕಟೇಶ್, ನಾಗರತ್ನ, ಪಲ್ಲವಿ, ರಾಣಿ, ನಿತ್ಯ, ಕಮಲ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಸಯ್ಯಾಜಿರಾವ್ ರಸ್ತೆ ಬದಿ ವ್ಯಾಪಾರಕ್ಕೆ ಕಡಿವಾಣ

ಮೈಸೂರು, ಸೆ.11(ಎಸ್‌ಪಿಎನ್)– ಮೈಸೂರು ಸಯ್ಯಾಜಿರಾವ್ ರಸ್ತೆ (ದೇವರಾಜ ಮಾರುಕಟ್ಟೆ ಎದುರು)ಯಲ್ಲಿನ ಬೀದಿ ಬದಿ ವ್ಯಾಪಾರಿಗಳ ಫುಟ್‌ಪಾತ್ ಅತಿ ಕ್ರಮಣವನ್ನು ಗಂಭೀರವಾಗಿ ಪರಿಗಣಿಸಿರುವ ದೇವರಾಜ ಪೊಲೀಸರು, ಕಳೆದ ಮೂರು ದಿನಗಳಿಂದ ಇಲ್ಲಿನ ವ್ಯಾಪಾರಕ್ಕೆ ಕಡಿವಾಣ ಹಾಕಿದ್ದಾರೆ.

ಮೈಸೂರು ಅರಮನೆ ಸುತ್ತಮುತ್ತ, ಕೆ.ಆರ್.ವೃತ್ತ, ದೇವರಾಜ ಮಾರುಕಟ್ಟೆ ಮುಂಭಾಗ, ಸಯ್ಯಾಜಿರಾವ್ ರಸ್ತೆ ಆಸು-ಪಾಸು ಸೇರಿದಂತೆ ಜನಸಂದಣಿ ಇರುವ ಕಡೆ ಬೀದಿಬದಿ ವ್ಯಾಪಾರಿಗಳು ಫುಟ್‌ಪಾತ್ ಅನ್ನು ಸಂಪೂರ್ಣ ಆಕ್ರಮಿಸಿ ಪಾದಚಾರಿಗಳ ಓಡಾಟಕ್ಕೂ ಅವಕಾಶ ಇಲ್ಲದಂತೆ ವ್ಯಾಪಾರ ಮಾಡುತ್ತಿದ್ದಾರೆ ಎಂದು ಆರೋಪಿಸಿ ಮೈಸೂರಿನ ಹಲವು ಸಂಘ-ಸಂಸ್ಥೆಗಳು, ಪಾದಚಾರಿಗಳು ಮೈಸೂರು ನಗರ ಪಾಲಿಕೆ ಆಯುಕ್ತರಿಗೆ, ನಗರ ಪೋಲೀಸ್ ಆಯುಕ್ತರಿಗೆ ಈ ಜಾಗದಲ್ಲಿ ಬೀದಿಬದಿ ವ್ಯಾಪಾರಕ್ಕೆ ಅವಕಾಶ ನೀಡದೆ ಪಾದಚಾರಿಗಳ ಮುಕ್ತ ಓಡಾಟಕ್ಕೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದ್ದರು.



ಮೈಸೂರು ಸಯ್ಯಾಜಿ ರಾವ್ ರಸ್ತೆ ಯಲ್ಲಿನ ಬೀದಿ ಬದಿ ವ್ಯಾಪಾರಿಗಳ ಫುಟ್‌ಪಾತ್ ಅತಿಕ್ರಮಣವನ್ನು ಪೊಲೀಸರು ತೆರವುಗೊಳಿಸಿರುವ ದೃಶ್ಯ

ಅಲ್ಲದೆ, ದಸರಾ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಈ ಮಾರ್ಗದಲ್ಲಿ ಜಂಬೋ ಪಡೆ ತಾಲೀಮು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಹೊರ ರಾಜ್ಯ ಮತ್ತು ವಿದೇಶಿ ಪ್ರವಾಸಿಗರು ಭೇಟಿ ನೀಡಿ, ಮೈಸೂರು ನಗರ ವೀಕ್ಷಿಸುವಾಗ ಪ್ರವಾಸಿಗರಿಗೆ ಮುಜುಗರ. ಪಾದಚಾರಿಗಳು ಸುಗಮ ಓಡಾಟ ಮತ್ತು ಕಾನೂನು ಸುವ್ಯವಸ್ಥೆ ಹಿನ್ನೆಲೆ ಈ ಕ್ರಮಕ್ಕೆ ಮುಂದಾಗಿರುವುದಾಗಿ ದೇವರಾಜ ಪೊಲೀಸರು 'ಮೈಸೂರು ಮಿತ್ರ'ನಿಗೆ ಸ್ಪಷ್ಟನೆ ನೀಡಿದರು.

ಸೆ.29ರವರೆಗೆ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಡೋಮ್ ಥಿಯೇಟರ್ ಚಮತ್ಕಾರ

ಮೈಸೂರು,ಸೆ.11(ಪಿಎಂ)– ನಗರದ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ 360 ಡಿಗ್ರಿ ಇಮ್ಮರ್‌ಸೀವ್ ಡೋಮ್ ಥಿಯೇಟರ್ ಪ್ರದರ್ಶನವು ಸೆ.5ರಿಂದ ಆರಂಭಗೊಂಡಿದ್ದು, ಸೆ.29ರವರೆಗೆ ನಡೆಯಲಿದೆ.

ನಗರದಲ್ಲಿ ವಿಶಿಷ್ಟ ಅನುಭವ ನೀಡುವಲ್ಲಿ ಹೆಸರುವಾಸಿಯಾದ ನೆಕ್ಸಸ್ ಸೆಂಟರ್ ಸಿಟಿ ಮಾಲ್, ಮೈಸೂರಲ್ಲೇ ಮೊದಲ ಬಾರಿಗೆ ಆಯೋಜಿಸಿರುವ ಗುಮ್ಮಟದ ಥಿಯೇಟರ್‌ನಲ್ಲಿ ಚಮತ್ಕಾರದ ಲೋಕ ನೋಡಬಹುದು. ಈ ಡೋಮ್ ಎಕ್ಸ್‌ಪೀರಿಯನ್ಸ್ ಪ್ರದರ್ಶನಕ್ಕೆ ಎಲ್ಲಾ ವಯೋಮಾನದವರೆಗೂ ಪ್ರವೇಶವಿದೆ.

ಹಿಂದೆಂದೂ ಬಾರದ ವಿಶಿಷ್ಟ ಅನುಭವ ದೊರೆಯಲಿದ್ದು, ಅಲ್ಲಾದ್ದೀನ್, ಕ್ವಾಂಟಮ್ ವರ್ಲ್ಡ್, ಬ್ಲ್ಯಾಕ್ ಹೋಲ್ ಸೇರಿದಂತೆ ಇನ್ನು ಅನೇಕ ರೋಮಾಂಚನಕಾರಿ ಪ್ರದರ್ಶನವು ವಿಸ್ಮಯ ಲೋಕದ ಅನುಭವ ನೀಡಲಿದೆ. ಪ್ರತಿ ಪ್ರದರ್ಶನವು 5ರಿಂದ 6 ನಿಮಿಷಗಳ ದೃಶ್ಯಾವಳಿಯ ಚಮತ್ಕಾರ ಮೂಡುವಂತೆ ವಿನ್ಯಾಸಗೊಳಿಸಲಾಗಿದೆ. ಒಂದು ಪ್ರದರ್ಶನಕ್ಕೆ 150 ರೂ. ಟಿಕೆಟ್ ದರ ಇದ್ದು, ಅಂತೆಯೇ ಇಬ್ಬರಿಗೆ 250 ರೂ., ನಾಲ್ವರಿಗೆ 400 ರೂ.ಗಳ ಟಿಕೆಟ್ ದರವಿದೆ ಎಂದು ಪ್ರಕಟಣೆ ತಿಳಿಸಿದೆ.

ಅಲಂಕಾರಿಕ ಕಂಬಗಳ ಸಾಲಿನಲ್ಲಿ ಅವಲಕ್ಷಣ!

ಮೈಸೂರು, ಸೆ.11(ಎಸ್‌ಪಿಎನ್)– ಮೈಸೂರು ಸಯ್ಯಾಜಿರಾವ್ ರಸ್ತೆಯ ನಗರ ಬಸ್ ನಿಲ್ದಾಣದ ಮುಂಭಾಗದ ಕಲ್ಲಿನ ಅಲಂಕಾರಿಕ ಕಂಬಗಳನ್ನು ಕಿಡಿಗೇಡಿಗಳು ತೆರವುಗೊಳಿಸಿದ್ದ ಜಾಗದಲ್ಲಿ ಇದೀಗ ದೇವರಾಜ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ತಂತಿಯಿಂದ ಬಿಗಿದಿದ್ದಾರೆ.



ನಗರ ಬಸ್ ನಿಲ್ದಾಣಕ್ಕೆ ಬರುವ ಪ್ರಯಾಣಿಕರು ಅಡ್ಡಾದಿಡ್ಡಿಯಾಗಿ ರಸ್ತೆ ದಾಟುವುದನ್ನು ತಡೆಯಲು ಈ ಕ್ರಮಕ್ಕೆ ಪೊಲೀಸರು ಮುಂದಾಗಿರುವುದು ಒಂದೆಡೆಯಾದರೆ, ಅಲಂಕಾರಿಕ ಕಂಬಗಳ ನಡುವೆ ಬ್ಯಾರಿಕೇಡ್ ಅಳವಡಿಸಿರುವುದು ಅವಲಕ್ಷಣದಂತೆ ಭಾಸವಾಗುತ್ತಿದೆ.

ಆದರೆ, ಜಿಲ್ಲಾಡಳಿತ ಹಲವು ವರ್ಷಗಳ ಹಿಂದೆ ಕೋಟ್ಯಾಂತರ ರೂ. ವೆಚ್ಚದಲ್ಲಿ ಅಲಂಕಾರಿಕ ಕಂಭಗಳನ್ನು ಅಳವಡಿಸಿ, ರಾಜಪಥದ ರಸ್ತೆಯನ್ನು ಅಂದಗೊಳಿಸಿತು. ಇಲ್ಲಿನ ಬೀದಿಬದಿ ವ್ಯಾಪಾರಿಗಳ ಸ್ವಾರ್ಥಕ್ಕೆ, ಪ್ರಯಾಣಿಕರ ಅವಸರಕ್ಕೆ ಇಲ್ಲಿನ ಕಂಬಗಳನ್ನು ಮುರಿದು ಬಿದ್ದಿವೆ ಎಂಬುದು ಸಾರ್ವಜನಿಕರ ಆಕ್ರೋಶ.



ಬುಧವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಚಾಮರಾಜ ಕ್ಷೇತ್ರದ ಮಾಜಿ ಶಾಸಕರೂ ಆದ ಮೈಸೂರು ನಗರ ಜಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಅವರಿಗೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಪರವಾಗಿ ಜಿಲ್ಲಾ ಅಧ್ಯಕ್ಷ ನಾರಾಯಣಗೌಡ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಗಣಪತಿ ಪೂಜಾ ಕಾರ್ಯಕ್ರಮ



ಮೈಸೂರಿನ ಕುವೆಂಪುನಗರದಲ್ಲಿರುವ ಶ್ರೀ ಆದಿಚುಂಚನಗಿರಿ ಶಾಲೆ ಆವರಣದಲ್ಲಿ ಗಣಪತಿ ಪೂಜಾ ಕಾರ್ಯಕ್ರಮವನ್ನು ಶ್ರೀ ಸೋಮೇಶ್ವರನಾಥ ಸ್ವಾಮೀಜಿ ನೆರವೇರಿಸಿದರು. ಮುಖಂಡ ವಿಕ್ರಾಂತ್ ಪಿ.ದೇವೇಗೌಡ, ಕಾಲೇಜಿನ ಆಡಳಿತ ಮಂಡಳಿಯ ನರಸೇಗೌಡ, ಬೋಧಕ ಸಿಬ್ಬಂದಿ ವರ್ಗ ಇನ್ನಿತರರಿದ್ದರು.

ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ಹುಟ್ಟುಹಬ್ಬದ ಶುಭಾಶಯ



ಪಡುವಾರಹಳ್ಳಿ ಕನ್ನಡ ಗೆಳೆಯರ ಬಳಗ ಹಾಗೂ ಗ್ರಾಮದ ಟ್ರಸ್ಟ್ ವತಿಯಿಂದ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ಹುಟ್ಟುಹಬ್ಬದ ಪ್ರಯುಕ್ತ ಆತ್ಮೀಯವಾಗಿ ಸನ್ಮಾನಿಸಲಾಯಿತು. ಟ್ರಸ್ಟಿನ ಕಾರ್ಯದರ್ಶಿ ಎಂ.ಬೈರಪ್ಪ, ಉಪಾಧ್ಯಕ್ಷ ರಾಮಣ್ಣ, ಜನಹಿತ ಸಹಕಾರ ಸಂಘದ ನಿರ್ದೇಶಕರಾದ ಸಿ.ಡಿ.ಕುಮಾರ್, ಸಂತೋಷ್, ರಾಘಗೌಡ, ನಗರಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ಮುಖಂಡರಾದ ಭೈರಪ್ಪ, ಯೋಗ, ವೇಣು, ಶಂಭುಲಿಂಗ್, ಅರುಣ್ ಇನ್ನಿತರರು ಉಪಸ್ಥಿತರಿದ್ದರು.



ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಶಾಸಕ ಎಲ್.ನಾಗೇಂದ್ರ ಅವರು ತಮ್ಮ ಕುಟುಂಬದವರೊಂದಿಗೆ ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗನರಸಿಂಹ ಸ್ವಾಮಿ ದರ್ಶನ ಪಡೆದು, ಆಶೀರ್ವಾದ ಪಡೆದರು.



ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ರವರಿಗೆ ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ನಗರ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸಚಿನ್.ಆರ್, ಉಪಾಧ್ಯಕ್ಷ ಸಂತೋಷ್, ಶಿವಕುಮಾರ್, ನರೇಂದ್ರ, ಯೋಗೇಶ್, ರಾಕೇಶ್, ಚಾಮರಾಜ ವಿಧಾನಸಭಾ ಕ್ಷೇತ್ರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಅರ್ಜುನ್, ಬನ್ನೂರ್ ಕುಮಾರ್ ಮುಂತಾದವರು ಜನ್ಮದಿನದ ಶುಭಾಶಯವನ್ನು ಕೋರಿದರು.



ಮೈಸೂರು ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ ಅವರನ್ನು ರಾಜ್ಯ ಮಾಧ್ಯಮ ಘಟಕದ ವತಿಯಿಂದ ಸನ್ಮಾನಿಸಲಾಯಿತು. ರಾಜ್ಯ ವಕ್ತಾರ ಅಶೋಕ್‌ಕುಮಾರ್, ರಾಜ್ಯ ಮಾಧ್ಯಮ ಸಹ ಸಂಚಾಲಕ ಪ್ರಶಾಂತ್, ಮಾಧ್ಯಮ ರಾಜ್ಯ ಸಮಿತಿ ಸದಸ್ಯ ನಾಗೇಶ್, ಜಿಲ್ಲಾ ವಕ್ತಾರ ಮಹದೇವಸ್ವಾಮಿ, ನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ನಗರ ಸಹ ವಕ್ತಾರ ದೇವರಾಜ್, ಜಿಲ್ಲಾ ಸಹ ವಕ್ತಾರ ಶ್ರೀನಿವಾಸ್ ರೆಡ್ಡಿ, ನಗರ ಮಾಧ್ಯಮ ಸಹ ಸಂಚಾಲಕ ಸಂತೋಷ್‌ಕುಮಾರ್, ಜಿಲ್ಲಾ ಸಹ ಮಾಧ್ಯಮ ಸಂಚಾಲಕ ಮಧು ವರುಣ ಉಪಸ್ಥಿತರಿದ್ದರು.

ದೇಶ - ವಿದೇಶ

ವಿದ್ಯುತ್ ಬಿಲ್ 800 ಮಿಲಿಯನ್ ಡಾಲರ್ ಬಾಕಿ: ಬಾಂಗ್ಲಾದೇಶ ಸರ್ಕಾರಕ್ಕೆ ಅದಾನಿ ಪತ್ರ

ಢಾಕಾ: ಆಂತರಿಕ ಸಂಘರ್ಷದಿಂದ ಬೇಯುತ್ತಿರುವ ಬಾಂಗ್ಲಾದೇಶ ತಮಗೆ 800 ಮಿಲಿಯನ್ ಡಾಲರ್ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದೆ ಎಂದು ಅದಾನಿ ಗ್ರೂಪ್‌ನ ಅಧ್ಯಕ್ಷ ಗೌತಮ್ ಅದಾನಿ ಬಾಂಗ್ಲಾದೇಶ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.



ಆ.27ರ ಈ ಪತ್ರದಲ್ಲಿ ವಿವರಿಸಲಾದ ವಿನಂತಿಯನ್ನು ದೇಶದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ಅವರಿಗೆ ತಿಳಿಸಲಾಗಿದೆ. ಬಾಕಿ ಪಾವತಿಗಳಿಂದ ಉಂಟಾದ ಆರ್ಥಿಕ ಒತ್ತಡವನ್ನು ಪರಿಹರಿಸಲು ತಕ್ಷಣದ ಕ್ರಮದ ಅಗತ್ಯವನ್ನು ಅದಾನಿ ಪತ್ರದಲ್ಲಿ ಒತ್ತಿ ಹೇಳಿದ್ದು ಮಾತ್ರವಲ್ಲದೇ ತಮ್ಮ ಕಂಪನಿ ಎದುರಿಸುತ್ತಿರುವ ಆರ್ಥಿಕ ಒತ್ತಡದ ಬಗ್ಗೆಯೂ ಪತ್ರದಲ್ಲಿ ವಿವರಿಸಿದ್ದಾರೆ. ಅದಾನಿ ಪತ್ರದ ವಿಚಾರವಾಗಿ ಸ್ಪಷ್ಟೀಕರಣ ನೀಡಿರುವ ಬಾಂಗ್ಲಾದೇಶದ ಉನ್ನತ ಇಂಧನ ಸಲಹೆಗಾರ ಮುಹಮ್ಮದ್ ಫೌಜುಲ್ ಕಬೀರ್ ಖಾನ್, ಅದಾನಿ ಪವರ್ ಸಂಸ್ಥೆಗೆ 492 ಮಿಲಿಯನ್ ಬಾಕಿ ಇದೆ ಎಂದು ಒಪ್ಪಿಕೊಂಡರು. ಬೆಳೆಯುತ್ತಿರುವ ಸಾಲದ ಹೊರ ತಾಗಿಯೂ, ಅದಾನಿ ಪವರ್ ವಿಶ್ವಾಸಾರ್ಹ ಮತ್ತು ಸ್ಪರ್ಧಾತ್ಮಕ ಬೆಲೆಯ ವಿದ್ಯುತ್ ಅನ್ನು ಒದಗಿಸುವುದನ್ನು ಮುಂದುವರಿಸುತ್ತದೆ ಎಂಬ ವಿಶ್ವಾಸ ತಮಗಿದೆ ಎಂದು ಹೇಳಿದ್ದಾರೆ.

ಪಾರ್ಟಿ ಮಾಡುವುದಕ್ಕಾಗಿ ನೃತ್ಯಗಾರ್ತಿಯರ ಅಪಹರಣ: ಎಂಟು ಮಂದಿ ಬಂಧನ

ಲಖನೌ: ಉತ್ತರ ಪ್ರದೇಶದ ಕುಶಿನಗರದಲ್ಲಿ ಪಾರ್ಟಿಗಾಗಿ ಡ್ಯಾನ್ಸರ್‌ಗಳನ್ನು ಅಪಹರಣ ಮಾಡಿದ್ದ 8 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಸಂಗೀತ ಕಾರ್ಯಕ್ರಮಗಳಲ್ಲಿ ನೃತ್ಯಗಾರ್ತಿಯರಾಗಿ ಕೆಲಸ ಮಾಡುತ್ತಿದ್ದ ಇಬ್ಬರು ಯುವತಿಯರನ್ನು ಗನ್ ಪಾಯಿಂಟ್‌ನಲ್ಲಿ ಈ 8 ಮಂದಿ ಅಪಹರಿಸಿದ್ದರು. ಹಣಕ್ಕಾಗಿ ಅಲ್ಲದೇ, ಹುಟ್ಟಿದಹಬ್ಬದ ಕಾರ್ಯಕ್ರಮವೊಂದಕ್ಕೆ ನೃತ್ಯ ಮಾಡುವುದಕ್ಕಾಗಿ ಅಪಹರಣ ಮಾಡಿದ್ದರು. ಆರೋಪಿಗಳ ಪೈಕಿ ಓರ್ವನ ಹುಟ್ಟುಹಬ್ಬ ಆಚರಿಸಲು ಮುಂದಾಗಿದ್ದರು. ಮದಿರೆಯ ಮತ್ತಿನಲ್ಲಿ ಅವರು ಪಾರ್ಟಿಯಲ್ಲಿ ಪ್ರದರ್ಶನ ನೀಡುವುದಕ್ಕಾಗಿ ನೃತ್ಯಗಾರ್ತಿಯರಿಗಾಗಿ ಹುಡುಕುತ್ತಿದ್ದರು. ನೃತ್ಯಗಾರ್ತಿಯರು ಬಾಡಿಗೆಗೆ ಪಡೆದು ತಂಗಿದ್ದ ರೂಮ್‌ಗಳಿಗೆ ತೆರಳಿ ನೃತ್ಯಗಾರ್ತಿಯರನ್ನು ಕಾರ್ಯಕ್ರಮಕ್ಕೆ ಬರುವಂತೆ ಕೇಳಿದ್ದರು. ಆದರೆ ನೃತ್ಯಗಾರ್ತಿಯರು ಇದಕ್ಕೆ ಒಪ್ಪಿಗೆ ನೀಡದ ಕಾರಣ ಗನ್ ತೋರಿಸಿ ಅವರನ್ನು ಹೊತ್ತೊಯ್ದಿದ್ದಾರೆ. ಆರೋಪಿಗಳು ಗಾಳಿಯಲ್ಲಿ ಗುಂಡು ಹಾರಿಸಿದ್ದು ಸ್ಥಳೀಯರಲ್ಲಿ ಭೀತಿ ಉಂಟು ಮಾಡಿತ್ತು. ಪೊಲೀಸರು ಅಜಿತ್ ಸಿಂಗ್ ನಿವಾಸಕ್ಕೆ ತೆರಳಿ ನೃತ್ಯಗಾರ್ತಿಯರನ್ನು ರಕ್ಷಿಸಿ, ಅಜಿತ್ ಸಿಂಗ್ ಸೇರಿ 7 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.



ಉದ್ಯೋಗವೂ ಇಲ್ಲದೆ, ವೇತನವೂ ಇಲ್ಲದೆ ಇಸ್ರೇಲ್‌ನಿಂದ ವಾಪಸಾಗುತ್ತಿರುವ ಕಾರ್ಮಿಕರು

ಇಸ್ರೇಲ್: ಸರಿಯಾದ ಉದ್ಯೋಗವೂ ಇಲ್ಲದೆ, ವೇತನವೂ ಇಲ್ಲದೆ ಭಾರತದ ಕಾರ್ಮಿಕರು ನಿಷ್ಪ್ರಯೋಜಕರೆನಿಸಿಕೊಂಡು ಇಸ್ರೇಲ್‌ನಿಂದ ವಾಪಸಾಗುತ್ತಿದ್ದಾರೆ. ಗಾಜಾ ಯುದ್ಧ ಆರಂಭವಾದ ಬಳಿಕ 1 ಲಕ್ಷಕ್ಕೂ ಅಧಿಕ ಪ್ಯಾಲೆಸ್ತೀನ್ ಕಾರ್ಮಿಕರಿಗೆ ಅಲ್ಲಿ ಕೆಲಸ ಮಾಡದಂತೆ ಇಸ್ರೇಲ್ ನಿರ್ಬಂಧ ಹೇರಿತ್ತು.



ಆ ಸಮಯದಲ್ಲಿ ಇಸ್ರೇಲ್‌ನಲ್ಲಿ ಮನೆಗಳ ನಿರ್ಮಾಣ ಕಾರ್ಯಗಳು ಸ್ಥಗಿತಗೊಂಡಿದ್ದವು, ಆ ಸಮಯದಲ್ಲಿ ಪ್ರಧಾನಿ ಬೆಂಜಮಿನ್ ನೇತನ್ಯಾಹು ಸರ್ಕಾರವು ಭಾರತದಿಂದ ಕಾರ್ಮಿಕರನ್ನು ಕರೆಸುವ ಯೋಜನೆಗೆ ಅನುಮೋದನೆ ನೀಡಿತು. ಉತ್ತರ ಪ್ರದೇಶ, ಹರ್ಯಾಣ, ಬಿಹಾರ ಹಾಗೂ ದಕ್ಷಿಣ ಭಾರತದಿಂದ ಸಾವಿರಾರು ಕಟ್ಟಡ ಕಾರ್ಮಿಕರನ್ನು ಅಲ್ಲಿಗೆ ಕಳುಹಿಸಲಾಯಿತು. ಹಮಾಸ್, ಹಿಜ್ಬುಲ್ಲಾ ಮತ್ತು ಇರಾನ್ ದಾಳಿಯ ನಡುವೆ ಭಾರತೀಯ ಕಾರ್ಮಿಕರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಇಸ್ರೇಲ್‌ಗೆ ಹೋಗಿದ್ದರು. ಆದರೆ ಈಗ ಅಲ್ಲಿನ ಉದ್ಯಮಗಳು ಅನೇಕ ಭಾರತೀಯ ಕಾರ್ಮಿಕರ ಕಾರ್ಯಕ್ಷಮತೆಯಿಂದ ಸಂತೋಷವಾಗಿಲ್ಲ. ಭಾರತೀಯರಲ್ಲಿ ಅನುಭವದ ತೀವ್ರ ಕೊರತೆಯಿದೆ ಎಂದು ಇಸ್ರೇಲ್ ಹೇಳುತ್ತಿದೆ. ಕೆಲವರಿಗೆ ಸುತ್ತಿಗೆ ಹಿಡಿದುಕೊಳ್ಳಲೂ ಬರುವುದಿಲ್ಲ ಎಂದು ಇಸ್ರೇಲ್ ಬಿಲ್ಡರ್‌ಗಳು ಅಪಹಾಸ್ಯ ಮಾಡಿದ್ದಾರೆ.

ಕ್ರಿಪ್ಟೋ ಕರೆನ್ಸಿ ವರ್ಗಾಯಿಸಿ ವಂಚನೆ: ಹರಿಯಾಣ ಮೂಲದ ಟೆಕ್ಕಿ ಬಂಧನ

ಬೆಂಗಳೂರು: ಕ್ರಿಪ್ಟೋಕರೆನ್ಸಿ ವರ್ಗಾವಣೆ ಮಾಡಿ ವಂಚಿಸಿದ್ದ ಆರೋಪಿಯೊಬ್ಬನನ್ನು ಅಪರಾಧ ತನಿಖಾ ವಿಭಾಗದ (ಸಿಐಡಿ) ಅಧಿಕಾರಿಗಳು ಮಂಗಳವಾರ ಬಂಧನಕ್ಕೊಳಪಡಿಸಿದ್ದಾರೆ.



ಹರಿಯಾಣ ಮೂಲದ ಶುಭಾಂಗ್ ಜೈನ್ (26) ಬಂಧಿತ ಆರೋಪಿ. ಸೈಪರ್ ಟೆಕ್ನಾಲಜೀಸ್ ಪ್ರೈವೇಟ್ ಕಂಪೆನಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ(ಸಿಇಒ) ಅಖಿಲ್ ಗುಪ್ತ ನೀಡಿದ ದೂರಿನನ್ವಯ ಆರೋಪಿಯನ್ನು ಬಂಧನಕ್ಕೊಳಪಡಿಸಲಾಗಿದೆ.ಕೋಟ್ಯಾಂತರ ರೂ. ವಂಚನೆ ಸಂಬಂಧ ಆರೋಪಿ ಶುಭಾಂಗ್ ಜೈನ್‌ನ ಬ್ಯಾಂಕ್ ಖಾತೆಯನ್ನು ಮುಟ್ಟುಗೋಲು ಹಾಕಲಾಗಿದೆ. ಕ್ರಿಪ್ಟೋ ವಾಲೆಟ್‌ನಿಂದ ಯಾರಿಗೆ ಎಷ್ಟು ಹಣ ನೀಡಿದ್ದ ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಅಲ್ಲದೇ, ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಗಳಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಲಾಗುತ್ತಿದೆ. ಸುಬ್ರಮಣ್ಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಸೈಪರ್ ಟೆಕ್ನಾಲಜೀಸ್ ಕಂಪೆನಿಯಲ್ಲಿ ಕ್ರಿಪ್ಟೋ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಆಗಿ ಆರೋಪಿ ಶುಭಾಂಗ್ ಜೈನ್ ಕೆಲಸ ಮಾಡುತ್ತಿದ್ದ.

ಆರು ಅಂತಸ್ತಿನ ಕಟ್ಟಡದಿಂದ ಜಿಗಿದು ಬಾಲಿವುಡ್ ನಟಿ ಮಲೈಕಾ ಅರೋರಾ ತಂದೆ ಆತ್ಮಹತ್ಯೆ

ಮುಂಬೈ: ಬಾಲಿವುಡ್ ನಟಿ ಮಲೈಕಾ ಅರೋರಾ ಅವರ ತಂದೆ ಅನಿಲ್ ಅರೋರಾ ಆತ್ಮಹತ್ಯೆಗೆ ಶರಣಾಗಿದ್ದಾರೆ. ಅವರು ಆರು ಅಂತಸ್ತಿನ ಕಟ್ಟಡದ ಮೇಲಿಂದ ಕೆಳಗೆ ಜಿಗಿದು ಸಾವನ್ನಪ್ಪಿದ್ದಾರೆಂದು ವರದಿಯಾಗಿದೆ.



ಸುದ್ದಿ ತಿಳಿದ ಕೂಡಲೇ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಖಚಿತಪಡಿಸಿದ್ದಾರೆ. ಆದರೆ ಘಟನಾ ಸ್ಥಳದಲ್ಲಿ ಯಾವುದೇ ಡೆತ್‌ನೋಟ್ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಬಹಳ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಕಾರಣ ಆತ್ಮಹತ್ಯೆಗೆ ಶರಣಾಗಿದ್ದಾರೆಂದು ಹೇಳಲಾಗುತ್ತಿದೆ. ಮಲೈಕಾ 11 ವರ್ಷದವರಿದ್ದಾಗ ಅವರ ಪೋಷಕರು ವಿಚ್ಛೇದನ ಪಡೆದಿದ್ದರು. ಬಳಿಕ ಮಲೈಕಾ ತಾಯಿ ಜಾಯ್ಸ್ ಪಾಲಿಕಾರ್ಪ್, ಸಹೋದರಿ ಅಮೃತಾ ಅರೋರಾ ಅವರೊಂದಿಗೆ ವಾಸವಾಗಿದ್ದರು.

ಕೊಡಗಿನಲ್ಲಿ ಕಾಫಿ ಕೃಷಿ ಅವನತಿ ಹಾದಿ

ಸಾರ್ವಜನಿಕ ಹಿತರಕ್ಷಣಾ ಸಮಿತಿಯ ಕಾನೂನು ಸಲಹೆಗಾರ ಬೋಸ್ ವಿಶ್ವನಾಥ್ ಆತಂಕ



ಸುದ್ದಿಗೋಷ್ಠಿಯಲ್ಲಿ ಸಾರ್ವಜನಿಕ ಹಿತರಕ್ಷಣಾ ಸಮಿತಿಯ ಕಾನೂನು ಸಲಹೆಗಾರ ಸಿ.ಎನ್.ಬೋಸ್ ವಿಶ್ವನಾಥ್ ಮಾತನಾಡಿದರು.

ಮಡಿಕೇರಿ, ಸೆ.11– ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾಫಿಗೆ ಉತ್ತಮ ಧಾರಣೆ ಲಭ್ಯವಿದ್ದರು, ವರ್ತಕರಿಂದ ದೊರಕದ ಯೋಗ್ಯ ಬೆಲೆ, ಅತಿವೃಷ್ಟಿಯಿಂದ ನೆಲ ಕಚ್ಚುತ್ತಿರುವ ಫಸಲು, ಕಾರ್ಮಿಕರ ಸಂಕಷ್ಟಗಳಿಗೆ ಸೂಕ್ತ ಪರಿಹಾರ ದೊರಕದಿದ್ದಲ್ಲಿ ಜಿಲ್ಲೆಯಲ್ಲಿ ಕಾಫಿ ಕೃಷಿ ಅವನತಿಯ ಹಾದಿ ಹಿಡಿಯಲಿದೆ ಎಂದು ಸಾರ್ವಜನಿಕ ಹಿತರಕ್ಷಣಾ ಸಮಿತಿಯ ಕಾನೂನು ಸಲಹೆಗಾರ ಸಿ.ಎನ್.ಬೋಸ್ ವಿಶ್ವನಾಥ್ ಆತಂಕ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಔಟ್‌ಟರ್ನ್ ಮೇಲೆ ಪಾರ್ಚ್‌ಮೆಂಟ್ ಕಾಫಿ ಒಂದ ಕಿಲೋಗೆ 400 ರಿಂದ 450 ರೂ.ಗಳಿದ್ದ ಸಂದರ್ಭ ಸ್ಥಳೀಯ ವರ್ತಕರು ಉತ್ತಮ ಬೆಲೆಗೆ ಬೆಳೆಗಾರರಿಂದ ಕಾಫಿ ಖರೀದಿಗೆ ಮುಂದಾಗುತ್ತಿಲ್ಲ. ಬದಲಾಗಿ ಬೆಳೆಗಾರರಿಂದ ಕಾಫಿ ಲಭ್ಯವಾಗುತ್ತಿಲ್ಲ ಎನ್ನುವ ಸಬೂಬು ನೀಡಿ, ಧಾರಣೆ 350 ರೂ.ಗೆ ಕುಸಿಯುವ ಹಂತದಲ್ಲಿ ಕಾಫಿ ಖರೀದಿ ಮಾಡುವ ಮೂಲಕ ಬೆಳೆಗಾರರಿಗೆ ಅಪಾರ ನಷ್ಟ ಉಂಟು ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಫಿ ವಹಿವಾಟು ಮುಕ್ತ ಮಾರುಕಟ್ಟೆ ಪ್ರವೇಶಿಸಿದ ಬಳಿಕ ಇದರ ವ್ಯಾಪಾರ ಸಂತೆ ವ್ಯಾಪಾರದಂತಾಗಿದೆ. ಮುಕ್ತ ಮಾರುಕಟ್ಟೆಯಿಂದ ಬೆಳೆಗಾರನಿಗೆ ಅನುಕೂಲವಾಗಿರುವ ಜೊತೆಗೆ ಅಷ್ಟೇ ಪ್ರಮಾಣದಲ್ಲಿ ಸಮಸ್ಯೆಗಳು ಸೃಷ್ಟಿಯಾಗಿದೆ. ಪ್ರಸ್ತುತ ಬೆಳೆದ ಕಾಫಿ ಫಸಲನ್ನು ಉತ್ತಮ ಧಾರಣೆಗೆ ಮಾರಾಟ ಮಾಡಬೇಕೆನ್ನುವ ಬೆಳೆಗಾರನ ನಿರೀಕ್ಷೆಗಳಿಗೆ ಔಟ್‌ಟರ್ನ್ ಹೆಸರಿನಲ್ಲಿ ವಂಚನೆಯಾಗುತ್ತಿದೆ ಎಂದು ಆರೋಪಿಸಿದರು.

ಕಾಫಿ ಮಂಡಳಿ ಅಂತಾರಾಷ್ಟ್ರೀಯ ಮಟ್ಟದ ದರಕ್ಕೆ ಅನುಗುಣವಾಗಿ ಬೆಳೆಗಾರರಿಗೆ ಉತ್ತಮ ಧಾರಣೆ ಒದಗಿಸಲು ಕ್ರಮ ಕೈಗೊಳ್ಳಬೇಕು. ಫಸಲನ್ನು ಮಾರಾಟ ಮಾಡುವ ಹಂತದಲ್ಲಿ ತೂಕದಲ್ಲೂ ಬೆಳೆಗಾರ ವಂಚನೆಗೆ ಒಳಗಾಗುತ್ತಿದ್ದಾನೆ ಎಂದರು.

ನಾಮಕಾವಸ್ಥೆ ಪರಿಹಾರ: ಪ್ರಸಕ್ತ ಸಾಲಿನಲ್ಲಿ ಸುರಿದ ಅತಿಯಾದ ಮಳೆ ಕಾಫಿ ಫಸಲಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಮಳೆಯಿಂದ ಕಾಫಿ ಕಾಯಿಗಳು ಕೊಳೆತು ಉದುರಿ ಬೆಳೆಗಾರನಿಗೆ ಸಮಸ್ಯೆ ಉಂಟಾಗಿದೆ. ಈ ಹಂತದಲ್ಲಿ ಕಾಫಿ ಮಂಡಳಿ ಪ್ರತಿ ತೋಟಗಳಿಗೆ ತೆರಳಿ ಸಮೀಕ್ಷೆ ನಡೆಸದಿರುವುದರಿಂದ ಬೆಳೆಗಾರರಿಗೆ ಅತ್ಯಂತ ಕಡಿಮೆ ಪರಿಹಾರ ದೊರಕುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಚೇರಿಗಳಲ್ಲಿ ಅಧಿಕಾರಿಗಳು ಅಲಭ್ಯ: ಸಾರ್ವಜನಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಅಜ್ಜಮಾಡ ಕಟ್ಟಿ ಮಂದಯ್ಯ ಮಾತನಾಡಿ, ಜಿಲ್ಲಾ ಮತ್ತು ತಾಲೂಕು ಕೇಂದ್ರ ಸೇರಿದಂತೆ ಹೋಬಳಿ ಕೇಂದ್ರಗಳಲ್ಲಿ ವಾರದ ಸಂತೆ ದಿನಗಳಂದು ವಿವಿಧ ಇಲಾಖೆ ಅಧಿಕಾರಿಗಳು ಕೇಂದ್ರ ಸ್ಥಾನಗಳಲ್ಲಿ ಲಭ್ಯವಿಲ್ಲದಿರುವುದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷ ಎಸ್.ಎ.ರತ್ನ ಸುಬ್ಬಯ್ಯ, ಪ್ರಧಾನ ಕಾರ್ಯದರ್ಶಿ ಎ.ಎ.ಸತೀಶ್ ದೇವಯ್ಯ, ಸಹ ಕಾರ್ಯದರ್ಶಿ ಕೆ.ಎಸ್.ರಾಜ ನರೇಂದ್ರ ಉಪಸ್ಥಿತರಿದ್ದರು.

ಸೋಮವಾರಪೇಟೆ ಪಪಂ ಎನ್‌ಡಿಎ ಪಾಲು

ಅಧ್ಯಕ್ಷರಾಗಿ ಜೆಡಿಎಸ್‌ನ ಜಯಂತಿ, ಉಪಾಧ್ಯಕ್ಷರಾಗಿ ಬಿಜೆಪಿಯ ಮೋಹಿನಿ ಆಯ್ಕೆ



ಸೋಮವಾರಪೇಟೆ ಪಪಂ ಅಧ್ಯಕ್ಷೆ ಜಯಂತಿ ಹಾಗೂ ಉಪಾಧ್ಯಕ್ಷೆ ಮೋಹಿನಿ ಅವರನ್ನು ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಅಭಿನಂದಿಸಿದರು.

ಮಡಿಕೇರಿ, ಸೆ.11– ಸೋಮವಾರ ಪೇಟೆ ಪಪಂ ಆಡಳಿತ ಮಂಡಳಿ ಬಿಜೆಪಿ–ಜೆಡಿಎಸ್ ಪಾಲಾಗಿದೆ.

ಬುಧವಾರ ನಡೆದ ಚುನಾವಣೆಯಲ್ಲಿ ಸಾಮಾನ್ಯ ಮಹಿಳೆ ಮೀಸಲು ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್‌ನ ಜಯಂತಿ ಹಾಗೂ ಪರಿಶಿಷ್ಟ ಜಾತಿ ಮಹಿಳೆ ಮೀಸಲು ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯ ಮೋಹಿನಿ ಅವರು ಮಾತ್ರ ನಾಮಪತ್ರ ಸಲ್ಲಿಸಿದರು. ನಂತರ ಚುನಾವಣಾಧಿಕಾರಿಗಳು ಅವಿರೋಧ ಆಯ್ಕೆ ಘೋಷಿಸಿದರು.

10ನೇ ವಾರ್ಡ್‌ನ ಜಯಂತಿ ಹಾಗೂ 3ನೇ ವಾರ್ಡ್‌ನ ಬಿಜೆಪಿಯ ಮೋಹಿನಿ ಆಯ್ಕೆಯಾಗಿದ್ದು, ಕೇವಲ 3 ಸದಸ್ಯರನ್ನು ಹೊಂದಿರುವ ಕಾಂಗ್ರೆಸ್ ತಟಸ್ಥವಾಗಿತ್ತು. ಬಿಜೆಪಿ 4, ಕಾಂಗ್ರೆಸ್ 3, ಜೆಡಿಎಸ್ 3 ಮತ್ತು ಪಕ್ಷೇತರ 1 ಸದಸ್ಯರಿದ್ದಾರೆ. ಇದೇ ವೇಳೆ ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದರು.

ಮಡಿಕೇರಿಯಲ್ಲಿ ಕೆಎಸ್‌ಆರ್‌ಟಿಸಿ ವಿಭಾಗೀಯ ಘಟಕ ಆರಂಭಕ್ಕೆ ಕ್ರಮ

● ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ ● ಶನಿವಾರಸಂತೆಯಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಭೂಮಿಪೂಜೆ



ಶನಿವಾರಸಂತೆಯಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭೂಮಿಪೂಜೆ ನೆರವೇರಿಸಿದರು.

ಮಡಿಕೇರಿ, ಸೆ.11–ನಗರದಲ್ಲಿ ಕೆಎಸ್‌ಆರ್‌ಟಿಸಿ ವಿಭಾಗೀಯ ಘಟಕ ಆರಂಭಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದರು.

ಶನಿವಾರಸಂತೆಯಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮದ ಪುತ್ತೂರು ವಿಭಾಗ ವತಿಯಿಂದ 1 ಕೋಟಿ ರೂ. ವೆಚ್ಚದ ಬಸ್ ನಿಲ್ದಾಣ ನಿರ್ಮಾಣಕ್ಕೆ ಬುಧವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಘಟಕವಿದೆ. ಜೊತೆಗೆ ಕುಶಾಲನಗರದಲ್ಲಿ ನೂತನ ಘಟಕ ನಿರ್ಮಾಣವಾಗುತ್ತಿದೆ. ಈ ಎರಡು ಘಟಕಕ್ಕೆ ವಿಭಾಗೀಯ ಕಚೇರಿ ಆರಂಭಿಸಲು ಕಷ್ಟಸಾಧ್ಯ. ಆದ್ದರಿಂದ ಹತ್ತಿರದ ರಾಮನಾಥಪುರ ಇತರೆ ಒಟ್ಟು 4 ಘಟಕಗಳನ್ನು ಒಳಗೊಂಡು ಒಂದು ವಿಭಾಗೀಯ ಕಚೇರಿ ಆರಂಭಿಸಬೇಕು. ಆ ನಿಟ್ಟಿನಲ್ಲಿ ಆದ್ಯತೆ ಮೇಲೆ ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಶಕ್ತಿ ಯೋಜನೆ ನಂತರ ಸಾರಿಗೆ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಮತ್ತು ಸುಧಾರಣೆಯಾಗಿದೆ. ಪ್ರತಿನಿತ್ಯ ಸಾವಿರಾರು ಮಹಿಳೆಯರು ಬಸ್‌ನಲ್ಲಿ ಸಂಚರಿಸುತ್ತಿದ್ದಾರೆ. ಶಕ್ತಿ ಯೋಜನೆಯಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ 4500 ಹೊಸ ಬಸ್‌ಗಳನ್ನು ಖರೀದಿಸಲಾಗಿದೆ. ಜೊತೆಗೆ ಚಾಲಕ, ನಿರ್ವಾಹಕ ಸೇರಿದಂತೆ 9 ಸಾವಿರ ಉದ್ಯೋಗಗಳನ್ನು ಭರ್ತಿ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೆ.12ರಂದು ಬೆಂಗಳೂರಿನಲ್ಲಿ ಹೊಸ ಬಸ್‌ಗಳ ಸಂಚಾರ ಸೇರಿದಂತೆ ಸಾರಿಗೆ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ. ಜಿಲ್ಲೆಯ ಕೊಡ್ಲಿಪೇಟೆಯಲ್ಲೂ ಬಸ್ ನಿಲ್ದಾಣ ನಿರ್ಮಿಸಲಾಗುವುದು. ಹಾಗೆಯೇ ಖಾಸಗಿ ಬಸ್ ಮಾಲೀಕರ ಸಮಸ್ಯೆಯನ್ನು ಸಹ ಕೇಳಲಾಗಿದೆ. ಒಟ್ಟಾರೆ ಜಿಲ್ಲೆಯ ಜನರ ಸುಗಮ ಸಾರಿಗೆ ಸಂಚಾರಕ್ಕೆ ಎಲ್ಲಾ ಕ್ರಮವಹಿಸಲಾಗುವುದು. ಜಿಲ್ಲೆಯಲ್ಲಿ ಹೊಸ ಬಸ್ ಮಾರ್ಗಕ್ಕೂ ಕ್ರಮವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ಕೆಎಸ್‌ಆರ್‌ಟಿಸಿ ಇಡೀ ಏಷ್ಯದಲ್ಲೇ ಮಾದರಿ ಸಾರಿಗೆ ಸಂಸ್ಥೆಯಾಗಿದ್ದು, ಹಲವರಿಗೆ ಉದ್ಯೋಗ ನೀಡುವ ಜೊತೆಗೆ ಹೆಚ್ಚು ಲಾಭ ಹೊಂದಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಗ್ರಾಪಂ ಅಧ್ಯಕ್ಷ ಗೀತಾ ಹರೀಶ್, ಸದಸ್ಯ ರಘು ಮಾತನಾಡಿದರು. ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಪ್ರಮುಖರಾದ ಕೆ.ಪಿ.ಚಂದ್ರಕಲಾ, ಚಂದ್ರಮೌಳಿ, ಪುತ್ತೂರು ವಿಭಾಗೀಯ ನಿಯಂತ್ರಣಾಧಿಕಾರಿ ಆಮಲಿಂಗಯ್ಯ, ಬಿ.ಹೊಸಪೂಜಾರಿ, ಮಡಿಕೇರಿ ಕೆಎಸ್‌ಆರ್‌ಟಿಸಿ ಘಟಕ ವ್ಯವಸ್ಥಾಪಕ ಎಂ.ಎಂ.ಮೆಹಬೂಬ್ ಅಲಿ, ಶನಿವಾರಸಂತೆ ಹಾಗೂ ದುಂಡಳ್ಳಿ ಗ್ರಾಪಂ ಸದಸ್ಯರು, ಇತರರು ಇದ್ದರು.

ಬಸ್‌ಗಳಿಗೆ ಕೆಎ–12 ನೋಂದಣಿಗೊಳಿಸಿ

ಕೊಡಗು ಜಿಲ್ಲೆಯಲ್ಲಿ ಪ್ರತ್ಯೇಕ ಕೆಎಸ್‌ಆರ್‌ಟಿಸಿ ವಿಭಾಗೀಯ ಘಟಕ ಆರಂಭವಾಗಬೇಕಿದೆ. ಆ ನಿಟ್ಟಿನಲ್ಲಿ ಸಚಿವರು ಪ್ರತ್ಯೇಕ ವಿಭಾಗೀಯ ಕಚೇರಿ ಆರಂಭಿಸಬೇಕು. ಪ್ರತ್ಯೇಕ ವಿಭಾಗೀಯ ಘಟಕ ಆರಂಭಿಸುವ ಜೊತೆಗೆ ಬಸ್‌ಗಳಿಗೆ ಕೆಎ–12 ನೋಂದಣಿ ಆಗಬೇಕು ಎಂದು ಶಾಸಕ ಡಾ.ಮಂತರ್‌ಗೌಡ ಮನವಿ ಮಾಡಿದರು.

ಮುಂದಿನ ದಿನಗಳಲ್ಲಿ ಖಾಸಗಿ ಬಸ್ ನಿಲ್ದಾಣಕ್ಕೂ ದುಂಡಳ್ಳಿಯಲ್ಲಿ ಅವಕಾಶ ನೀಡಬೇಕು. ಶನಿವಾರಸಂತೆ ಭಾಗದ ಜನರ ಹಲವು ದಶಕಗಳ ಬೇಡಿಕೆಯನ್ನು ಸಚಿವರು ಈಡೇರಿಸಿದ್ದಾರೆ. ಬಸ್ ನಿಲ್ದಾಣ ನಿರ್ಮಾಣದ ಬಳಿಯ ಜಾಗವನ್ನು ಗ್ರಾಪಂಗೆ ನೀಡುವಂತಾಗಬೇಕು. ಇದರಿಂದ ಮಳಿಗೆ ನಿರ್ಮಾಣ ಮಾಡಿ ಗ್ರಾಪಂ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಅರಣ್ಯ ಹುತಾತ್ಮರ ದಿನಾಚರಣೆ

ಮಡಿಕೇರಿ, ಸೆ.11– ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಅಂಗವಾಗಿ ನಗರದ ಅರಣ್ಯ ಭವನದಲ್ಲಿ ಬುಧವಾರ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಾಡಿನ ಅರಣ್ಯ ಮತ್ತು ವನ್ಯಜೀವಿ ಸಂಪತ್ತು ಸಂರಕ್ಷಿಸಲು ಪ್ರಾಣತ್ಯಾಗ ಮಾಡಿದ ಅರಣ್ಯ ಇಲಾಖೆಯ ಹುತಾತ್ಮರ ಸ್ಮಾರಕಕ್ಕೆ ಹೂಗುಚ್ಛ ಸಮರ್ಪಿಸಿ, ನಮನ ಸಲ್ಲಿಸಲಾಯಿತು. ಕೊಡಗು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್‌ಕುಮಾರ್ ತ್ರಿಪಾಟಿ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಭಾಸ್ಕರ್, ವಿರಾಜಪೇಟೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಎಚ್. ಜಗನ್ನಾಥ, ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎ.ನೆಹರು, ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸೈಯದ್ ಅಹಮದ್ ಷಾ ಹುಸೈನಿ, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಪಿ.ಅಭಯಂಕರ್ ಹುತಾತ್ಮರಿಗೆ ನಮನ ಸಲ್ಲಿಸಿದರು.



ಅರಣ್ಯ ಹುತಾತ್ಮರ ಸ್ಮಾರಕಕ್ಕೆ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಹೂಗುಚ್ಛ ಸಮರ್ಪಿಸಿ, ನಮನ ಸಲ್ಲಿಸಿದರು.

ವ್ಯಕ್ತಿ ಕೆರೆಗೆ ಹಾರಿ ಆತ್ಮಹತ್ಯೆ

ಬೇಗೂರು, ಸೆ.11–ಜೀವನದಲ್ಲಿ ಜಿಗುಪ್ಸೆಗೊಂಡು ವ್ಯಕ್ತಿಯೊಬ್ಬರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಕಮರಹಳ್ಳಿ ಗ್ರಾಮದಲ್ಲಿ ನಡೆದಿದೆ.



ಬೇಗೂರಿನ ಸದಾನಂದ ಸ್ವಾಮಿ (45) ಮೃತ ವ್ಯಕ್ತಿ. ಈತ ಜೀವನದಲ್ಲಿ ಜಿಗುಪ್ಸೆಗೊಂಡು ಮಾನಸಿಕವಾಗಿ ಖಿನ್ನರಾಗಿದ್ದು, ಮಂಗಳವಾರ ಮಧ್ಯಾಹ್ನದಿಂದ ಕಾಣೆಯಾಗಿದ್ದ. ನಂತರ ಮನೆಯವರು ಹುಡುಕಾಟ ನಡೆಸಿದಾಗ ಕೆರೆ ದಂಡೆಯಲ್ಲಿ ಈತನ ಚಪ್ಪಲಿಗಳು ಸಿಕ್ಕಿವೆ. ಬಳಿಕ ಶೋಧಕಾರ್ಯ ನಡೆಸಿದಾಗ ಶವ ಪತ್ತೆಯಾಗಿದೆ. ಈ ಸಂಬಂಧ ಈತನ ಸಹೋದರಿ ಬೇಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಹುತಾತ್ಮರಿಗೆ ಗೌರವ ಸಲ್ಲಿಕೆ ಎಲ್ಲರ ಕರ್ತವ್ಯ

ಅರಣ್ಯ ಹುತಾತ್ಮರ ದಿನಾಚರಣೆಯಲ್ಲಿ ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅಭಿಮತ



ಚಾಮರಾಜನಗರದಲ್ಲಿ ನಡೆದ ದಿನಾಚರಣೆಯಲ್ಲಿ ಅರಣ್ಯ ಹುತಾತ್ಮರ ಸ್ಮಾರಕಕ್ಕೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಎಸ್.ಭಾರತಿ ಪುಷ್ಪಗುಚ್ಛ ಅರ್ಪಿಸಿದರು.

ಚಾಮರಾಜನಗರ, ಸೆ.11–ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ ವೇಳೆ ಹುತಾತ್ಮರಾದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಗುಂಡ್ಲುಪೇಟೆ ವೃತ್ತದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಆವರಣದಲ್ಲಿ ಬುಧವಾರ ರಾಷ್ಟ್ರೀಯ ಅರಣ್ಯ ಹುತಾತ್ಮರ ಸ್ಮರಣಾ ದಿನದ ಅಂಗವಾಗಿ ಚಾಮರಾಜನಗರ ಪ್ರಾದೇಶಿಕ ವೃತ್ತ ಹಾಗೂ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅರಣ್ಯ ಹುತಾತ್ಮರ ಸ್ಮಾರಕಕ್ಕೆ ಪುಷ್ಪಗುಚ್ಛ ಅರ್ಪಿಸಿ, ಗೌರವ ಸಲ್ಲಿಸಿ ಮಾತನಾಡಿದ ಅವರು, ಅರಣ್ಯ ಸಂರಕ್ಷಣೆ ಕಾರ್ಯದಲ್ಲಿ ಹುಲಿ ದಾಳಿ, ಆನೆ ತುಳಿತವನ್ನು ಲೆಕ್ಕಿಸದೆ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುವಾಗ ಹುತಾತ್ಮರಾದವರಿಗೆ ಪ್ರತಿಯೊಬ್ಬರು ಗೌರವ ಸಲ್ಲಿಸಬೇಕು. ಜೊತೆಗೆ ಅವರ ಕರ್ತವ್ಯ ಶ್ರದ್ಧೆ ಸ್ಮರಿಸಬೇಕು ಎಂದು ತಿಳಿಸಿದರು.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಸ್.ಶ್ರೀಪತಿ ಮಾತನಾಡಿ, ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ ಕಾರ್ಯದಲ್ಲಿ ತ್ಯಾಗ, ಬಲಿದಾನಗೈದವರನ್ನು ಸ್ಮರಿಸುವ ಸಲುವಾಗಿ ಅರಣ್ಯ ಹುತಾತ್ಮರ ದಿನವನ್ನು ರಾಷ್ಟ್ರಾದ್ಯಂತ ಆಚರಿಸಲಾಗುತ್ತದೆ. ವೀರಪ್ಪನ್‌ನಿಂದ ಹತರಾದ ಐಎಫ್‌ಎಸ್ ಅಧಿಕಾರಿ ಡಾ.ಪಿ.ಶ್ರೀನಿವಾಸ್ ಅವರ ಸ್ಮರಣಾರ್ಥ ಕರ್ನಾಟಕದಲ್ಲಿ ನ.10ರಂದು ಹುತಾತ್ಮರ ದಿನ ಆಚರಿಸಲಾಗುತ್ತಿತ್ತು. ಜೋಧ್‌ಪುರದ ರಾಜ ಬಿಷ್ಣೋಯಿ ಸಮುದಾಯದ ಜನರಿಗೆ ಕಾಡಿನಲ್ಲಿ ಮರಗಳನ್ನು ಕಡಿಯುವಂತೆ ಆದೇಶಿಸಿದ್ದರೂ ಪರಿಸರ ಪ್ರೇಮಿಗಳಾಗಿದ್ದ ಜನರು ಆದೇಶವನ್ನು ತಿರಸ್ಕರಿಸಿದ್ದರು. ಇದರಿಂದ ಕುಪಿತನಾದ ರಾಜ ಬಿಷ್ಣೋಯಿ ಸಮುದಾಯದ 363 ಜನರನ್ನು ಹತ್ಯೆಗೈದ ಹಿನ್ನೆಲೆ ಸೆ.11ರ ದಿನವನ್ನು ಹುತಾತ್ಮರ ದಿನವನ್ನಾಗಿ ಆಚರಿಸುವಂತೆ ಕೇಂದ್ರ ಸರ್ಕಾರದ ಪರಿಸರ ಇಲಾಖೆ ನಿರ್ದೇಶನ ನೀಡಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ.ಸಭ್ಯಶ್ರೀ, ವನ್ಯಜೀವಿ ಮಂಡಳಿಯ ಮಲ್ಲೇಶಪ್ಪ ಅರಣ್ಯ ಅಧಿಕಾರಿಗಳು ಹುತಾತ್ಮರ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ, ಗೌರವ ನಮನ ಸಲ್ಲಿಸಿದರು. ಇದೇ ವೇಳೆ ಚಾಮರಾಜನಗರ ವನ್ಯಜೀವಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಸುರೇಶ್, ಹುತಾತ್ಮರ ನಾಮವಾಚನ ಮಾಡಿದರು. ಅರಣ್ಯ ರಕ್ಷಕರು ಆಕರ್ಷಕ ಪಥ ಸಂಚಲನ ನಡೆಸಿ, ಗಣ್ಯರಿಗೆ ಗೌರವ ವಂದನೆ ಸಲ್ಲಿಸಿದರು. ಹುತಾತ್ಮರ ಗೌರವಾರ್ಥ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ರಾಷ್ಟ್ರಗೀತೆ ನುಡಿಸಿ, ಎರಡು ನಿಮಿಷ ಮೌನಾಚರಿಸಲಾಯಿತು.

ಅಕ್ರಮವಾಗಿ ಕರುಗಳ ಸಾಗಾಣೆ: ಆರೋಪಿ ಬಂಧನ

ಚಾಮರಾಜನಗರ, ಸೆ.11–ಅಕ್ರಮವಾಗಿ ಗೂಡ್ಸ್ ವಾಹನದಲ್ಲಿ ಕರುಗಳನ್ನು ಸಾಗಿಸುತ್ತಿದ್ದ ಓರ್ವನನ್ನು ಬಂಧಿಸಿರುವ ಪೊಲೀಸರು, 13 ಕರುಗಳನ್ನು ವಶಪಡಿಸಿಕೊಂಡಿದ್ದಾರೆ. ನಾಗೇಶ ಬಂಧಿತ ಆರೋಪಿ. ಈತ ಸೋಮವಾರ ರಾತ್ರಿ ಸುಮಾರು 1.50ರಲ್ಲಿ ಹನೂರು ತಾಲೂಕಿನ ಅಜ್ಜೀಪುರ ಗ್ರಾಮದ ಕಡೆಯಿಂದ ತಮಿಳುನಾಡಿನ ಕಡೆಗೆ ಗೂಡ್ಸ್ ವಾಹನದಲ್ಲಿ ಕರುಗಳನ್ನು ಸಾಗಿಸುತ್ತಿದ್ದ. ಈ ವೇಳೆ ಅಜ್ಜೀಪುರ ಹೊರವಲಯದ ಕಣಿವೆ ಆಂಜನೇಯ ದೇವಸ್ಥಾನ ಜಲಾಶಯದ ಚಾನಲ್ ರಸ್ತೆಯಲ್ಲಿ ದಾಳಿ ನಡೆಸಿದ ರಾಮಾಪುರ ಪೊಲೀಸ್ ಠಾಣೆ ಆರಕ್ಷಕ ಉಪ ನಿರೀಕ್ಷಕ ಎಂ.ಎನ್.ಈಶ್ವರ್ ಹಾಗೂ ಸಿಬ್ಬಂದಿ ಈತನನ್ನು ಬಂಧಿಸಿ, ಕರುಗಳು ಹಾಗೂ ಗೂಡ್ಸ್ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ನಂತರ ಈತನ ವಿರುದ್ಧ ಪ್ರಕರಣ ದಾಖಲಿಸಿ, ನ್ಯಾಯಾಲಯ ವಶಕ್ಕೆ ಒಪ್ಪಿಸಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ: ಮುಳ್ಳಂದಿ ಸಾವು

ಬೇಗೂರು, ಸೆ.11– ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಮರಳಿ ಹಳ್ಳದ ಬಳಿ ಬುಧವಾರ ಅಪರಿಚಿತ ವಾಹನ ಡಿಕ್ಕಿ ಹೊಡೆದು ಮುಳ್ಳಂದಿ ಸಾವನ್ನಪ್ಪಿದೆ.

ಮುಂಜಾನೆ ಅಪರಿಚಿತ ವಾಹನ ಮರಳಿ ಹಳ್ಳದ ಹೆದ್ದಾರಿಯಲ್ಲಿ ಮುಳ್ಳಂದಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಮುಳ್ಳಂದಿ ಮೃತಪಟ್ಟಿದೆ.

ಮ.ಬೆಟ್ಟದ ವಿವಿಧ ಕಾಮಗಾರಿ ಪರಿಶೀಲನೆ



ಮಹದೇಶ್ವರಬೆಟ್ಟದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಯನ್ನು ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ರಘು ಪರಿಶೀಲಿಸಿದರು.

ಹನೂರು, ಸೆ.11–ಮಲೆಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ರಘು ಬುಧವಾರ ಪರಿಶೀಲಿಸಿದರು.

ಇದೇ ವೇಳೆ ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಡೆಯುತ್ತಿರುವ 512 ಕೊಠಡಿಯ ಮೊದಲನೇ ಹಾಗೂ ಎರಡನೇ ಹಂತದ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ತೆಪ್ಪೋತ್ಸವಕ್ಕೆ ಕಾಮಗಾರಿ ಪೂರ್ಣಗೊಳಿಸಿ: ಬೆಟ್ಟದಲ್ಲಿ ನಡೆಯುತ್ತಿರುವ ದೊಡ್ಡಕೆರೆ ಕಾಮಗಾರಿಯಿಂದ ತೆಪ್ಪೋತ್ಸವ ಸ್ಥಗಿತಗೊಂಡಿರುವುದರಿಂದ ಈ ಬಾರಿ ದಸರಾ ವಿಶೇಷ ದಿನಗಳಲ್ಲಿ ತೆಪ್ಪೋತ್ಸವ ನಡೆಸಲು ಕಾಮಗಾರಿ ಪೂರ್ಣಗೊಳಿಸಿ, ತುರ್ತಾಗಿ ಅನುಕೂಲ ಕಲ್ಪಿಸಬೇಕು ಎಂದು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ತಿಳಿಸಿದರು. ಮಹದೇಶ್ವರಬೆಟ್ಟಕ್ಕೆ ಪಾದಯಾತ್ರೆ ಮೂಲಕ ಬರುವ ಭಕ್ತರ ಅನುಕೂಲಕ್ಕಾಗಿ ಮೆಟ್ಟಿಲುಗಳ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಇದೇ ವೇಳೆ ಮನೆಗಳ ಮುಂಭಾಗ ಓಡಾಡಲು ಕಾಂಕ್ರೀಟ್ ರಸ್ತೆ ವ್ಯವಸ್ಥೆ ಕಲ್ಪಿಸುವಂತೆ ಅಕ್ಕಪಕ್ಕದ ನಿವಾಸಿಗಳು ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ರಘು ಅವರಿಗೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ರಘು, ಮೆಟ್ಟಿಲು ಕಾಮಗಾರಿ ಹೊರತುಪಡಿಸಿ ಕಾಂಕ್ರೀಟ್ ರಸ್ತೆ ಮಾಡಬೇಕಾದರೆ ಪ್ರತ್ಯೇಕ ಎಸ್ಟಿಮೆಂಟ್ ಮಾಡಬೇಕಾಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಬೆಟ್ಟದ ದೇವಾಲಯ ಮತ್ತು ಸುತ್ತಮುತ್ತಲಿನ ಭಕ್ತರು ಮಾದಪ್ಪನ ದರ್ಶನ ಪಡೆಯಲು ಫ್ಯೂಲೈನ್ ಕಾಮಗಾರಿಯನ್ನು ಪೂರ್ಣಗೊಳಿಸಲು ಹೆಚ್ಚು ಸಿಬ್ಬಂದಿ ನಿಯೋಜಿಸುವಂತೆ ಗುತ್ತಿಗೆದಾರರು ಮತ್ತು ಅಧಿಕಾರಿಗಳಿಗೆ ತಾಕಿತು ಮಾಡಿದರು.

ಇದೇ ಸಂದರ್ಭದಲ್ಲಿ ಎಇಇ ಚಿನ್ನಣ್ಣ, ಎಇಗಳಾ ಸತೀಶ್, ಸೆಲ್ವ ಗಣಪತಿ, ಸಿಬ್ಬಂದಿ ಉಪಸ್ಥಿತರಿದ್ದರು.

ಚಿನ್ನಾಭರಣ ಕಳವು ಮಾಡಿದ್ದ ಮಹಿಳೆ ಬಂಧನ

● 432 ಗ್ರಾಂ ಚಿನ್ನ ವಶ ● ಎಸ್‌ಪಿ ಡಾ.ಬಿ.ಟಿ.ಕವಿತಾ ಮಾಹಿತಿ



ಕಳವು ಮಾಡಿದ ಮಹಿಳೆಯಿಂದ ವಶಪಡಿಸಿಕೊಂಡ ಚಿನ್ನಾಭರಣ.

ಚಾಮರಾಜನಗರ, ಸೆ.11–ನಗರದ ಸಾರಿಗೆ ಬಸ್ ನಿಲ್ದಾಣದಲ್ಲಿ ಸೆ.1ರಂದು ಪ್ರಯಾಣಿಕರೊಬ್ಬರ ಚಿನ್ನಾಭರಣ ಕಳವು ಮಾಡಿದ್ದ ತಮಿಳುನಾಡು ಮೂಲದ ಮಹಿಳೆಯನ್ನು ಬಂಧಿಸಿ, ಆಕೆಯಿಂದ 432 ಗ್ರಾಂ ಚಿನ್ನ ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ತಿಳಿಸಿದರು.

ನಗರದ ಪಟ್ಟಣ ಪೊಲೀಸ್ ಠಾಣೆಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿನ ತಿರುಪ್ಪೂರ್‌ನ ನಿವಾಸಿ ಲಕ್ಷ್ಮೀ (43) ಬಂಧಿತ ಮಹಿಳೆ. ಈಕೆ ನಗರದ ಸತ್ಯಮಂಗಲ ನಿಲ್ದಾಣದಲ್ಲಿ ಬಸ್ ಹತ್ತುವಾಗ ಚಾಮರಾಜನಗರ ಮೂಲದ ಪುಷ್ಪಾಲತಾ ಅವರ ವ್ಯಾನಿಟಿ ಬ್ಯಾಗ್‌ನಿಂದ 540 ಗ್ರಾಂ ಚಿನ್ನಾಭರಣ ಎಗ್ಗರಿಸಿದ್ದಳು ಎಂದು ಹೇಳಿದರು.

ಕಳ್ಳತನವಾಗಿರುವುದು ಪುಷ್ಪಾಲತಾ ಗಮನಕ್ಕೆ ಬಂದ ಕೂಡಲೇ ಬಸ್‌ನಿಂದ ಇಳಿದು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ತಕ್ಷಣ ಪ್ರಕರಣ ದಾಖಲಿಸಿಕೊಂಡು ಕಾರ್ಯಪ್ರವೃತ್ತರಾದ ಇನ್‌ಸ್ಪೆಕ್ಟರ್ ರಾಜೇಶ್ ಹಾಗೂ ಸಬ್ ಇನ್‌ಸ್ಪೆಕ್ಟರ್ ಸಿದ್ದರಾಜು ನೇತೃತ್ವದ ತಂಡ, ಬಸ್ ನಿಲ್ದಾಣದಲ್ಲಿದ್ದ ಸಿಸಿ ಕ್ಯಾಮರಾ ಪರಿಶೀಲಿಸಿದ್ದಾರೆ. ಈ ವೇಳೆ ಕಳ್ಳತನ ಮಾಡಿದ್ದ ಮಹಿಳೆ ಆಟೋದಲ್ಲಿ ತಾಳವಾಡಿ ಕಡೆಗೆ ಹೋಗಿರುವ ಮಾಹಿತಿ ಆಧರಿಸಿ, ಕಾರ್ಯಾಚರಣೆ ನಡೆಸಿ, ಮಹಿಳೆಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಂತರ ಆಕೆಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ ಎಂದರು. ಬಂಧಿತ ಮಹಿಳೆಯಿಂದ 27 ಲಕ್ಷ ರೂ. ಮೌಲ್ಯದ 432 ಗ್ರಾಂ ಚಿನ್ನಾಭರಣವನ್ನು ಪುಣಜನೂರು ಬಳಿಯ ಕುಂಬಾರಗುಂಡಿಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಡಿವೈಎಸ್‌ಪಿ ಲಕ್ಷ್ಮಣಯ್ಯ, ಇನ್‌ಸ್ಪೆಕ್ಟರ್ ರಾಜೇಶ್ ಹಾಗೂ ಸಿಬ್ಬಂದಿ ಇದ್ದರು.

ಸ್ಫೋಟಕ ವಸ್ತು ಸಾಗಿಸುತ್ತಿದ್ದ ಇಬ್ಬರ ಬಂಧನ

ಚಾಮರಾಜನಗರ, ಸೆ.11– ತಾಲೂಕಿನ ಬೊಮ್ಮನಹಳ್ಳಿ ಗ್ರಾಮದಲ್ಲಿ ಟ್ರ್ಯಾಕ್ಟರ್‌ನಲ್ಲಿ ಸ್ಫೋಟಕ ವಸ್ತುಗಳನ್ನು ಸಾಗಿಸುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಸಿದ್ದರಾಮ ಮತ್ತು ರಾಜ ಬಂಧಿತರು. ಈ ಇಬ್ಬರು ಮಂಗಳವಾರ ಬೆಳಗ್ಗೆ 11 ಗಂಟೆಯಲ್ಲಿ ಜಮೀನಿನಲ್ಲಿ ಕಲ್ಲುಗಳನ್ನು ಬ್ಲಾಸ್ಟ್ ಮಾಡಲು ಅಕ್ರಮವಾಗಿ ಟ್ರ್ಯಾಕ್ಟರ್‌ನಲ್ಲಿ ಸ್ಫೋಟಕ ವಸ್ತುಗಳನ್ನು ಸಾಗಿಸುತ್ತಿದ್ದರು.

ಈ ವೇಳೆ ದಾಳಿ ನಡೆಸಿದ ಸಬ್ ಇನ್ಸ್‌ಪೆಕ್ಟರ್ ಕೆ.ಎಂ.ಮಹೇಶ್ ಹಾಗೂ ಸಿಬ್ಬಂದಿ, ಟ್ರ್ಯಾಕ್ಟರ್ ಪರಿಶೀಲಿಸಿದಾಗ ಟ್ರ್ಯಾಕ್ಟರ್ ಮುಂಭಾಗದ ಬಾಕ್ಸ್‌ನಲ್ಲಿ 49 ಜೆಲ್‌ಸ್ಟಿಕ್‌ಗಳು, 9 ಎಲೆಕ್ಟ್ರಾನಿಕ್ ಡೆಟೋನೆಟರ್‌ಗಳು ಹಾಗೂ 5 ಮೀಟರ್ ಉದ್ದದ ಬತ್ತಿಗಳು ಪತ್ತೆಯಾಗಿವೆ. ನಂತರ ಇಬ್ಬರನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–2496522/23

ಸೈಟ್ ಮಾರಾಟಕ್ಕಿದೆ
ನವನಗರ ಹುಬ್ಬಳ್ಳಿ ಗಾಮನಗಟ್ಟಿ ಕೆ.ಎಚ್.ಬಿ 2ನೇ ಹಂತ ಸಿಂಡಿಕೇಟ್ ರಿವ್ಯೂ ಲೇಔಟ್ 30x50 ಸೈಟ್ ಮಾರಾಟಕ್ಕಿದೆ
8197259612
9060010004

URGENTLY REQUIRED
Two Sales Boys
Two Sales Girls
at Mysore City
9620554228

SITE FOR SALE
SITE NO. N. S.9, HIG, GROUP III, PHASE II, K.H.B. (HOOTGALLI) MYSORE, BEHIND JC HOSTEL, NEAR GANAPATHI TEMPLE, 66x40 size. WEST FACE.
(OWNER) 7710068901

NEW FLAT FOR RENT
Prakruthi Prem Apartment
Near Aishwarya Petrol Bunk.
Contact: 9448108048
Brokers Excuse

FOR RENT
20000 Sqft. Warehouse in Mysore Prime Location, Ideal for Storage/ Industrial Use.
9740581896

WANTED
Project Coordinator
Min 5 Year Experience in Real Estate and Constructin
Drivers Min-5 Years Experience in premium / automatic Vehicles
9606436007

ಶ್ರೀ ಗೌರೀಶಂಕರ ಟ್ರಾವೆಲ್ಸ್
16–10–24 (7 ದಿನ): ದೆಹಲಿ, ಆಗ್ರಾ, ಅಯೋಧ್ಯೆ, ಪ್ರಯಾಗ್‌ರಾಜ್, ಗಯಾ, ಕಾಶಿ.
24–11–24 (11 ದಿನ): ಶ್ರೀನಗರ, ಗುಲ್‌ಮಾರ್ಗ್, ಸೋನಮಾರ್ಗ್, ವೈಷ್ಣೋದೇವಿ, ಜಮ್ಮು, ಅಮೃತ್‌ಸರ್, ದೆಹಲಿ.
12–12–24 (9 ದಿನ): ಉಜ್ಜಯಿನಿ, ಓಂಕಾರೇಶ್ವರ, ನಾಗೇಶ್ವರ, ಸೋಮನಾಥ್, ಅಹಮದಾಬಾದ್, ವಡೋದರ, ಪೋರ್‌ಬಂದರ್ ಇತ್ಯಾದಿ.
(ವಿಮಾನ, ಬಸ್, ಊಟ, ರೂಂ)
Mob: 9620002114

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ ಮಹಿಳೆಯರು ಬೇಕಾಗಿದ್ದಾರೆ. ಇಚ್ಚೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಶಿಷ್ಯರಣಿ ಸ್ಕೂಲ್ ಪಕ್ಕ, ಹೆಬ್ಬಾಳ್
9916520111

ಬೇಕಾಗಿದ್ದಾರೆ
ಹೌಸ್ ಕೀಪಿಂಗ್ (ಹುಡುಗ / ಪುರುಷ) 25 ರಿಂದ 45 ವರ್ಷ, ನವೋದಯ ಶಾಲೆ, ಬೆಸಗರಹಳ್ಳಿ, ಮದ್ದೂರು, ಮಂಡ್ಯ. ಸೆಕ್ಯೂರಿಟಿ ಗಾರ್ಡ್ (25 ರಿಂದ 50 ವರ್ಷ) ಮೈಸೂರು ಸುತ್ತಮುತ್ತ, ಕೃಷಿ ಕಾರ್ಮಿಕ ಸಂಸಾರ, ಕುಪ್ಪೆ ಹತ್ತಿರ, ತೋಟ ನೋಡಿಕೊಳ್ಳಲು, ಮನೆ / ಇತರ ಸೌಲಭ್ಯವಿದೆ,
9900749104
9972837203

ಸೈಟ್ ಫಾರ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, 28.5 x 40, ಮುಡಾ ಖಾತೆ, 36 ಲಕ್ಷ, ಡೈರೆಕ್ಟ್ ಓನರ್.
Mob: 9342123373

ಸಂಪರ್ಕಿಸಿ
ಮಳೆಗಾಲದಲ್ಲಿ ಬರುವ ಮನೆ ಕಟ್ಟಡ ಸೋರುವಿಕೆಗೆ ಮಳೆಗಾಲದಲ್ಲೇ ಪರಿಹಾರ
ಸಂಪರ್ಕಿಸಿ: 7676094203

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

FOR SALE
1. Properties at Kuvempu Nagar Starting @ 45L
2. 20x30 Site @Vijaya Nagar 4th stg
3. 14x100 Old Hs @ Ramavilas Rd
4. Old Hs @ Krishnamurthy Puram
5. Properties For Sale at Vidyaranyapuram
6. 20x30 Site Near SBM Lyt, Bogadhi
7. Ready to Move Apartments @ Hebbal
8. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

REUIRED IMMEDIATELY
DRIVERS
SALESMEN
MYSORE & BANGALORE
9141835175
6366610175
careersmysuru@gmail.com

WANTED SITE
@ Ananda Sagara, Nithyananda Sagar, Vijayanagara, Nagawala, Yelwala & Mysore (Surrounding)
QUICK Regn.
9342125252

MUDA SITE FOR SALE
Vijayanagar 4th Stage 2nd Phase
Site No. 11759
1.45 Cr (Negotiable)
9342113036

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
7411565140, 7892046990

ಬಸವ ಮಾರ್ಗ ಫೌಂಡೇಶನ್
42ನೇ ಉಚಿತ ಕುಡಿತ ಬಿಡಿಸುವ ಶಿಬಿರ.
ದಿನಾಂಕ: 12–09–24 ರಿಂದ 22–09–24 ರವರೆಗೆ
8803344999
9742919191

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
GSSS ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್ ವೈಸರ್ ಹಾಗೂ ಮಹಿಳಾ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ESI ಮತ್ತು PF ಗಳೊಂದಿಗೆ ಆಕರ್ಷಕ ವೇತನ ವಿರುತ್ತದೆ. ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ
ಹಾರ್ಡ್‌ಕೂರ್ ಸೆಕ್ಯೂರಿಟಿಸ್
9341169166

ಬೇಕಾಗಿದ್ದಾರೆ
ಮಾರ್ಕೆಟಿಂಗ್ ಫೀಲ್ಡ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ 10,000 ರಿಂದ 30,000 ವರೆಗೆ ಮೈಸೂರಿನವರಿಗೆ ಮೊದಲ ಆದ್ಯತೆ. (ದ್ವಿಚಕ್ರ ವಾಹನ ಹೊಂದಿರಬೇಕು)
9972128918

30x40 ಸೈಟ್
ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ
40x60 ಸೈಟ್ ಆದಿತ್ಯ ಸರ್ಕಲ್ ಹತ್ತಿರ
20x30 ಮನೆ 50 ಲಕ್ಷ ದಟ್ಟಗಳ್ಳಿ
ಹಳೆ ಮನೆ ಹೊಸ ಮನೆ ಸೈಟ್ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
9945042875

ಎಂ.ಎಸ್.ನಾರಾಯಣ ಸ್ವೀಟ್ಸ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಅನುಭವವುಳ್ಳ ಸೇಲ್ಸ್ ಮ್ಯಾನ್‌ಗಳು. ಅನುಭವುಳ್ಳ ಡ್ರೈವರ್‌ಗಳು ಸೂಪರ್‌ವೈಸರ್‌ಗಳು ಮತ್ತು ಕ್ಯಾಶಿಯರ್‌ಗಳು ಕ್ಲೀನಿಂಗ್ ಲೇಡಿಸ್‌ಗಳು ಬೇಕಾಗಿದ್ದಾರೆ. ವಿಳಾಸ: ಕುವೆಂಪುನಗರ ಉದಯರವಿ ರೋಡ್ ರಾಯಲ್ ಎನ್ಫೀಲ್ಡ್ ಶೋರೂಮ್ ಎದುರು
ಈ ಕೂಡಲೇ ಕೆಳಕಂಡ ನಂಬರಿಗೆ ಕರೆ ಮಾಡಿ
7090700199,7090700166

ಮಹಾ ಮಾಂತ್ರಿಕ
ಕೇರಳ ಶ್ರೀ ಆದಿಶಕ್ತಿ ಜ್ಯೋತಿಷ್ಯರು ಪಂಡಿತ್ ಎಸ್.ಶಿವಪ್ರಸಾದ್ ತಂತ್ರಿ
ಮೊ: 9686525894
ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟು ಕಠಿಣ ವಾಗಿರಲೀ ಕೇವಲ 3 ದಿನಗಳಲ್ಲಿ 100 ಕ್ಕೆ 100% ಪ್ರೀತಿ ಪ್ರೇಮದಲ್ಲಿ ನಂಬಿ ಮೋಸ ಹೋಗಿದ್ದರೆ ಗಂಡ ಹೆಂಡತಿ ಜಗಳ ವಿಚ್ಛೇದನಾ ಸಮಸ್ಯೆ ಶತ್ರುಗಳ ನಾಶ ಮದುವೆ ಅಡಚಣೆ ಸಂತಾನ ಇನ್ನೂ ಯಾವುದೇ ಕಠಿಣ ಗುಪ್ತ ಸಮಸ್ಯೆ ಗಳಿದ್ದರೂ 100% ಪರಿಹಾರ ಮಾಡಿಕೊಡುತ್ತಾರೆ ಖಾಯಂ ಮನೆ ವಿಳಾಸ: ಎಲ್.ಐ.ಜಿ. 101 ಬ್ಯಾಂಕ್ ಆಫ್ ಬರೋಡ ಎದುರು, ಪಂಚ ಮಂತ್ರ ರಸ್ತೆ, ಕುವೆಂಪುನಗರ ಮೈಸೂರು

ಸೈಟ್ ಬೇಕಾಗಿದೆ
30x40 ಅಳತೆಯ ಉತ್ತರ ಹಾಗೂ ಪೂರ್ವ ದಿಕ್ಕಿಗೆ ವಸಂತನಗರ, ಲಲಿತಾದ್ರಿಪುರ (ದಕ್ಷಿಣ) ಶಾಂತವೇರಿ ಗೋಪಾಲಗೌಡ, ಮಧ್ಯವರ್ತಿಗಳಿಗೆ ಅವಕಾಶ ವಿಲ್ಲ
9880859168
9591913785

WANTED
Hindi teaching staff with fluency in English for reputed institution.
Send your resume through WhatsApp/Message
Contact No.
8971577685, 9980631121

ತಕ್ಷಣ ಬೇಕಾಗಿದ್ದಾರೆ
TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ: 17500/- (26 Days)
ESI ಮತ್ತು PF ಊಟ ತಿಂಡಿ ವಸತಿ ಸೌಲಭ್ಯ ಇರುತ್ತದೆ.
9620777819
9620667819

ಮನೆ ಭೋಗ್ಯಕ್ಕೆ/ಮಾರಾಟಕ್ಕಿದೆ
40x12, S/F, G/F Single Bed Room 1st & 2nd 2BHK with Car Parking ಶಾರದದೇವಿನಗರ ಅಂಗನವಾಡಿ ಎದುರು (ರವಿಶಂಕರ:)
9901264655

ಸೈಟು ಮಾರಾಟಕ್ಕಿದೆ
30x40 S/F, good location. ಸುವರ್ಣನಗರ (ದೀಪಾ ಸೊಸೈಟಿ), ಬೋಗಾದಿ, ಮೈಸೂರು.
9742421313, 9945779947

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಕ್ಯಾಷಿಯರ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು.
Mob: 6364748485

ಹನ್ಸಿಕ ಗೌಡ ಪ್ರಾಪರ್ಟೀಸ್, ಹಿನಕಲ್
1) ಭೂಮಿಕ ಕೃತಿಷ್ಣ ಬಡಾವಣೆ 41x40 S/W Corner, 30 ಲಕ್ಷ. (2) ಸನ್‌ಸಿಟಿ ಹೋಮ್ 32x40 S/F, 16 ಲಕ್ಷ. (3) ರಾಜರಾಜೇಶ್ವರಿ ಬಡಾವಣೆ 30x40 S/F, 28 ಲಕ್ಷ. (4) ಕುಬೇರಾನಂದ ಸಾಗರ 30x40 N/F, 22 ಲಕ್ಷ. ಇಲವಾಲ ಸುತ್ತ ಮುತ್ತ ಬಡಾವಣೆಯಲ್ಲಿ ನಿವೇಶನ ಮಾರಾಟಕ್ಕೆ ಇದೆ.
Mob: 8553540950

30x40 Site Wanted in North or East, Vijayanagar 3rd Stage or Nearby.
9341607527, 9036026741

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 35 ವರ್ಷ. ವಿದ್ಯಾರ್ಹತೆ: 7 ರಿಂದ ಪಿಯುಸಿ ಮತ್ತು ಐಟಿಐ. ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
Mob: 9480404036

ಬೇಕಾಗಿದ್ದಾರೆ
ಗಣಪತಿ ಸಚ್ಚಿದಾನಂದ ಆಶ್ರಮ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
9620667819
9620777819

ತಕ್ಷಣ ಬೇಕಾಗಿದ್ದಾರೆ
ರಾಣೆ ಮದ್ರಾಸ್ L&Tಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು
ಸಂಬಳ: 19000/-
ESI ಮತ್ತು PF ಊಟ ತಿಂಡಿ ಸೌಲಭ್ಯ ಇರುತ್ತದೆ.
9880727819
9620667819

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

28x40 S/W ಕಾರ್ನರ್
DTCP 'A' ಖಾತೆ (Rera Approved)
ಸೈಟು ಮಾರಾಟಕ್ಕಿದೆ
15 ಲಕ್ಷದ 50 ಸಾವಿರಗಳು
GSS ಲೇಔಟ್ TVS ಫ್ಯಾಕ್ಟರಿ ಹತ್ತಿರ, ಮೈಸೂರು
9972557534

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ, ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನೀಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

AFFIDAVIT
I, Mohammed Zubair D.N. (Expansion of D.N. is Dilnawaz Nasir), residing at #770, Near Billal Masjid Zissa Bazaar, 3rd Cross, Udayagiri, Mysore-570 019, declare that, my correct name is Mohammed Zubair D.N. only. My family members, relatives and friends used to call me as Mohammed Zubair D.N. only. However, at time of obtaning passport, due to over sight, my name was got entered as Mohammed Zubair. The names Mohammed Zubair D.N. and Mohammed Zubair, is one and the same person belong to me only. I declare this in front of Notary Syed Ameer on 17-8-2024.
Sd/- Mohammed Zubair D.N.

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ, ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ, ಡಿಪ್ಲೋಮಾ (ಸಿ.ಪಿ)/ಬಿ.ಕಾಂ ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ.
8073393505

INDUSTRIAL SHED FOR RENT
2700 SQFT (NEW)
3000 SQFT. 15 KMS FROM MYSORE PALACE
KADKOLA INDUSTRIAL AREA, NANJANGUDU
9900377786
9844478643

WANTED
Telecallers
Marketing Manager
TV Anchors
PigMe Collection Boy
Office Assistant
9980959598

CHANGE OF NAME
I, GEETHA, W/o Srinivasachari, Residing at Door No 310, 4th Cross, Mahadeshwara School, Mahadeshwara Layout, Kumbarakoppalu, Metagalli Post, Mysuru-570116. have changed my name as GEETHA to GEETHASRI vide affidavit sworn before Notary Smt. C. MANGALA, Mysore Dated 22-08-2024.

WANTED
Telecallers
Female - 15 Nos.
Male - 10 Nos.
S H Meghana (H R)
Mob: 7829803426

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಹುಣಸೂರು ಟೌನ್, ಶಬ್ಬೀರ್ ನಗರ, ಮನೆ ನಂ. 108ರಲ್ಲಿ ವಾಸವಾಗಿರುವ ಮುಹೀನ್ ಪಾಷ ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನಗೆ ಸೇರಿದ ಆಧಾರ್ ಕಾರ್ಡ್, ರೇಷನ್‌ಕಾರ್ಡ್, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಖಾತಾ ಪುಸ್ತಕದಲ್ಲಿ ನನ್ನ ಹೆಸರು ಮುಹೀನ್ ಪಾಷ (Muheen Pasha) ಎಂದು ನಮೂದಾಗಿರುತ್ತದೆ. ಆದರೆ ನನ್ನ ಪಾನ್ ಕಾರ್ಡ್ ನಂ. CGPPP1491R ನಲ್ಲಿ ನನ್ನ ಹೆಸರು (Moheen Pasha) ಮೊಹೀನ್ ಪಾಷ ಎಂದು ನಮೂದಾಗಿರುತ್ತದೆ ಹಾಗೂ ಡಿಎಲ್ ನಂ. KA452004000672 ರಲ್ಲಿ (Mohim Pasha) ಎಂದು ನಮೂದಾಗಿರುತ್ತದೆ. ಸದರಿ ಮೂರು ಹೆಸರುಗಳು ನನ್ನವೇ ಆಗಿರುತ್ತದೆ ಎಂದು ನೋಟರಿ ಶ್ರೀ. ದಿನೇಶ್ ರವರ ಮುಂದೆ ದಿನಾಂಕ 9–9–2024ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಮುಹೀನ್ ಪಾಷ

ಬೇಕಾಗಿದ್ದಾರೆ
ಶ್ರೀ ಲಕ್ಷ್ಮಿ ಮೆಟಲ್ ಸ್ಟೋರ್ ಹೋಂ ಅಪ್ಲೆಯನ್ಸಸ್‌ಗೆ ಸೇಲ್ಸ್ ಮ್ಯಾನೇಜರ್ ಹಾಗೂ ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ. ಹುಣಸೂರು ರಸ್ತೆ, ಹಿನಕಲ್, ಮೈಸೂರು
Mob: 934218940

ಬೇಕಾಗಿದ್ದಾರೆ
1) ವಿದ್ಯಾವಂತ ಸೆಕ್ಯೂರಿಟಿ ಗಾರ್ಡುಗಳು ಸ್ಥಳ: ಹೆಬ್ಬಾಳ್, ಕುವೆಂಪುನಗರ, ಮೈಸೂರು ಸಿಟಿ ಸುತ್ತಮುತ್ತ
2) ಫೀಲ್ಡ್ ಸೂಪರ್‌ವೈಸರ್ ಸೆಕ್ಯೂರಿಟಿ ಅನುಭವವಿರಬೇಕು.
9686422400
9242406261

ಬೇಕಾಗಿದ್ದಾರೆ
ಶ್ರೀ ಸಾಯಿ ಬೆಸ್ಟ್ ಫ್ಯೂಚರ್ ಫೌಂಡೇಶನ್ (ರಿ.)
ರಾಜ್‌ಕುಮಾರ್ ರಸ್ತೆ, ಮೈಸೂರು
1) ಕೋ–ಆರ್ಡಿನೇಟರ್, ವಿದ್ಯಾರ್ಹತೆ Any Degree
2) ಸ್ಟಾಫ್ ನರ್ಸ್– ವಿದ್ಯಾರ್ಹತೆ GNM
3) ಅಡುಗೆ ಮಾಡಲು PGಯಲ್ಲಿ ಅಡುಗೆ ಮಾಡಿದ ಅನುಭವ ಇರಬೇಕು.
9964123819

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)
9886654463

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ., ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಪಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮನೆ ಭೋಗ್ಯಕ್ಕಿದೆ
30x40, ಪೂರ್ವ ದಿಕ್ಕು, ಗ್ರೌಂಡ್ ಫ್ಲೋರ್, 2 ಬೆಡ್ ರೂಂ ಮನೆ, ಎಲ್ಲಾ ಆಧುನಿಕ ಸೌಲಭ್ಯಗಳೊಂದಿಗೆ, ವಿಜಯ ನಗರ 4ನೇ ಹಂತ, 1ನೇ ಘಟ್ಟ, ಮೈಸೂರು, ಇಲ್ಲಿ ಭೋಗ್ಯಕ್ಕಿದೆ.
Mob: 9480347407

ಬೇಕಾಗಿದ್ದಾರೆ
ಫಾಸ್ಟ್‌ಫುಡ್ ಆಪೆ ಆಟೋದಲ್ಲಿ ಅಡುಗೆ ಮಾಡಲು ಅಡುಗೆ ಭಟ್ಟರು ಬೇಕಾಗಿದ್ದಾರೆ.
9164314560

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ ಮನೆ ನಂ.172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್ ರೂಂ, ಹಾಲ್, ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ, ಸೋಲಾರ್, ಗೀಸರ್, ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

SITE FOR SALE
30x50 E/F
Silver Springs, Bogadi Road.
Mob: 8050821108

ಸೈಟುಗಳು ಮಾರಾಟಕ್ಕಿವೆ
ನಂಜನಗೂಡು ಮತ್ತು ಗುಂಡ್ಲುಪೇಟೆಯಲ್ಲಿ ಬ್ಯಾಂಕ್ ಸಾಲ ಸೌಲಭ್ಯಗಳೊಂದಿಗೆ ವಿವಿಧ ಅಳತೆಯ ನಿವೇಶನಗಳು ಮಾರಾಟಕ್ಕಿವೆ. ಕೂಡಲೇ ಸಂಪರ್ಕಿಸಿ:
9620925277, 9110444090

ಜಮೀನು ಮಾರಾಟಕ್ಕಿದೆ
ಹುಣಸೂರು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಬಿಳಿಗೆರೆ ಸನ್‌ಸಿಟಿ ಲೇಔಟ್‌ನ ಬಳಿ 30 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
6360633036

ಸೈಟುಗಳು ಮಾರಾಟಕ್ಕಿವೆ
ಭೋಗಾದಿ ಮುಖ್ಯ ರಸ್ತೆ ಹತ್ತಿರವಿರುವ ಮನೆ ಕಟ್ಟಲು ಸಿದ್ಧವಿರುವ 30x40 ಹಾಗೂ 30x50 ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
6360633036

SITES FOR SALE
30x40 East facing Railway layout attached to SBM layout
30x40 Manipal Hospital
30x40 Bairava Enclave
30x40 Vishwaprajna Halekesare
8884616461, 80733 00783

WANTED MALE SECURITY GUARDS
Qualification : SSLC above
Age: 22 Years to 50 Years,
Salary: 19000/-, Benefits: ESI, EPF, Bonus, Weeklyoff, ETC
Location: Hebbal Industries Area
9538014456
9008794218
PRIVATE EYE PRIVATE LTD
HOOTAGALLI MYSORE-570018

SITE FOR SALE
30X65, South Facing Police Layout, 3rd Stage
Just 300 Mtrs from Ring Road
9886852149

ಬೇಕಾಗಿದ್ದಾರೆ
ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಲು ಅನುಭವುಳ್ಳ ಟೈಲರ್‌ಗಳು ಬೇಕಾಗಿದ್ದಾರೆ
9845488969
9945772749

ವಧು–ವರರಿಗೆ ಸಂಪರ್ಕಿಸಿ
ಒಕ್ಕಲಿಗ, ಕುರುಬ ಲಿಂಗಾಯತ, ನಾಯಕ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು ವಿಧವಾ–ವಿಧವೆಯರು ಸಂಪರ್ಕಿಸಿ:
9980273659
9731066259

FRONT OFFICE MANAGER / RECEPTIONIST and Room Boys Required for a HOTEL (Lodge)
Hotel Dewans Residency
Dewans Road (Opp. Hotel Srinagar)
Devaraja Mohalla, Mysore
6362134879

ಬಾದಾಮಿ, ಗೋಡಂಬಿ, ಪಿಸ್ತಾ ಒಣದ್ರಾಕ್ಷಿ, ಖರ್ಜೂರ, ಅಂಜೂರ ಡ್ರೈಫ್ರೂಟ್ಸ್ ಗಿಫ್ಟ್ ಬಾಕ್ಸ್ ದೊರೆಯುತ್ತದೆ.
5 ಕಿ.ಮೀ ವರೆಗೂ ಉಚಿತ ಡೆಲಿವರಿ ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್ಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

PARTNER WANTED
ಅತ್ಯುತ್ತಮವಾಗಿ ನಡೆಯುತ್ತಿರುವ ಡೆಂಟಲ್ ಕ್ಲಿನಿಕ್ ದಿನ 12,000 ರಿಂದ 15,000 ಸಾವಿರ ಬಿಜಿನೆಸ್ ಇದೆ 2ನೇ ಬ್ರಾಂಚ್ ತೆಗೆಯಲು ಇನ್‌ವೆಸ್ಟ್‌ಮೆಂಟ್ ಅಥವಾ ಪಾರ್ಟ್‌ನರ್ ಬೇಕಾಗಿದ್ದಾರೆ
9741098837

ವರ ಬೇಕಾಗಿದೆ
ಬ್ರಾಹ್ಮಣ ವಧು–ವಯಸ್ಸು27, SSLC ಕಲಿತಿರುವ/(ವಿಶ್ವಕರ್ಮ), ವಯಸ್ಸು 29, SSLC, (GSB, RSB, ಕೊಂಕಣಿ), ವಯಸ್ಸು 30, PUC (ಒಕ್ಕಲಿಗ ಗೌಡ), ವಯಸ್ಸು 28, SSLC /ಬ್ರಾಹ್ಮಣ ವಯಸ್ಸು 33, PUC ಕಲಿತಿರುವ ವಧುವಿಗೆ ವರ ಬೇಕಾಗಿದೆ. ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧುವರರಿಗಾಗಿ ಸಂಪರ್ಕಿಸಿ. ಮ್ಯಾರೇಜ್ ಬ್ಯೂರೋ
9880685177

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: 15,000/–
7899754149

ಸಲಹೆಗಾರರು
ನಾಗೇಶ್ ಎಂ ಮುಗದೂರ್ ಆದ ನಾನು ಕಾನೂನು ಪದವೀಧರನಾಗಿದ್ದು ಕೇಂದ್ರ ಸರ್ಕಾರದ ವಿವಿಧ ಇಲಾಖೆ ಮತ್ತು ವಿವಿಧ ಎ ಶ್ರೇಣಿ (Group A) ಹುದ್ದೆಗಳಲ್ಲಿ 38 ವರ್ಷ ಆಡಳಿತ ನಿರ್ವಹಣೆ ಮತ್ತು ಮಾನವ ಸಂಪನ್ಮೂಲ ನಿರ್ವಹಣೆಯ ಬಗ್ಗೆ ನುರಿತ ಅನುಭವ ಹೊಂದಿರುತ್ತೇನೆ. ನೌಕರರ ಶಿಸ್ತಿನ ಮನವಿಗಳ ಮತ್ತು ಕೇಂದ್ರಿಯ ಆಡಳಿತ ನ್ಯಾಯ ಮಂಡಳಿಯ (Disciplinary and CAT etc Cases) ಪ್ರಕರಣಗಳಿಗೆ ಸಲಹೆಗಳು ಬೇಕಾದಲ್ಲಿ ಸಂಬಂಧಿತ ನೌಕರರು ಮತ್ತು ಇಲಾಖೆಗಳು ಸಂಪರ್ಕಿಸಬಹುದು.
9243505777

ಶ್ರೀ ಭದ್ರಕಾಳಿ ಜ್ಯೋತಿಷ್ಯಾಲಯ ಕೊಳ್ಳೇಗಾಲ
ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿದ್ದರು ಕೊಳ್ಳೇಗಾಲದ ಚೌಡಿ ದಿಗ್ಬಂದನ ಪ್ರಯೋಗ ನೀವು ಯಾರೊಂದಿಗೂ ಹಂಚಿಕೊಳ್ಳಲಾಗದ ಗುಪ್ತ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಮತ್ತು ಮಾರ್ಗದರ್ಶನ ಸೂಚಿಸುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಪಂಡಿತ್ ಶ್ರೀ ಗುಡ್ಡಪ್ಪ
9686229089
ಫೋನಿನಲ್ಲಿ ಉಚಿತ ಭವಿಷ್ಯ ತಿಳಿಸುತ್ತಾರೆ

SITE FOR SALE
Bank Loan Available
20x30, 30x40
Srirampura Ring Road, Mysore
8050345574

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಸೆ.23ರಂದು

ಮಾದಿಗ ಸಮುದಾಯದಿಂದ ಬೃಹತ್ ಪ್ರತಿಭಟನೆ

ತಿ.ನರಸೀಪುರ, ಸೆ.11– ಸುಪ್ರೀಂ ಕೋರ್ಟ್ ನೀಡಿರುವ ಆದೇಶದಂತೆ ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ಜಾರಿ ಮಾಡುವಂತೆ ಒತ್ತಾಯಿಸಿ ಪಟ್ಟಣದಲ್ಲಿ ಸೆ.23ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ತಾಲೂಕು ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್ ಹೇಳಿದರು.

ಪ್ರತಿಭಟನೆ ಹಮ್ಮಿಕೊಳ್ಳುವ ಸಂಬಂಧ ಪಟ್ಟಣದಲ್ಲಿ ಕರೆಯಲಾಗಿದ್ದ ಮಾದಿಗ ಸಂಘಟನೆಯ ಮುಖ್ಯಸ್ಥರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾದಿಗ ಸಮುದಾಯಕ್ಕೆ ಪ್ರತ್ಯೇಕ ಮೀಸಲಾತಿ ನೀಡಬೇಕೆಂದು ಸದಾಶಿವ ಆಯೋಗದ ವರದಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದ್ದರೂ ರಾಜ್ಯ ಸರ್ಕಾರ ವರದಿ ಜಾರಿ ಮಾಡಲು ಮೀನಾಮೇಷ ಎಣಿಸುತ್ತಿದೆ. ಹಾಗಾಗಿ ಹೋರಾಟ ಅನಿವಾರ್ಯವಾಗಿದ್ದು ಸೆ23ರಂದು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ತಿರುಮಕೂಡಲಿನ ಕಪಿಲಾ ಸೇತುವೆಯಿಂದ ತಮಟೆ ಚಳುವಳಿ ಮೂಲಕ ಮೆರವಣಿಗೆ ಸಾಗಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ಸಂಘಟನೆ ತೀರ್ಮಾನಿಸಿದೆ ಎಂದರು.


ತಿ.ನರಸೀಪುರ ಪಟ್ಟಣದಲ್ಲಿ ಮಾದಿಗ ಸಂಘಟನೆಯ ಮುಖ್ಯಸ್ಥರು ಪೂರ್ವಭಾವಿ ಸಭೆ ನಡೆಸಿದರು.

ಇಡೀ ರಾಜ್ಯಾದ್ಯಂತ ಉತ್ತರ ಹಾಗೂ ದಕ್ಷಿಣ ಕರ್ನಾಟಕ ಸೇರಿದಂತೆ ಎಲ್ಲ ಮಾದಿಗ ಸಂಘಟನೆ ಹೋರಾಟ ಮಾಡಿದ್ದರ ಫಲವಾಗಿ ಆ.1 ರಂದು 6 ಜನರಿದ್ದ ಸುಪ್ರೀಂ ಕೋರ್ಟ್ ಪೀಠ ಇದನ್ನು ಒಳ ಮೀಸಲಾತಿಯಲ್ಲಿ ಎಬಿಸಿಡಿ ಎಂದು ವರ್ಗೀಕರಣ ಮಾಡಿ ಹಿಂದುಳಿದ ಸಮುದಾಯಗಳಿಗೆ ಶೇಕಡಾವಾರು ಆಧಾರದಲ್ಲಿ ಮೀಸಲಾತಿ ಇಂತಿಷ್ಟು ಎಂದು ಹಂಚಿಕೆ ಮಾಡಿತ್ತು. ಅಂತೆಯೇ ಮಾದಿಗ ಮತ್ತು ಮಾದಿಗ ಸಂಬಂಧಿತ ಜಾತಿಗಳಿಗೆ ಶೇ.6 ರಷ್ಟು ಮೀಸಲಾತಿಯನ್ನು ಸುಪ್ರೀಂಕೋರ್ಟ್ ಆದೇಶದ ಮೇಲೆ ನೀಡಿತ್ತು ಆದೇಶವನ್ನು ಅನುಷ್ಠಾನ ಮಾಡುವ ಅಧಿಕಾರವನ್ನು ಆಯಾಯ ರಾಜ್ಯ ಸರ್ಕಾರಗಳ ನಿರ್ಧಾರಕ್ಕೆ ಬಿಡಲಾಗಿತ್ತು.ಆದೇಶ ಹೊರಬಿದ್ದ ಕೆಲವೇ ಗಂಟೆಗಳಲ್ಲಿ ನೆರೆಯ ತೆಲಂಗಾಣ ಸರ್ಕಾರದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಸಚಿವ ಸಂಪುಟ ಸಭೆ ಕರೆದು ಒಳ ಮೀಸಲಾತಿ ಜಾರಿ ಮಾಡಿ ಆದೇಶ ಹೊರಡಿಸಿತು.

ಅದೇ ರೀತಿ ನಮ್ಮ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ವರದಿ ಜಾರಿ ಮಾಡುತ್ತಾರೆಂಬ ಭರವಸೆ ಇತ್ತಾದರೂ ಒಂದೂವರೆ ತಿಂಗಳಾದರೂ ಆದೇಶ ಜಾರಿ ಮಾಡುವ ಬಗ್ಗೆ ಯಾವುದೇ ಭರವಸೆಯಾಗಲೀ ಹೇಳಿಕೆಯಾಗಲಿ ನೀಡಿಲ್ಲ, ಅವರು ಯಾವ ಕಾರಣಕ್ಕೆ ವರದಿ ಜಾರಿ ಮಾಡಲು ಹಿಂದೇಟು ಹಾಕುತ್ತಿದ್ದಾರೋ ತಿಳಿದಿಲ್ಲ. ನಮ್ಮ ಮಾದಿಗ ಸಮುದಾಯದವರು ಸಿದ್ದರಾಮಯ್ಯರನ್ನು ಸತತವಾಗಿ ಬೆಂಬಲಿಸುತ್ತಾ ಬಂದಿದ್ದೇವೆ. ಆದರೂ ನಮ್ಮ ಮಾದಿಗರ ಹಿತ ಕಾಯಬೇಕಾದ ಮುಖ್ಯಮಂತ್ರಿಗಳು ಆದೇಶ ಜಾರಿ ವಿಷಯದಲ್ಲಿ ಮೌನ ವಹಿಸಿದ್ದಾರೆ. ಸರ್ಕಾರ ಬೇಡಿಕೆ ಈಡೇರಿಸುತ್ತದೆಂಬ ಭರವಸೆಯನ್ನು ನಾವು ಕಳೆದುಕೊಂಡಿದ್ದೇವೆ ಎಂದರು,

ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷ ಮೂಗೂರು ಬಲ್ಲಯ್ಯ ಮಾತನಾಡಿ, ಹಾಗಾಗಿ ನಮಗೆ ಈಗ ಮತ್ತೆ ಹೋರಾಟ ಅನಿವಾರ್ಯವಾಗಿದ್ದು ತಾಲೂಕು ಮಾದಿಗ ಸಮುದಾಯ, ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘ, ದಲಿತ ಸಂಘರ್ಷ ಸಮಿತಿ, ಚುನಾಯಿತ ಪ್ರತಿನಿಧಿಗಳೆಲ್ಲರ ಸಹಕಾರದೊಂದಿಗೆ ಸೆ.23 ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಅವರು ಮನವಿ ಮಾಡಿದರು.

ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ವಾಟಾಳು ಜಿ.ಎನ್.ಪುಟ್ಟಸ್ವಾಮಿ, ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷ ಮೂಗೂರು ಬಲ್ಲಯ್ಯ ಆಲದಮರದ ಬ್ರಹ್ಮಜ್ಞಾನಿ ಆಶ್ರಮ ಟ್ರಸ್ಟ್‌ನ ಕಾರ್ಯದರ್ಶಿ ಎಚ್. ನಾಗರಾಜು, ಗ್ರಾಪಂ ಸದಸ್ಯ ಕೇತಹಳ್ಳಿ ರೇವಣ್ಣ, ಶಿವಪ್ರಸಾದ್, ನಿರ್ದೇಶಕರಾದ ಬೈರಾಪುರ ಮಹದೇವ್, ಬ್ಯಾಂಕ್ ವೆಂಕಟೇಶ್, ನರೀಪುರ ರಾಚಪ್ಪ, ಮಾಜಿ ಅಧ್ಯಕ್ಷ ಕೇತಹಳ್ಳಿ ನಿಂಗರಾಜು, ರೇವಣ್ಣ, ವಿಜಯಪುರ ಸಿದ್ದರಾಜು, ಹ್ಯಾಕನೂರು ಬಸವರಾಜು, ಮಾಕನಹಳ್ಳಿ ರಾಜಣ್ಣ, ಗೋಪಾಲಪುರ ಯಜಮಾನ ರಾಚಪ್ಪ, ಹೊಸೂರು ಸಿದ್ದರಾಜು, ಮರಿಸ್ವಾಮಿ, ಬ್ಯಾಂಕ್ ಲಿಂಗರಾಜು, ಬೈರಾಪುರ ರಜನೀರಾಜ್, ಗ್ರಾಪಂ ಸದಸ್ಯ ರಾಜೇಶ್ ಮತ್ತಿತರಿದ್ದರು.

ಎಲೆಕ್ಟ್ರಾನಿಕ್ ವಸ್ತುಗಳನ್ನು ಕಳವು ಮಾಡಿದ್ದ ಮೂವರ ಸೆರೆ



ಬೈಲಕುಪ್ಪೆ, ಸೆ.11– ಎಲೆಕ್ಟ್ರಾನಿಕ್ ವಸ್ತುಗಳನ್ನು ಕಳವು ಮಾಡಿದ್ದ ಮೂವರು ಆರೋಪಿಗಳನ್ನು ಬೈಲಕುಪ್ಪೆ ಪೊಲೀಸರು ಬಂಧಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ದೊಡ್ಡ ಹೊಸೂರು ಗ್ರಾಮದ ರಾಜೀಕ್, ಯಾಸಿನ್, ರಶೀದ್ ಬಂಧಿತ ಆರೋಪಿಗಳು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಟಿಬೆಟಿಯನ್ ನಿರಾಶ್ರಿತರ ಲಾಮಾ ಕ್ಯಾಂಪಿನ ಸೆರಾಜೆ ಮೋನಸ್ಟ್ರಿಯಲ್ಲಿ ದೇವಸ್ಥಾನ ಕೆಲಸಕ್ಕೆ ಬಳಸಲೆಂದು ಇಟ್ಟಿದ್ದ ಸುಮಾರು 2 ಲಕ್ಷ ಮೌಲ್ಯದ ಬ್ಯಾಟರಿ, ಮೋಟರ್‌ಗಳು, ಬೃಹತ್ ಗಾತ್ರದ ಎಲ್‌ಇಡಿ ಬಲ್ಬ್‌ಗಳು ಸೇರಿದಂತೆ ಇತರ ವಸ್ತುಗಳನ್ನು ಆರೋಪಿಗಳು ಕಳ್ಳತನ ಮಾಡಿದ್ದರು. ಆರೋಪಿಗಳ ವಿರುದ್ಧ ಬೈಲುಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಯಾಚರಣೆಯಲ್ಲಿ ಎಸ್‌ಐ ಅಜಯ್ ಕುಮಾರ್, ಸಿಬ್ಬಂದಿಗಳಾದ ಮಹದೇವಪ್ಪ, ಮುದ್ದುರಾಜು, ಮಂಜು, ರವಿ, ಕುಮಾರಸ್ವಾಮಿ ಇದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಹೆಚ್.ಡಿ.ಕೋಟೆ ತಾಲೂಕು ಕಾಂಗ್ರೆಸ್ ಎಸ್‌ಟಿ ಘಟಕಕ್ಕೆ ಸಿದ್ದನಾಯಕ ನೇಮಕ


ಅಧ್ಯಕ್ಷರಾಗಿ ಆಯ್ಕೆಯಾದ ಸಿದ್ದನಾಯಕ ಅವರಿಗೆ ಮೈಸೂರು ಜಿಲ್ಲೆ ಗ್ರಾಮಾಂತರ ಅಧ್ಯಕ್ಷರಾದ ಡಾ.ಬಿ.ಜೆ. ವಿಜಯ್‌ಕುಮಾರ್ ನೇಮಕಾತಿ ಪತ್ರ ನೀಡುತ್ತಿರುವುದು.

ಹೆಚ್.ಡಿ.ಕೋಟೆ, ಸೆ.11– ಹೆಚ್.ಡಿ. ಕೋಟೆ ತಾಲೂಕು ಕಾಂಗ್ರೆಸ್ ಪಕ್ಷದ ಎಸ್‌ಟಿ ಘಟಕದ ಅಧ್ಯಕ್ಷರಾಗಿ ಬಾಚೇಗೌಡನಹಳ್ಳಿ ಸಿದ್ದನಾಯಕ ನೇಮಕಗೊಂಡಿದ್ದಾರೆ.

ಮೈಸೂರು ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ನಡೆದ ಜಿಲ್ಲಾ ಎಸ್‌ಟಿ ಘಟಕದ ಕಾರ್ಯಕಾರಿಣಿ ಸಭೆಯಲ್ಲಿ ಮೈಸೂರು ಜಿಲ್ಲೆ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಅವರು ಕಾಂಗ್ರೆಸ್ ಪಕ್ಷದ ಎಸ್‌ಟಿ ಘಟಕದ ಹೆಚ್.ಡಿ. ಕೋಟೆ ತಾಲೂಕು ನೂತನ ಅಧ್ಯಕ್ಷರಾಗಿ ಬಾಚೇಗೌಡನಹಳ್ಳಿ ಸಿದ್ದನಾಯ್ಕ ಅವರನ್ನು ನೇಮಕ ಮಾಡಲಾಗಿದೆ ಎಂದು ನೇಮಕಾತಿ ಪತ್ರವನ್ನು ನೀಡಿದರು.

ಎಸ್‌ಟಿ ಘಟಕದ ನೂತನ ಅಧ್ಯಕ್ಷರಾದ ಸಿದ್ದನಾಯಕ ಅವರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜ್, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಚಿಕ್ಕವೀರ ನಾಯಕ, ಎಸ್‌ಟಿ ಘಟಕದ ಜಿಲ್ಲಾಧ್ಯಕ್ಷ ಮಹೇಶ್, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಎಸ್. ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ, ಮಾದಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹೇಶ್ ನಾಯಕ, ಮುಖಂಡರುಗಳಾದ ಮರಿತಿಮ್ಮನಾಯಕ, ಗಂಗಡ ಹೊಸಳ್ಳಿ ಸಿದ್ದನಾಯಕ, ನಾಗರಾಜು, ಮಣಿ, ಜಯಪ್ಪ, ಸೋಮಣ್ಣ, ಮಹಾದೇವ ನಾಯಕ, ನಾಗನಾಯ್ಕ, ಮಲ್ಲೇಶ್, ತಿಮ್ಮನಾಯಕ, ರಾಮನಾಯಕ, ನಾಗರಾಜು, ಪ್ರಶಾಂತ್, ವೇಣುಗೋಪಾಲ್ ಇನ್ನು ಮುಂತಾದವರು ಹಾಜರಿದ್ದರು.

ಕಲುಷಿತ ನೀರು ಸೇವಿಸಿ ವ್ಯಕ್ತಿ ಸಾವು, ಹಲವರು ಅಸ್ವಸ್ಥ

ಸಾಲಿಗ್ರಾಮ ಬಳಿ ಗ್ರಾಪಂ ನಿರ್ಲಕ್ಷ್ಯದಿಂದ ದುರಂತ

ಭೇರ್ಯ/ಸಾಲಿಗ್ರಾಮ, ಸೆ.11– ಕಲುಷಿತ ನೀರು ಸೇವಿಸಿ ವಾಂತಿ–ಬೇದಿಯಿಂದ ಓರ್ವ ಸಾವನ್ನಪ್ಪಿ 20ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿರುವ ಘಟನೆ ಸಾಲಿಗ್ರಾಮ ತಾಲೂಕಿನ ಗಡಿ ಗ್ರಾಮ ಬೆಟ್ಟಹಳ್ಳಿಯಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ಗೋವಿಂದೇಗೌಡ (65) ಎಂಬುವರೇ ಮೃತ ದುರ್ದೈವಿ. ಉಳಿದವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಗ್ರಾಮ ಪಂಚಾಯತಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯದಿಂದ ಕಲುಷಿತ ನೀರನ್ನು ಗ್ರಾಮಕ್ಕೆ ನಲ್ಲಿಗಳ ಮೂಲಕ ಪೂರೈಸಲಾಗಿದೆ. ಇದನ್ನು ಸೇವಿಸಿದ ಕೆಲವರಿಗೆ ವಾಂತಿ–ಭೇದಿ ಕಾಣಿಸಿಕೊಂಡಿದೆ. ತಕ್ಷಣ ಗ್ರಾಮಸ್ಥರು ಕೆಲವರನ್ನು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ದಾಖಲಿಸಿದ್ದಾರೆ. ಅದರಲ್ಲಿ ಗೋವಿಂದೇಗೌಡ ತೀವ್ರ ವಾಂತಿ–ಭೇದಿಯಿಂದ ಅಸ್ವಸ್ಥಗೊಂಡರು. ತಕ್ಷಣ ಅವರನ್ನು ಹಾಸನದ ಜಿಲ್ಲಾ ಆಸ್ಪತ್ರೆಗೆ


ಗೋವಿಂದೇಗೌಡ

ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು.

ಸುದ್ದಿ ತಿಳಿದ ತಾಲೂಕು ಆಸ್ಪತ್ರೆಯ ವೈದ್ಯರ ತಂಡ ಬೆಟ್ಟಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದ ಎಲ್ಲಾ ಜನರನ್ನು ಪರೀಕ್ಷೆಗೆ ಒಳಪಡಿಸಿ ಚಿಕಿತ್ಸೆ ಅಗತ್ಯವಿರುವವರನ್ನು ಅಂಬುಲೆನ್ಸ್ ಮೂಲಕ ಸಾಲಿಗ್ರಾಮ ಆಸ್ಪತ್ರೆಗೆ ದಾಖಲಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಈ ಸಂಬಂಧ ತಾಲೂಕು ಆರೋಗ್ಯಾಧಿಕಾರಿಗಳ ತಂಡ ಬೆಟ್ಟಹಳ್ಳಿ ಗ್ರಾಮದಲ್ಲಿ ಬೀಡು ಬಿಟ್ಟು ಸಮಗ್ರ ತನಿಖೆ ನಡೆಸುತ್ತಿದೆ.

ಶಾಸಕರ ಭೇಟಿ: ವಿಷಯ ತಿಳಿದು ಗ್ರಾಮಕ್ಕೆ ಭೇಟಿ ನೀಡಿದ ಶಾಸಕ ಡಿ. ರವಿಶಂಕರ್, ಮೃತ ಗೋವಿಂದೇಗೌಡರ ಕುಟುಂಬಕ್ಕೆ ಸಾಂತ್ವನ ಹೇಳಿ ಧೈರ್ಯ ತುಂಬಿದರು. ಈ ವೇಳೆ ಶಾಸಕರು ಮಾತನಾಡಿ, ಘಟನೆಗೆ ಕಾರಣವೇನೆಂದು ಈಗಾಗಲೇ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ವರದಿ ಬಂದ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು. ನಂತರ ಗ್ರಾಮಸ್ಥರ ಸಮ್ಮುಖದಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಕೂಡಲೇ ಚರಂಡಿಗಳ ಸ್ವಚ್ಛತೆ ಕಾಪಾಡಿ ಪೈಪ್‌ಲೈನ್, ಟ್ಯಾಂಕ್ ಸ್ವಚ್ಛಗೊಳಿಸಿ ಶುದ್ಧ ಕುಡಿಯುವ ನೀರು ಸರಬರಾಜು ಮಾಡಿ. ಇನ್ನು ಮುಂದೆ ಯಾವುದೇ ಅನಾಹುತ ಗಳು ಆಗದಂತೆ ಎಚ್ಚರಿಕೆ ವಹಿಸಿ ಎಂದು ಸೂಚಿಸಿದರು.

ಮಕ್ಕಳ ಸಮಿತಿಗೆ ನೇಮಕ



ಹೆಚ್.ಡಿ.ಕೋಟೆ, ಸೆ.11– ಮೈಸೂರು ಜಿಲ್ಲೆ ಮಕ್ಕಳ ಸಮಿತಿ ಸದಸ್ಯರಾಗಿ ಹೆಚ್.ಡಿ. ಕೋಟೆ ಪಟ್ಟಣದ ವಕೀಲರಾದ ಎಚ್.ವಿ. ಸರಸ್ವತಿ ಅವರು ನೇಮಕಗೊಂಡಿದ್ದಾರೆ.

ಗೋಧಾವರಿ ನಿಧನ

ಸರಗೂರು, ಸೆ.11– ಪಟ್ಟಣದ ವರ್ತಕರ ಸಂಘದ ಕಾರ್ಯದರ್ಶಿ ಎಸ್.ಸಿ. ವೆಂಕಟೇಶ್ ಅವರ ತಾಯಿ ಗೋಧಾವರಿ (74) ಬುಧವಾರ ಮಧ್ಯಾಹ್ನ ನಿಧನರಾಗಿದ್ದಾರೆ.



ಮೃತರಿಗೆ ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಪಟ್ಟಣದ ಸೋಮೇಶ್ವರ ದೇವಸ್ಥಾನದ ಕಪಿಲಾ ನದಿ ದಡದಲ್ಲಿ ಬುಧವಾರ ಸಂಜೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಬಿ.ಅಭಯ್‌ಕುಮಾರ್

ಸರಗೂರು, ಸೆ.11– ಪಟ್ಟಣದ ನಿವಾಸಿ ಎಸ್.ಬಿ. ಅಭಯ್‌ಕುಮಾರ್ (73) ನಿಧನರಾಗಿದ್ದಾರೆ,



ಮೃತರು ಜೈನ ಸಮಾಜದ ಮುಖಂಡರು, ಕಾಟನ್ ಮರ್ಚೆಂಟ್ ಹಾಗೂ ಲಯನ್ಸ್ ಶಾಲಾ ಟ್ರಸ್ಟಿಯಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಪಟ್ಟಣದ ಹೊರವಲಯದಲ್ಲಿರುವ ಜೈನ ಸಮಾಜದ ಚಿರಶಾಂತಿಧಾಮದಲ್ಲಿ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗಮಂಗಲ ಉದ್ವಿಗ್ನ

ಮೂರನೇ ಪುಟದಿಂದ

ನಾಗಮಂಗಲ ಪಟ್ಟಣ ಮತ್ತು ಬದರಿಕೊಪ್ಪಲಿನಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣಪತಿ ಮೂರ್ತಿಗಳನ್ನು ಅದ್ದೂರಿ ಮೆರವಣಿಗೆ ಮೂಲಕ ನಾಗಮಂಗಲದಿಂದ 2 ಕಿ.ಮೀ. ದೂರದಲ್ಲಿದ್ದ ಸೂಳೆಕೆರೆಯಲ್ಲಿ ವಿಸರ್ಜಿಸಲು ಆಯೋಜಕರು ಯೋಜಿಸಿದ್ದರು. ಆದರೆ ರಾತ್ರಿ ಮಂಡ್ಯ ಸರ್ಕಲ್‌ನಲ್ಲಿ ಘರ್ಷಣೆ ಉಂಟಾಗಿ ಅದೇ ಸ್ಥಳದಲ್ಲಿ ಗಣಪತಿ ಮೂರ್ತಿಗಳನ್ನು ನಿಲ್ಲಿಸಲಾಗಿತ್ತು. ಅಲ್ಲದೇ ಹಿಂದೂ ಯುವಕರು ಪೂರ್ವನಿಯೋಜನೆಯಂತೆ ಸೂಳೆಕೆರೆಯಲ್ಲಿ ಗಣಪತಿ ಮೂರ್ತಿಗಳ ವಿಸರ್ಜನೆ ಮಾಡುತ್ತೇವೆ ಎಂದು ಪಟ್ಟು ಹಿಡಿದಾದ್ದೂ, ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ಕಂದಾಯಾಧಿಕಾರಿಗಳ ಮನವಿ ಮೇರೆಗೆ ಪೊಲೀಸ್ ಬಂದೋಬಸ್ತ್‌ನಲ್ಲಿ ಪಟ್ಟಣದಲ್ಲೇ ಇರುವ ಹಂಪೆ ಅರಸನ ಕೆರೆ ಕೊಳದಲ್ಲಿ ವಿಸರ್ಜಿಸಿದರು. ಪಟ್ಟಣಾದ್ಯಂತ ಅಂಗಡಿ–ಮುಂಗಟ್ಟು ಗಳು ಬಂದ್ ಮಾಡಲಾಗಿದ್ದು, ಪೊಲೀಸ್ ವಾಹನಗಳ ಓಡಾಟ ಹೆಚ್ಚಾಗಿದೆ. ಪೊಲೀಸರು ಸಶಸ್ತ್ರಗಳೊಂದಿಗೆ ಗಸ್ತು ತಿರುಗುತ್ತಿದ್ದಾರೆ. ನಿಷೇಧಾಜ್ಞೆ ಜಾರಿಗೊಳಿಸಿರುವ ಬಗ್ಗೆ ಧ್ವನಿವರ್ಧಕದ ಮೂಲಕ ಸಂದೇಶ ರವಾನಿಸುತ್ತಿರುವ ದೃಶ್ಯ ಕಂಡು ಬಂತು.

> ಮಾನ್ಯ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ, ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಗಣೇಶೋತ್ಸವ ಹೆಸರಿನಲ್ಲಿ ಕೋಮುವಾದಿ ಸಂಘಿ ಸಂಘಟನೆಗಳು ಮುಸ್ಲಿಮರ ಅಂಗಡಿಗಳ ಮೇಲೆ ಕಲ್ಲು ತೂರಾಟ, ದಾಳಿ, ಬೆಂಕಿ ಹಾಕಿ ಅಂಗಡಿಗಳನ್ನು ಲೂಟಿ ಮಾಡಿದ್ದಾರೆ ಎಂದು ವರದಿ ಬರುತ್ತಿದೆ. ತಕ್ಷಣ ಹೆಚ್ಚುವರಿ ಪೊಲೀಸ್ ನಿಯೋಜಿಸಿ ಕಾನೂನು–ಸುವ್ಯವಸ್ಥೆ ಹದ್ದುಬಸ್ತಿಗೆ ತರಲು ಕ್ರಮ ಕೈಗೊಳ್ಳಲು ಕರ್ನಾಟಕ ಡಿಜಿಪಿಗೆ ನಿರ್ದೇಶನ ನೀಡಿ. ರಾಜ್ಯದಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ತರಲು, ಕೋಮು ಗಲಭೆ ಹುಟ್ಟುಹಾಕುವ ಸಂಘಿಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿ.
>
> **- ಅಬ್ದುಲ್ ಮಜೀದ್,** ಎಸ್‌ಡಿಪಿಐ ಅಧ್ಯಕ್ಷ

ಪೊಲೀಸರು ಹಲವಾರು ಬಾರಿ ಲಾಠಿ ಚಾರ್ಜ್ ನಡೆಸಿ, ಪರಿಸ್ಥಿತಿ ನಿಯಂತ್ರಿಸಲು ಹರಸಾಹಸಪಟ್ಟರು. ಈ ವೇಳೆ ಸಾಕಷ್ಟು ಅಂಗಡಿ ಹಾಗೂ ವಾಹನಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ. ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾಧಿಕಾರಿ ಡಾ. ಕುಮಾರ ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ. ಘಟನೆಯಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಗಣೇಶನ ಮೂರ್ತಿಯನ್ನು ನಾಗಮಂಗಲದ ಮೈಸೂರು ರಸ್ತೆಯಲ್ಲಿರುವ ಮಂಡ್ಯ ಸರ್ಕಲ್‌ನ ದರ್ಗಾ ಮುಂಭಾಗದಲ್ಲೇ ನಿಲ್ಲಿಸಿ, ಕೆಲ ಕಾಲ ಗಣಪತಿ ಮೂರ್ತಿಗೆ ಹಿಂದೂ ಯುವಕರು ಹಾಗೂ ಪೊಲೀಸರು ರಕ್ಷಣೆ ನೀಡಿದ್ದರು. ಪರಿಸ್ಥಿತಿ ನಿಯಂತ್ರಣಕ್ಕೆ ಬರುತ್ತಿದ್ದಂತೆಯೇ ಪೊಲೀಸರು ಹಿಂದೂ ಯುವಕರ ಮನವೊಲಿಸಿ ಪಟ್ಟಣದ ಹಂಪೆ ಅರಸನ ಕೆರೆ ಕೊಳದಲ್ಲಿ ಎರಡು ಗಣಪತಿ ಮೂರ್ತಿಗಳನ್ನು ವಿಸರ್ಜನೆ ಮಾಡಿಸಿದರು. ಉದ್ರಿಕ್ತ ಗುಂಪೊಂದು ಕಲ್ಲು ತೂರಾಟ ಮಾತ್ರವಲ್ಲದೆ, ಪೆಟ್ರೋಲ್ ಬಾಂಬ್‌ಗಳನ್ನು ಎಸೆದು, ತಲ್ವಾರ್ ಝಳಪಿಸಿದೆ.

ವಿವರ: ಇಂದು ನಾಗಮಂಗಲ ಪಟ್ಟಣ ಹಾಗೂ ಬದರಿಕೊಪ್ಪಲಿನಲ್ಲಿ ಪ್ರತಿಷ್ಠಾಪಿಸಲಾಗಿದ್ದ ಎರಡು ಗಣಪತಿ ವಿಸರ್ಜನೆಯ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಪಟ್ಟಣದಾದ್ಯಂತ ಸಂಭ್ರಮದಿಂದ ಮೆರವಣಿಗೆ ಸಾಗಿ ಬಂತು. ಮೆರವಣಿಗೆಯು ಮೈಸೂರು ರಸ್ತೆಯ ಮಂಡ್ಯ ಸರ್ಕಲ್‌ನಲ್ಲಿರುವ ದರ್ಗಾ ಮುಂಭಾಗ ಬರುತ್ತಿದ್ದಂತೆಯೇ ಅಡ್ಡಗಟ್ಟಿದ ಅನ್ಯ ಕೋಮಿನ ಯುವಕರು, ಇಲ್ಲಿ ವಾದ್ಯದೊಂದಿಗೆ ಮೆರವಣಿಗೆ ಬರಬಾರದು ಎಂದು ತಡೆದಿದ್ದಾರೆ. ಈ ವೇಳೆ ಪ್ರತಿ ಬಾರಿಯಂತೆ ಈ ಮಾರ್ಗದಲ್ಲೇ ಮೆರವಣಿಗೆ ಹೋಗುತ್ತದೆ ಎಂದು ಹಿಂದೂ ಯುವಕರು ಪಟ್ಟು ಹಿಡಿದಾಗ ಪರಸ್ಪರ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಪೊಲೀಸರು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದ್ದಾರೆ. ಆದರೆ ಕೆಲ ಕ್ಷಣಗಳಲ್ಲೇ ಅನ್ಯ ಕೋಮಿನ ಯುವಕರು ಗಣಪತಿ ಮೂರ್ತಿ ಹಾಗೂ ಮೆರವಣಿಗೆಯಲ್ಲಿದ್ದವರ ಮೇಲೆ ಕಲ್ಲು, ಬಾಟಲ್ ತೂರಾಟ ನಡೆಸಲು ಆರಂಭಿಸಿದ್ದಾರೆ. ಈ ವೇಳೆ ಪೆಟ್ರೋಲ್ ಬಾಂಬ್‌ಗಳನ್ನು ಅಂಗಡಿ–ಮುಂಗಟ್ಟುಗಳ ಮೇಲೆ ಎಸೆದಿದ್ದಲ್ಲದೇ ತಲ್ವಾರ್‌ಗಳನ್ನು ಝಳಪಿಸಿದ್ದಾರೆ. ಕಲ್ಲು ತೂರಾಟದಲ್ಲಿ ಹಲವು ಪೊಲೀಸರು ಹಾಗೂ ಮೆರವಣಿಗೆಯಲ್ಲಿದ್ದವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅದೇ ವೇಳೆ ಕಲ್ಲು ತೂರಾಟ ನಡೆಸಿದವರ ಮೇಲೆ ಮತ್ತೆ ಲಾಠಿ ಚಾರ್ಜ್ ನಡೆಸಿದ ಪೊಲೀಸರು, ಪರಿಸ್ಥಿತಿ ಕೈಮೀರುತ್ತಿರುವುದನ್ನು ಅರಿತು ಗಣಪತಿ ಮೂರ್ತಿ ಇದ್ದ ವಾಹನವನ್ನು ನಾಗಮಂಗಲ ಪೊಲೀಸ್ ಠಾಣೆ ಮುಂಭಾಗಕ್ಕೆ ಕೊಂಡೊಯ್ದಿದ್ದರು. ಈ ವೇಳೆ ತೀವ್ರ ಆಕ್ರೋಶಗೊಂಡ ಹಿಂದೂ ಯುವಕರು ಪೊಲೀಸ್ ಠಾಣೆ ಮುಂದೆ ಜಮಾಯಿಸಿ ನ್ಯಾಯಕ್ಕಾಗಿ ಆಗ್ರಹಿಸಿದ್ದಲ್ಲದೇ, ತಪ್ಪಿತಸ್ಥರನ್ನು ಬಂಧಿಸಬೇಕೆಂದು ಘೋಷಣೆ ಕೂಗಿದರು. ಅಲ್ಲದೇ ಮತ್ತೆ ಗಣಪತಿ ಮೂರ್ತಿ ಇದ್ದ ವಾಹನವನ್ನು ಮಂಡ್ಯ ಸರ್ಕಲ್‌ಗೆ ತಂದು ನಿಲ್ಲಿಸಿ ಅದಕ್ಕೆ ರಕ್ಷಣೆಯಾಗಿ ಸುತ್ತಲೂ ನಿಂತಿದ್ದರು. ನಾಗಮಂಗಲಕ್ಕೆ ಹೆಚ್ಚಿನ ಪೊಲೀಸ್ ಪಡೆಗಳು ಬಂದ ನಂತರ ಪೊಲೀಸರು ಹಿಂದೂ ಯುವಕರ ಮನವೊಲಿಸಿ ಗಣಪತಿ ವಿಸರ್ಜನೆ ಮಾಡಿಸಿದ್ದಾರೆ.

ಈ ಘಟನೆಯಿಂದ ನಾಗಮಂಗಲ ಪಟ್ಟಣದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ದುಷ್ಕರ್ಮಿಗಳು ಹಲವು ಅಂಗಡಿಗಳು ಹಾಗೂ ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಅಲ್ಲದೇ ಯುವಕರ ಗುಂಪು ಕಲ್ಲು, ಬಾಟಲಿ ಹಾಗೂ ಮಾರಕಾಸ್ತ್ರಗಳನ್ನು ಹಿಡಿದು ಓಡಾಡುತ್ತಿರುವ ಭಯಾನಕ ದೃಶ್ಯ ಕಂಡು ಬಂದಿದೆ.

ಸಶಸ್ತ್ರ ಮೀಸಲು ಪಡೆ ಸೇರಿದಂತೆ ಹೆಚ್ಚಿನ ಪಡೆಗಳನ್ನು ನಾಗಮಂಗಲಕ್ಕೆ ಕರೆಸಲಾಗಿದೆ. ಪಟ್ಟಣದಾದ್ಯಂತ ಸಶಸ್ತ್ರ ಪಡೆ ಪೊಲೀಸರು ಗಸ್ತು ತಿರುಗುತ್ತಿದ್ದರೆ, ಸೈರನ್ ಮೊಳಗಿಸುತ್ತಾ ಪೊಲೀಸ್ ಜೀಪ್‌ಗಳು ಓಡಾಡುತ್ತಿವೆ. ನಾಗಮಂಗಲ ಪಟ್ಟಣದಲ್ಲಿ ಸೆ.14ರವರೆಗೆ 144 ಸೆಕ್ಷನ್ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪಟ್ಟಣದ ಎಲ್ಲಾ ರಸ್ತೆಗಳಲ್ಲೂ ಪೊಲೀಸರ ಪಹರೆ ನಡೆಯುತ್ತಿದೆ. ಈ ಘರ್ಷಣೆಯಿಂದಾಗಿ ನಾಗಮಂಗಲ ಪಟ್ಟಣದಲ್ಲಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಿದ ಪರಿಣಾಮ ಮಂಡ್ಯ ಕಡೆಯಿಂದ ಬೆಂಗಳೂರು–ಹಾಸನ ಹೆದ್ದಾರಿ ಕಡೆಗೆ ತೆರಳುತ್ತಿದ್ದ ವಾಹನಗಳು ಹಾಗೂ ಹೆದ್ದಾರಿಯಿಂದ ಮಂಡ್ಯ ಹಾಗೂ ಮೈಸೂರು ಕಡೆಗೆ ತೆರಳಬೇಕಾದ ವಾಹನಗಳು ಪಟ್ಟಣದ ಹೊರಭಾಗದಲ್ಲೇ ಸಾಲುಗಟ್ಟಿ ನಿಂತಿದ್ದವು.

ಸಮುದಾಯದ ಓಲೈಕೆ ಇಂಥ ಘಟನೆಗೆ ಕಾರಣ

ಪುಂಡರು ಉದ್ದೇಶಪೂರ್ವಕವಾಗಿಯೇ ದಾಂಧಲೆ ಎಬ್ಬಿಸಿ ಸಾರ್ವಜನಿಕರು–ಪೊಲೀಸರ ಮೇಲೆ ಕಲ್ಲು, ಚಪ್ಪಲಿ ಎಸೆದು ಪೆಟ್ರೋಲ್ ಬಾಂಬ್ ಸ್ಫೋಟಿಸಿ, ತಲ್ವಾರ್ ಝಳಪಿಸುವ ದುಸ್ಸಾಹಸಕ್ಕೆ ಕೈ ಹಾಕಿರುವುದು ಪಟ್ಟಣದಲ್ಲಿ ಶಾಂತಿ ಸುವ್ಯವಸ್ಥೆ ವೈಫಲ್ಯವಾಗಿರುವುದಕ್ಕೆ ಸಾಕ್ಷಿ ಎಂದು ಕೇಂದ್ರ ಸಚಿವರು ಕಿಡಿಕಾರಿದ್ದಾರೆ. ಪೊಲೀಸ್ ಠಾಣೆ ಎದುರು ರಕ್ಷಣೆ ಕೊಡಿ ಎಂದು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದವರ ಮೇಲೆಯೇ ಆ ಕೋಮಿನ ಪುಂಡರು ದಬ್ಬಾಳಿಕೆ ನಡೆಸುತ್ತಾರೆ ಎಂದರೆ ನಾವು ಎಲ್ಲಿದ್ದೇವೆ ಎನ್ನುವ ಅನುಮಾನ ಬರುತ್ತದೆ. ಇಲ್ಲಿ ಸ್ಥಳೀಯ ಪೊಲೀಸರ ವೈಫಲ್ಯವೂ ಎದ್ದು ಕಾಣುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಮತ್ತು ಆ ಪಕ್ಷದ ರಾಜ್ಯ ಸರಕಾರ ರಾಜಕೀಯ ಸ್ವಾರ್ಥಕ್ಕಾಗಿ ಒಂದು ನಿರ್ದಿಷ್ಟ ಸಮುದಾಯವನ್ನು ಅತಿಯಾಗಿ ಓಲೈಸಿ, ತುಷ್ಟೀಕರಣ ಮಾಡಿದ ಫಲವಾಗಿ ನಾಗಮಂಗಲದಲ್ಲಿ ಈ ಹೇಯ ಘಟನೆ ನಡೆದಿದೆ. ಇಂತಹ ಓಲೈಕೆ, ತುಷ್ಟೀಕರಣ ರಾಜಕಾರಣ ನಿಲ್ಲಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ಕೆಟ್ಟ ದಿನಗಳು ದೂರವಿಲ್ಲ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಸಾರ್ವಜನಿಕರು ಶಾಂತಿ ಕಾಪಾಡಬೇಕು ಎನ್ನುವುದು ನನ್ನ ಕಳಕಳಿಯ ಮನವಿ. ತಕ್ಷಣವೇ ಪಟ್ಟಣದಲ್ಲಿ ಶಾಂತಿ ಮರುಸ್ಥಾಪನೆ ನಿಟ್ಟಿನಲ್ಲಿ ಸರಕಾರ ಕ್ರಮ ಕೈಗೊಳ್ಳಬೇಕು. ಅಲ್ಲದೆ ಈ ಪ್ರಕರಣ ನೆಪದಲ್ಲಿ ವಿರೋಧ ಪಕ್ಷಗಳ ಮುಖಂಡರು, ಕಾರ್ಯಕರ್ತರ ಮೇಲೆ ಪೊಲೀಸರು ದರ್ಪ ತೋರಿದರೆ ಸಹಿಸುವ ಪ್ರಶ್ನೆ ಇಲ್ಲ ಎಂದು ಕುಮಾರಸ್ವಾಮಿ ಅವರು ಹೇಳಿದ್ದಾರೆ.

ತಪ್ಪಿತಸ್ಥರ ವಿರುದ್ಧ ಕ್ರಮ

ಮೈಸೂರು, ಸೆ. 11– ನಾಗಮಂಗಲದಲ್ಲಿ ನಡೆದಿರುವ ಘರ್ಷಣೆ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ಯಾವುದೇ ಮುಲಾಜಿಲ್ಲದೇ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುವ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಪಟ್ಟಣದಲ್ಲಿ ಎಲ್ಲರೂ ಶಾಂತಿ ಕಾಪಾಡಬೇಕು, ಯಾವುದೇ ವದಂತಿಗಳಿಗೆ ಕಿವಿಗೊಡಬಾರದು ಎಂದು ಮನವಿ ಮಾಡಿದ್ದಾರೆ.



ತಮ್ಮನ್ನು ದೂರವಾಣಿ ಮೂಲಕ ಸಂಪರ್ಕಿಸಿದ ದೃಶ್ಯ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾಗಮಂಗಲ ಶಾಂತಿ–ಸೌಹಾರ್ದತೆಗೆ ಹೆಸರುವಾಸಿಯಾಗಿದ್ದು, ಇಂತಹ ಯಾವುದೇ ಘಟನೆ ನಡೆದಿರಲಿಲ್ಲ. ಕಳೆದ 40–50 ವರ್ಷಗಳಿಂದಲೂ ಗಣೇಶ ವಿಸರ್ಜನೆ ಮೆರವಣಿಗೆ ವಿಜೃಂಭಣೆಯಿಂದ ನಡೆಯುತ್ತಿತ್ತು. ಇಂದು ಅನಿರೀಕ್ಷಿತವಾಗಿ ಈ ಘಟನೆ ನಡೆದಿದೆ. ಪೊಲೀಸರು ಕೂಡ ಇದನ್ನು ನಿರೀಕ್ಷಿಸಿರಲಿಲ್ಲ ಎಂದೇ ಅನ್ನಿಸುತ್ತಿದೆ ಎಂದು ಹೇಳಿದರು.

ತಮಗೆ ಬಂದಿರುವ ಮಾಹಿತಿಯಂತೆ ಸದ್ಯಕ್ಕೆ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ನಾಗಮಂಗದಲ್ಲಿ ಮೊಕ್ಕಾಂ ಹೂಡಿದ್ದಾರೆ. ಸದ್ಯಕ್ಕೆ ಪರಿಸ್ಥಿತಿಯನ್ನು ನಿಯಂತ್ರಿಸುವ ಕೆಲಸಕ್ಕೆ ಪೊಲೀಸರು ಆದ್ಯತೆ ನೀಡಿದ್ದಾರೆ. ನಂತರ ಘರ್ಷಣೆಯಲ್ಲಿ ತೊಡಗಿದವರನ್ನು ಬಂಧಿಸಲೇಬೇಕಾಗುತ್ತದೆ. ಆ ಕೆಲಸವೂ ಆಗುತ್ತದೆ. ನಾಳೆ (ಗುರುವಾರ) ನಾನು ನಾಗಮಂಗಲಕ್ಕೆ ತೆರಳುತ್ತಿದ್ದೇನೆ ಎಂದು ಚಲುವರಾಯಸ್ವಾಮಿ ಹೇಳಿದರು.

ಮೈಸೂರು ಮಿತ್ರ ಗುರುವಾರ 12 ಸೆಪ್ಟೆಂಬರ್ 2024

ಮೈಸೂರಲ್ಲಿ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ

61 ಮಂದಿ ನಾಮಸ್ಮರಣೆ; ಮೌನಾಚರಣೆ ಮೂಲಕ ನಮನ

ಮೈಸೂರು, ಸೆ.11(ಎಂಟಿವೈ)– ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನದ ಅಂಗವಾಗಿ ಬುಧವಾರ ಅರಣ್ಯ, ವನ್ಯಜೀವಿ ಸಂರಕ್ಷಣೆಯ ಕರ್ತವ್ಯದಲ್ಲಿದ್ದಾಗಲೇ ಹುತಾತ್ಮರಾದ ಅರಣ್ಯ ಇಲಾಖೆಯ 61 ಸಿಬ್ಬಂದಿಯ ತ್ಯಾಗ ಬಲಿದಾನ ಸ್ಮರಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಇಂದು ಬೆಳಗ್ಗೆ ನಡೆದ ಹುತಾತ್ಮರ ದಿನದ ಕಾರ್ಯಕ್ರಮದಲ್ಲಿ ದೇಶದಲ್ಲಿ 1730ರಿಂದ 2024ರವರೆಗೆ ವಿವಿಧೆಡೆ ಕರ್ತವ್ಯದಲ್ಲಿದ್ದಾಗಲೇ ಪ್ರಾಣ ತ್ಯಾಗ ಮಾಡಿದ 61 ಮಂದಿಯ ನಾಮಸ್ಮರಣೆ, ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ, ಗಾಳಿಯಲ್ಲಿ ಗುಂಡು ಹಾರಿಸಿ, ಮೌನಾಚರಣೆ ಮೂಲಕ ಅಗಲಿದ ಸಹೋದ್ಯೋಗಿಗಳ ತ್ಯಾಗ ಬಲಿದಾನವನ್ನು ಸ್ಮರಿಸಲಾಯಿತು.



ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಬುಧವಾರ ರಾಷ್ಟ್ರೀಯ ಹುತಾತ್ಮರ ದಿನ ಆಚರಿಸಿ, ಹುತಾತ್ಮ ಅರಣ್ಯ ಸಿಬ್ಬಂದಿಯ ಸ್ಮರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಹುತಾತ್ಮರ ಸ್ಮಾರಕಕ್ಕೆ ರೀತ್ ಅರ್ಪಿಸಿ ಗೌರವ ನಮನ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಗಡಿಯಲ್ಲಿ ದೇಶ ಕಾಯುವ ಯೋಧರಂತೆ ಅರಣ್ಯ ಸಂರಕ್ಷಣೆಯಲ್ಲಿ ತೊಡಗಿರುವ ಅರಣ್ಯ ಸಿಬ್ಬಂದಿ ಸೇವೆಯೂ ಮಹತ್ವದ್ದಾಗಿದೆ. ವಿಷಮ ಪರಿಸ್ಥಿತಿಯಲ್ಲಿಯೂ ಅರಣ್ಯ ಸಂಪತ್ತಿನ ಸಂರಕ್ಷಣೆಗೆ ತಮ್ಮ ಜೀವವನ್ನೇ ಒತ್ತೆಯಿಟ್ಟಿದ್ದಾರೆ. ಅರಣ್ಯ ಮೇಲ್ನೋಟಕ್ಕೆ ಸುಂದರವಾಗಿ ಕಾಣುತ್ತದೆ. ಹೊರಗಿನ ಜನರು ಒಂದೆರಡು ಗಂಟೆಯಷ್ಟೇ ಅರಣ್ಯದಲ್ಲಿರಲು ಸಾಧ್ಯ, ಆದರೆ, ಇಲಾಖೆಯ ಸಿಬ್ಬಂದಿ ವರ್ಷವಿಡೀ ಅರಣ್ಯದಲ್ಲಿಯೇ ಇದ್ದು ತಪಸ್ಸಿನಂತೆ ಕೆಲಸ ಮಾಡುತ್ತಾರೆ ಎಂದು ಶ್ಲಾಘಿಸಿದರು. ಮೈಸೂರು ಭಾಗದಲ್ಲಿ ಮಾನವ–ವನ್ಯಜೀವಿ ಸಂಘರ್ಷ, ಕೈಗಾರಿಕೀಕರಣದಿಂದ ಅರಣ್ಯ ನಾಶ ಹೆಚ್ಚುತ್ತಿದೆ. ಪರಿಸರದಲ್ಲಿ ಪ್ರತಿಯೊಂದು ಗಿಡ–ಮರವೂ ತನ್ನದೇ ಆದ ಮಹತ್ತರ ಪಾತ್ರ ವಹಿಸುತ್ತದೆ. ಅವುಗಳನ್ನು ಸಂರಕ್ಷಿಸುವ ಹಾಗೂ ಅರಣ್ಯ ಕಾಪಾಡುವ ಸವಾಲಿನ ಕೆಲಸವನ್ನು ಸಿಬ್ಬಂದಿ ಮಾಡುತ್ತಿರುವುದು ಹೆಮ್ಮೆ ಪಡುವ ಸಂಗತಿ ಎಂದರು.

ಅರಣ್ಯ ಇಲಾಖೆಯ ವರ್ಕಿಂಗ್ ಪ್ಲಾನ್ ಸಿಎಫ್ ರವಿಶಂಕರ್ ಮಾತನಾಡಿ, ಜಗತ್ತಿನಲ್ಲಿ ಎಲ್ಲ ಪ್ರಾಣಿಗಳು ಒಂದಕ್ಕೊಂದು ಹೊಂದಿಕೊಂಡು ಸಮತೋಲನ ಜೀವನ ನಡೆಸುತ್ತಿವೆ. ಪರಿಸರ ಸಮತೋಲನದಿಂದ ಇರಬೇಕಾದರೆ ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆ ಅಗತ್ಯವಾಗಿದೆ. ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಸಾಧನೆ ಮಾಡಿದ್ದರೂ ಮಾನವ ಉಸಿರಾಡಲು, ಜೀವನ ಸಾಗಿಸಲು ಅರಣ್ಯವನ್ನೇ ಅವಲಂಬಿಸಿದ್ದಾನೆ. ಗಾಳಿ, ನೀರು, ಆಹಾರ, ಕೃಷಿ, ಕೈಗಾರಿಕೆ ಸೇರಿದಂತೆ ಮೂಲಭೂತ ಅವಶ್ಯಕತೆಗಳು ಅರಣ್ಯಗಳನ್ನೇ ಅವಲಂಬಿಸಿವೆ ಎಂದು ತಿಳಿಸಿದರು.

ಜಾಗತಿಕ ಹವಾಮಾನ ಬದಲಾವಣೆ ತಡೆಗಟ್ಟಲು ಏಕೈಕ ಮಾರ್ಗ ಅರಣ್ಯ ಸಂರಕ್ಷಣೆ ಅವಶ್ಯವಾಗಿದೆ. ವಿಶ್ವದ 36 ಜೀವ ವೈವಿಧ್ಯದ ತಾಣಗಳಲ್ಲಿ ಭಾರತದಲ್ಲಿನ ಮೂರು ತಾಣವೂ ಸೇರಿದೆ. ಪಶ್ಚಿಮಘಟ್ಟಗಳು, ಹಿಮಾಲಯ ಹಾಗೂ ಇಂಡೋ–ಬರ್ಮಾ ಕಾಡುಗಳು ಒಳಗೊಂಡಿವೆ. ದೇಶದಲ್ಲಿ 1.73 ಲಕ್ಷ ಅರಣ್ಯ ಅವಲಂಬಿತ ಗ್ರಾಮಗಳಿವೆ. ಈ ಗ್ರಾಮಗಳ ಜನರೊಂದಿಗೆ ಬಾಂಧವ್ಯ ಇಟ್ಟುಕೊಂಡು ಅರಣ್ಯ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಇದರೊಂದಿಗೆ ಕಾಡ್ಗಿಚ್ಚು, ವನ್ಯಜೀವಿಗಳ ಕಳ್ಳಬೇಟೆ, ಒತ್ತುವರಿ ಸೇರಿದಂತೆ ಪರಿಸರ ನಾಶವನ್ನು ತಡೆಗಟ್ಟುವ, ವೃಕ್ಷ ಕವಚ ಹೆಚ್ಚಿಸುವ ಕೆಲಸದಲ್ಲಿ ಸಿಬ್ಬಂದಿ ಶ್ರಮಿಸುತ್ತಿದ್ದಾರೆ. ಅವರ ಶ್ಲಾಘನೀಯ ಕಾರ್ಯಕ್ಕೆ ಪದಕ ನೀಡಿ ಗೌರವಿಸಲಾಗುತ್ತಿದೆ ಎಂದು ತಿಳಿಸಿದರು.

ಡಿಸಿಎಫ್ ಡಾ.ಕೆ.ಎನ್.ಬಸವರಾಜ್ ಮಾತನಾಡಿ, 1730ರ ಸೆ. 11ರಂದು ಜೋಧಪುರದ ಮಹಾರಾಜ ಅಭಯ ಸಿಂಗ್‌ನ ಸೈನಿಕರು ಕೆಜರ್ಲಿ ಪ್ರಾಂತ್ಯದಲ್ಲಿ ಬೆಳೆದಿದ್ದ ಮರಗಳನ್ನು ರಾಜನ ಹೊಸ ಅರಮನೆಯ ಪೀಠೋಪಕರಣಗಳಿಗಾಗಿ ಕಡಿಯಲು ಮುಂದಾದರು. ಇದನ್ನು ವಿರೋಧಿಸಿದ ಬಿಷ್ಣೋಯಿ ಸಮುದಾಯದ 363 ಪುರುಷರು, ಮಹಿಳೆಯರನ್ನು ಕೊಲ್ಲಲಾಯಿತು. ಮರಗಳಿಗಾಗಿ ಬಲಿದಾನ ಮಾಡಿದ ಇವರ ನೆನಪಿಗೆ ಪ್ರತಿ ವರ್ಷ ಸೆ.11ರಂದು ಅರಣ್ಯ ಹುತಾತ್ಮರ ದಿನಾಚರಣೆ ಆಚರಿಸಲಾಗುತ್ತದೆ ಎಂದು ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ. ಮಹೇಶ್ ಕುಮಾರ್ ಮಾತನಾಡಿ, ಮಾನವನ ದುರಾಸೆಯ ಪರಿಣಾಮ ಇಂದು ಅರಣ್ಯ ನಾಶವಾಗುತ್ತಿದೆ. ಜನ ಮೂಲಭೂತ ಹಕ್ಕುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದಾರೆ. ಆದರೆ ಕರ್ತವ್ಯಗಳನ್ನು ಮರೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲೂ ಅರಣ್ಯ ಇಲಾಖೆ ಸಿಬ್ಬಂದಿ ಮುಂದಿನ ಪೀಳಿಗೆಗೆ ಅರಣ್ಯ ಸಂರಕ್ಷಣೆ ಮಾಡುತ್ತಿದ್ದಾರೆ. ಮಾನವ –ವನ್ಯಜೀವಿ ಸಂಘರ್ಷದಿಂದ ಡಿಸಿಎಫ್ ಹುದ್ದೆಯಿಂದ ವಾಚರ್, ಪಶುವೈದ್ಯರೂ ಸೇರಿದಂತೆ 61 ಮಂದಿ ಪ್ರಾಣ ತ್ಯಾಗ ಮಾಡಿದ್ದಾರೆ. ರಾಜ್ಯದಲ್ಲಿ ಆನೆ, ಹುಲಿ ಹೆಚ್ಚಾಗಿವೆ. ಇದರೊಂದಿಗೆ ಮಾನವ–ಪ್ರಾಣಿ ಸಂಘರ್ಷದ ಪ್ರಕರಣವೂ ಹೆಚ್ಚುತ್ತಿದೆ. ಅವುಗಳನ್ನು ತಡೆಗಟ್ಟಲು ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯದಲ್ಲಿ ಚಿರತೆ ಕಾರ್ಯಪಡೆ, ಆನೆ ಕಾರ್ಯಪಡೆ ರಚಿಸಲಾಗಿದೆ. ಕ್ಲಿಷ್ಟಕರ ಸಂದರ್ಭದಲ್ಲಿ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಭೂಪಟದ ಶೇ.33ರಷ್ಟು ಅರಣ್ಯ ಇರಬೇಕು ಎಂಬ ನಿಯಮವಿದೆ. ಆದರೆ ಭಾರತ ಮತ್ತು ರಾಜ್ಯದಲ್ಲಿ ಶೇ.21ರಷ್ಟು ಮಾತ್ರ ಅರಣ್ಯವಿದೆ. ಜೀವ ವೈವಿಧ್ಯತೆ ಸಂರಕ್ಷಣೆ, ಕಾಡ್ಗಿಚ್ಚು ತಡೆ, ಕಳ್ಳಬೇಟೆ ತಡೆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇವು ಇನ್ನಷ್ಟು ಹೆಚ್ಚುತ್ತದೆ. ಮಾನವನ ದುರಾಸೆಯಿಂದ ಇವು ಬೇರೆ ಬೇರೆ ಮಾರ್ಗದಲ್ಲಿ ಅರಣ್ಯ ಅಪರಾಧ ಕೃತ್ಯಗಳು ನಡೆಯುತ್ತವೆ. ಈ ನಿಟ್ಟಿನಲ್ಲಿ ವಿವಿಧ ಇಲಾಖೆಯ ಸಹಭಾಗಿತ್ವದಲ್ಲಿ ಮುನ್ನಡೆಯಬೇಕು. ಹುತಾತ್ಮರ ಆದರ್ಶ ಪಾಲಿಸಬೇಕು. ಅವರ ಕುಟುಂಬದ ಆಶಯಕ್ಕೆ ಸ್ಪಂದಿಸುವಂತಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಚಂದ್ರಶೇಖರ್ ಪಾಟೀಲ್, ಶಂಕರೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರಕೃತಿ ರಕ್ಷಣೆ ಎಲ್ಲರ ಹೊಣೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು



ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನದ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅರಣ್ಯ ಭವನದಲ್ಲಿನ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು.

ಬೆಂಗಳೂರು,ಸೆ.11(ಕೆಎಂಶಿ)–ಪ್ರಕೃತಿಯಿಂದ ಲಾಭ ಪಡೆಯುತ್ತಿರುವ ಎಲ್ಲರಿಗೂ ಪ್ರಕೃತಿ ರಕ್ಷಣೆಯ ಹೊಣೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನದ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಣ್ಯ ಭವನದಲ್ಲಿನ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿ, ಮಾತನಾಡಿದರು. ರಾಜ್ಯದಲ್ಲಿ ಅನುಪಾತಕ್ಕೆ ತಕ್ಕಷ್ಟು ಅರಣ್ಯವಿಲ್ಲ. ಆದ್ದರಿಂದ ಅರಣ್ಯೀಕರಣ ಹೆಚ್ಚಾಗಬೇಕು. ಕಾಡು ಮತ್ತು ವನ್ಯಪ್ರಾಣಿ ಸಂಪತ್ತಿನ ರಕ್ಷಣೆ ಕೇವಲ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಯ ಕರ್ತವ್ಯ ಎಂದರೆ ನಾವು ನಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡಂತಾಗುತ್ತದೆ ಎಂದರು.

ರಾಜ್ಯದಲ್ಲಿ ಆನೆ, ಹುಲಿಗಳ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷದ ಸಂಗತಿ. ಆದರೆ ಪ್ರಾಣಿ–ಮನುಷ್ಯ ಸಂಘರ್ಷ ತಪ್ಪಿಸಿ ಮಾನವ, ಪ್ರಾಣಿ ಸಂಪತ್ತನ್ನು ಕಾಪಾಡುವ ದಿಕ್ಕಿನಲ್ಲಿ ಇನ್ನಷ್ಟು ಪರಿಣಾಮಕಾರಿ ಕೆಲಸಗಳು ಆಗಬೇಕಿದೆ. ಇದಕ್ಕಾಗಿ ಲಭ್ಯ ಇರುವ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.


ಅರಣ್ಯ ಹುತಾತ್ಮರ ಕುಟುಂಬಕ್ಕೆ ನೀಡುವ ಪರಿಹಾರ ಮೊತ್ತವನ್ನು 30ರಿಂದ 50 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಅರಣ್ಯ ಹುತಾತ್ಮರು ಮನುಕುಲದ ಸಂರಕ್ಷಕರು. ಇವರ ತ್ಯಾಗ ಅರಣ್ಯ ಸಂರಕ್ಷಣೆಗೆ ಸ್ಫೂರ್ತಿಯಾಗಲಿ ಎಂದರು.

ದಸರಾ ಪ್ರಾಯೋಜಕತ್ವ ದುಡ್ಡು ಹೊಡೆಯೋ ಸ್ಕೀಂ!

- ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ವಾಗ್ದಾಳಿ
- ಸರ್ಕಾರವೇ ಅದ್ದೂರಿ ದಸರಾ ಎಂದು ಹೇಳಿ 40 ಕೋಟಿ ಪ್ರಕಟಿಸಿದೆ
- ಈಗ ಪ್ರಾಯೋಜಕರ ಹುಡುಕುವ ಕೆಲಸದ ಅಗತ್ಯವಿದೆಯೇ?
- ಜಂಬೂಸವಾರಿಯಲ್ಲಿ ಆನೆಗಳಿಗೂ ಪ್ರಚಾರದ ಬ್ಯಾನರ್ ಕಟ್ಟುತ್ತಾರಾ!

ಮೈಸೂರು, ಸೆ.11–ದಸರಾ ಪ್ರಾಯೋಜಕತ್ವ ದುಡ್ಡು ಹೊಡೆಯುವ ಸ್ಕೀಂ ಎಂದು ಕಿಡಿಕಾರಿರುವ ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್, ದಸರಾ ಮಹೋತ್ಸವಕ್ಕೆ ಸರಕಾರವೇ 40 ಕೋಟಿ ರೂ. ಬಿಡುಗಡೆ ಮಾಡುವುದಾಗಿ ಹೇಳಿದೆ. ಈ ನಡುವೆ ಮತ್ತೆ ಪ್ರಾಯೋಜಕರನ್ನು ಹುಡುಕುತ್ತಿರುವುದಾದರೂ ಯಾಕೆ ಎಂದು ಪ್ರಶ್ನಿಸಿದ್ದಾರೆ. ನಾಡಹಬ್ಬ ದಸರಾ ಮಹೋತ್ಸವದ ಸಿದ್ಧತೆ ಆರಂಭಗೊಂಡ ಬೆನ್ನಲ್ಲೇ, ದಸರಾಗೆ ಪ್ರಾಯೋಜಕರನ್ನು ಹುಡುಕುವ ಕೆಲಸ ಶುರುವಾಗಿದೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ನೇತೃತ್ವದಲ್ಲಿ ಇಂದು ಲಲಿತಾ ಮಹಲ್ ಪ್ಯಾಲೆಸ್ ಹೋಟೆಲ್‌ನಲ್ಲಿ ಉದ್ಯಮಿಗಳ ಜತೆ ಸಭೆ ನಡೆಸಿ ಪ್ರಾಯೋಜಕತ್ವದ ಬಗ್ಗೆ ಚರ್ಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ವಿಶ್ವನಾಥ್, 2003ರಲ್ಲಿ ರಾಜ್ಯದಲ್ಲಿ ಕಂಡು ಕೇಳರಿಯದ ಭೀಕರ ಬರಗಾಲ. ಆಗ ದುಂದುವೆಚ್ಚ ಮಾಡಿ ದಸರಾ ಆಚರಣೆ ಮಾಡುವುದು ಬೇಡ ಎಂದು ರೈತ ಸಂಘಟನೆ ಹಾಗೂ ಕನ್ನಡ ಪರ ಹೋರಾಟಗಾರರು ಚಳವಳಿ ಆರಂಭಿಸಿದ್ದರು. ಈ ಸಲುವಾಗಿಯೇ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ನಾನು, ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಮನವೊಲಿಸಿ ದಸರಾ ಆಚರಣೆಗೆ ಮುಂದಾದೆ. ಸರಕಾರದ ನಯಾ ಪೈಸೆಯೂ ಬೇಡ. ಪ್ರಾಯೋಜಕರ ಸಹಕಾರದಿಂದ ನಾಡಹಬ್ಬ ಮಾಡುವುದಾಗಿ ತಿಳಿಸಿದೆ. ಇದಕ್ಕೆ ಎಸ್.ಎಂ.ಕೃಷ್ಣ ಅವರು ಸಮ್ಮತಿಸಿದ್ದರು. ಅದರಂತೆ ಟಿವಿಎಸ್ ಕಂಪನಿ ಸೇರಿದಂತೆ ಪ್ರಮುಖವಾದ ಒಂದೆರಡು ಸಂಸ್ಥೆಗಳ ಸಹಭಾಗಿತ್ವದಲ್ಲಿ ಹಣ ಸಂಗ್ರಹಿಸಿ ದಸರಾ ಆಚರಿಸಿದೆವು. ಆದರೆ ಆನಂತರ ಪ್ರಾಯೋಜಕತ್ವ ಪಡೆಯುವುದೇ ಒಂದು ಚಾಳಿಯಾಯ್ತು ಎಂದರು.



ರಾಜ್ಯ ಸರಕಾರವೇ ಈ ಬಾರಿ ಅದ್ದೂರಿ ದಸರಾ ಮಾಡುವುದಾಗಿ ಹೇಳಿಕೆ ನೀಡಿದ್ದು, ಇದಕ್ಕಾಗಿ 40 ಕೋಟಿ ರೂ. ಅನುದಾನವನ್ನು ಘೋಷಿಸಿದೆ. ಇಷ್ಟಾದ ಮೇಲೂ ಪ್ರಾಯೋಜಕರ ಬಳಿ ಹಣ ಕೇಳುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ ಅವರು, ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ನಡೆದ ಪ್ರಾಯೋಜಕತ್ವದ ಸಭೆಯಲ್ಲಿ ಜಂಬೂವಾರಿಗೆ ಇಷ್ಟು ಕೋಟಿ, ಅಂಬಾರಿಗೆ ಇಷ್ಟು ಕೋಟಿ ಎಂದು ನಿಗದಿ ಮಾಡಿದ್ದಾರೆ. ಜಂಬೂಸವಾರಿಯಲ್ಲೇ ತಾನೆ ಅಂಬಾರಿ ಸಾಗುವುದು.? ಅದು ಹೇಗೆ ಎರಡಕ್ಕೂ ಪ್ರತ್ಯೇಕ ಪ್ರಾಯೋಜಕತ್ವ ಪಡೆಯುತ್ತಾರೆ. ಏನು ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ ಆನೆಗಳಿಗೆ ಪ್ರಚಾರದ ಬ್ಯಾನರ್ ಕಟ್ಟುತ್ತಾರಾ ಎಂದು ವ್ಯಂಗ್ಯವಾಡಿದರು.

ಪಿಎಂ ವಿಶ್ವಕರ್ಮ ಯೋಜನೆ ಸದ್ಬಳಕೆ ಮಾಡಿಕೊಳ್ಳಿ; ಆರ್ಥಿಕವಾಗಿ ಸದೃಢರಾಗಿ

ಶಾಸಕರೂ ಆದ ಸಹಕಾರ ಮಹಾ ಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರ ಸಲಹೆ



ಬೆಳಗಾವಿಯಲ್ಲಿ ಬುಧವಾರ ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ, ಕರ್ನಾಟಕ ಕೌಶಲ ಅಭಿವೃದ್ಧಿ ಇಲಾಖೆ ಸಂಯುಕ್ತವಾಗಿ ಆಯೋಜಿಸಿದ್ದ ಪಿ.ಎಂ.ವಿಶ್ವಕರ್ಮ ಯೋಜನೆಯ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.



ಇದೇ ಸಂದರ್ಭದಲ್ಲಿ ಸಹಕಾರ ಮಹಾ ಮಂಡಲದ ಅಧೀನದಲ್ಲಿರುವ ಕೆಐಸಿಎಂ ಕಟ್ಟಡದ ಕಾಂಪೌಂಡ್ ನಿರ್ಮಾಣಕ್ಕೆ (ಜಿ.ಟಿ.ದೇವೇಗೌಡರು)ಭೂಮಿ ಪೂಜೆ ನೆರವೇರಿಸಲಾಯಿತು.

ಬೆಳಗಾವಿ, ಸೆ.11(ಬಿಎಲ್‌ಯು)– ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸದೃಢರಾಗಿ ಬೆಳೆಯಿರಿ ಎಂದು ಶಾಸಕರೂ ಆದ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರು ಸಲಹೆ ನೀಡಿದ್ದಾರೆ.

ಬೆಳಗಾವಿಯಲ್ಲಿ ಇಂದು ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ, ಕರ್ನಾಟಕ ಕೌಶಲ ಅಭಿವೃದ್ಧಿ ಇಲಾಖೆ ಸಂಯುಕ್ತವಾಗಿ ಆಯೋಜಿಸಿದ್ದ ಪಿಎಂ ವಿಶ್ವಕರ್ಮ ಯೋಜನೆಯ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕುಶಲಕರ್ಮಿಗಳು ಹಾಗೂ ವಿಶ್ವಕರ್ಮ ಜನಾಂಗದವರು ನಿರುದ್ಯೋಗಿಗಳಾಗಿದ್ದು, ಸ್ವಂತ ಉದ್ಯೋಗ ಆರಂಭಿಸಿ ಆರ್ಥಿಕವಾಗಿ ಸದೃಢರಾಗಲು ಈ ಯೋಜನೆ ಪೂರಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಲಾವಿದರು, ಕುಶಲಕರ್ಮಿಗಳು ಹಾಗೂ ಸಣ್ಣ ವ್ಯಾಪಾರಿಗಳಿಗೆ ಬೆಂಬಲ ನೀಡುವುದು, ಇವರಿಗೆ ಬಂಡವಾಳ ಒದಗಿಸಿ ವ್ಯಾಪಾರ ಬೆಳೆಸಲು ಸಹಾಯ ಮಾಡಲು ಈ ಯೋಜನೆ ರೂಪಿಸಲಾಗಿದೆ. ಈ ಮೂಲಕ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಮತ್ತು ಪ್ರಚಾರ ನೀಡುವುದು ಕೂಡ ಈ ಯೋಜನೆಯ ಮೂಲ ಉದ್ದೇಶ ಎಂದು ಹೇಳಿದರು.

ಕಮ್ಮಾರ, ಕುಂಬಾರ, ದರ್ಜಿಗಳು ಸೇರಿದಂತೆ 18 ವಿವಿಧ ಕೌಶಲ ತರಬೇತಿಗಳನ್ನು ಈ ಯೋಜನೆಯಲ್ಲಿ ಸೇರಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ ಈ ಯೋಜನೆ ಚಾಲ್ತಿಯಲ್ಲಿದ್ದು, ಇದರ ಸದುಪಯೋಗ ಪಡೆದುಕೊಂಡು ಜೀವನ ರೂಪಿಸಿಕೊಳ್ಳುವಂತೆ ಜಿ.ಟಿ.ದೇವೇಗೌಡರು ಸಲಹೆ ನೀಡಿದರು. ಪಿಎಂ ವಿಶ್ವಕರ್ಮ ಯೋಜನೆಯಲ್ಲಿ ತರಬೇತಿ ಪಡೆದ ಕುಶಲಕರ್ಮಿಗಳಿಗೆ ಕೌಶಲ ಪರಿಕರಗಳನ್ನು ಈ ವೇಳೆ ವಿತರಿಸಲಾಯಿತು. ಡಿಸಿಸಿ ಬ್ಯಾಂಕ್ ನಿರ್ದೇಶಕ ಮಹಾಂತೇಶ್ ದೊಡ್ಡಗೌಡ, ಮಾಜಿ ವಿಧಾನಪರಿಷತ್ ಸದಸ್ಯ ಮಹಾಂತೇಶ್ ಕವಟಗಿಮಠ್, ಗ್ರಾಹಕರ ಮಹಾ ಮಂಡಳದ ಅಧ್ಯಕ್ಷ ಜಿ.ಪಿ.ಪಾಟೀಲ್, ಬೆಳಗಾವಿ ವಿಭಾಗದ ಜಂಟಿ ನಿಬಂಧಕ ಸುರೇಶ್ ಗೌಡ ಪಾಟೀಲ್ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸ್ತ್ರೀ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಗ್ರೇಟೆಸ್ಟ್ ಆಫ್ ಆಲ್ ಟೈಮ್ (ತ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮಾ (ಕ)	4 ಪ್ರದರ್ಶನಗಳು
ಪ್ರಭಾ	
ಅನ್ನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವಾರುಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾರುಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ.
ಸ್ಕ್ರೀನ್ 4	ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

3ನೇ ದಿನ, ಗುರುವಾರ, 12–9–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಸ್ಕ್ವಂಡರರ್ ಪ್ಲೇಟ್ ಡಿ.II–1100 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.00ಕ್ಕೆ
1. ಮೇಘನನ್ 2. ಚಿರಾಗ್ 3. ಡಿ ಯುನೈಟೆಡ್

II. ಶಿವಕಾಶಿ ಪ್ಲೇಟ್ –1200 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್) ಮ.2.30ಕ್ಕೆ
1. ಸ್ಕ್ವೇರ್ ಕಟ್ 2. ಸೂಪರ್ ಸೆಕ್ಸಿ 3. ಎಲವಾಡೋ

III. ಸ್ಕ್ವಂಡರರ್ ಪ್ಲೇಟ್ ಡಿ.I–1100 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 3.00ಕ್ಕೆ
1. ಸೂಪರ್ ಬೋಲ್ಡ್ 2 ಬೆಂಜಮಾ 3. ಟ್ರೋಪಿಕಲ್ ಮಿಸ್ಟ್

IV. ಡೆನ್ನಿಸ್ ಅಂಡ್ ವೈವೊನ್ನಿ ಜಾರ್‌ವೀಸ್ ಮೆಮೋರಿಯಲ್ ಟ್ರೋಫಿ ಡಿ.I–1200 ಮೀ. ರೇಟೆಡ್ 20 ರಿಂದ 45. (ನೋ ವ್ಹಿಪ್) ಮ.3.30ಕ್ಕೆ
1. ಲೂಥರ್ ಬರ್‌ನೆನೆ 2. ಮೆಷರ್ ಆಫ್ ಟೈಮ್ 3. ಫ್ಲೈಯಿಂಗ್ ಫಾಲ್ಕನ್

V. ಎಂ.ಎಸ್.ಸುರೇಶ್ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಸಂ.4.00ಕ್ಕೆ
1. ಡೈನಾಮಿಕ್ ಫೋರ್ಸ್ 2. ಡ ಬೀಟ್ 3. ಹೈ ಒಪಿನಿಯನ್

VI. ಡೆನ್ನಿಸ್ ಅಂಡ್ ವೈವೊನ್ನಿ ಜಾರ್‌ವೀಸ್ ಮೆಮೋರಿಯಲ್ ಟ್ರೋಫಿ ಡಿ.II–1200 ಮೀ. ರೇಟೆಡ್ 20 ರಿಂದ 45. (ನೋ ವ್ಹಿಪ್) ಸಂ.4.30ಕ್ಕೆ
1. ಸ್ಮೈಲ್ ಆಫ್ ಬ್ಯೂಟಿ 2. ಸೂಪರ್ ಕೈಂಡ್ 3. ನ್ಯಾಚುರ್ ಲೈಟ್

VII. ಡೆನ್ನಿಸ್ ಅಂಡ್ ವೈವೊನ್ನಿ ಜಾರ್‌ವೀಸ್ ಮೆಮೋರಿಯಲ್ ಟ್ರೋಫಿ ಡಿ.III–1200 ಮೀ. ರೇಟೆಡ್ 20 ರಿಂದ 45. (ನೋ ವ್ಹಿಪ್) ಸಂ.5.00ಕ್ಕೆ
1. ಚೋಟಿಪಾರಿ 2. ಸೀ ಗೋಲ್ಡ್ 3. ವಿಜಯ ಬ್ರೇವ್

ದಿನದ ಅತ್ಯುತ್ತಮ :	ಸ್ಮೈಲ್ ಆಫ್ ಬ್ಯೂಟಿ
ಡಬ್ಬಲ್ :	ಸ್ಕ್ವೇರ್ ಕಟ್, ಚೋಟಿಪಾರಿ
ಜಾಕ್‌ಪಾಟ್ :	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್ :	4, 5, 6 ಮತ್ತು 7
I ಟ್ರಿಬಲ್ :	2, 3 ಮತ್ತು 4
II ಟ್ರಿಬಲ್ :	5, 6 ಮತ್ತು 7
ಎಕ್ಸ್‌ಆಕ್ಟ್ :	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ರಮೇಶ್ ಡಿ.ಪಿ. ನಿಧನ



ಮೈಸೂರು, ಸೆ. 11– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನಂಜನಗೂಡು ತಾಲೂಕು ದೇವನೂರು ಗ್ರಾಮದ ರಮೇಶ್ ಡಿ.ಪಿ(46) ಮಂಗಳವಾರ ನಿಧನರಾದರು. ಇವರು ತಾಯಿ, ಪತ್ನಿ, ಸಹೋದರಿ ಹಾಗೂ ಇಬ್ಬರು ಸಹೋದರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ದೇವನೂರಿನಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಸರಾಗೆ ದಿನಗಣನೆ...: ಅರಮನೆ ಆವರಣದಲ್ಲಿ ತರಾತುರಿ ಕಾಮಗಾರಿ!



ಮೈಸೂರು, ಸೆ.11(ಎಂಕೆ)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಮೈಸೂರು ಸಜ್ಜಾಗುತ್ತಿರುವ ಹೊತ್ತಲ್ಲಿ ಅರಮನೆ ಆವರಣದಲ್ಲಿ ತರಾತುರಿ ಕಾಮಗಾರಿ ಆರಂಭವಾಗಿದೆ.

ಅರಮನೆ ಎದುರಿನ ಬಲ ಭಾಗದಲ್ಲಿ ಟೈಲ್ಸ್‌ಗಳನ್ನು ತೆಗೆದು ಹೊಸ ಟೈಲ್ಸ್‌ಗಳ ಜೊತೆಗೆ ಹಳೇ ಟೈಲ್ಸ್‌ಗಳನ್ನು ಜೋಡಿಸಿ ಸಮತಟ್ಟು ಮಾಡುವ ಹಾಗೂ ವಿದ್ಯುತ್ ಕೇಬಲ್ ಅಳವಡಿಸುವ ಕಾಮಗಾರಿ ತರಾತುರಿಯಲ್ಲಿ ನಡೆಯುತ್ತಿದೆ. ಈಗಾಗಲೇ ದಸರಾ ಜಂಬೂ ಸವಾರಿ ರೂವಾರಿಗಳಾದ ಗಜಪಡೆ ಅರಮನೆ ಅಂಗಳದಲ್ಲಿ ಬೀಡು ಬಿಟ್ಟಿದ್ದು, ಅದ್ದೂರಿ ದಸರಾ ಆಚರಣೆಯ ಎಲ್ಲಾ ಪೂರ್ವ ಸಿದ್ಧತೆಗಳು ನಡೆಯುತ್ತಿವೆ. ಫಲಪುಷ್ಪ ಪ್ರದರ್ಶನಕ್ಕಾಗಿ ವಿವಿಧ ಬಗೆಯ ಹೂ ಗಿಡಗಳನ್ನು ಬೆಳೆಸಲಾಗುತ್ತಿದೆ. ದೀಪಾಲಂಕಾರ ಸೇರಿದಂತೆ ಇನ್ನಿತರೆ ಸಿದ್ಧತೆಗಳು ನಡೆಯುತ್ತಿವೆ. ಇದರ ನಡುವೆ ಅರಮನೆ ಆವರಣದಲ್ಲಿ ದಿಢೀರ್ ಕಾಮಗಾರಿ ಹಲವು ಪ್ರಶ್ನೆಗಳಿಗೆ ಕಾರಣವಾಗಿದ್ದು, ದಸರಾ ಸನಿಹದಲ್ಲಿ ಕಾಮಗಾರಿ ಸರಿಯೇ. ಇಷ್ಟು ದಿನ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಬಂದಿರಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಹಲವು ವರ್ಷಗಳ ಹಿಂದೆಯೇ ಅಳವಡಿಸಿದ್ದ, ಸುಸ್ಥಿತಿಯಲ್ಲಿರುವ ಟೈಲ್ಸ್‌ಗಳ ಬದಲಿಸಲು ಇದು ಸೂಕ್ತ ಸಮಯವೇ. ಇಷ್ಟು ದಿನ ಏನು ಮಾಡುತ್ತಿದ್ದರು. ಏಕಾಏಕಿ ಕಾಮಗಾರಿ ಕೈಗೊಂಡರೆ ಮುಗಿಯುವುದು ಯಾವಾಗ. ಅರಮನೆ ವೀಕ್ಷಣೆಗೆ ಬರುವ ಪ್ರವಾಸಿಗರು ಕಾಮಗಾರಿ ನೋಡಲು ಬರಬೇಕೇ ಎಂದು ಕೆಲ ಮೈಸೂರಿಗರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅರಮನೆ ಮಂಡಳಿ ಉಪ ನಿರ್ದೇಶಕ ಸುಬ್ರಹ್ಮಣ್ಯ, ಅರಮನೆಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಎಲೆಕ್ಟ್ರಿಕಲ್ ಕೇಬಲ್ ಅಳವಡಿಸಲಾಗುತ್ತಿದೆ. ಅಲ್ಲದೆ ಹಳೇ ಟೈಲ್ಸ್‌ಗಳನ್ನು ತೆಗೆದು ಸಮತಟ್ಟು ಮಾಡುವ ಕಾಮಗಾರಿ ನಡೆಯುತ್ತಿದ್ದು, ತ್ವರಿತವಾಗಿ ಮುಗಿಯಲಿದೆ ಎಂದು ತಿಳಿಸಿದ್ದಾರೆ.

ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ

'ಏಕತಾರಿ' ವಾದ್ಯದ ಮೂಲಕ ಜಾನಪದ ಹಾಡುಗಳ ಹಾಡಿ

ಹಿರಿಯ ಜಾನಪದ ಕಲಾವಿದ ಡಾ.ಅಪ್ಪಗೆರೆ ತಿಮ್ಮರಾಜು ಕಿವಿಮಾತು



'ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರ–2024'ರ ಉದ್ಘಾಟನೆ ಹಾಗೂ 'ವಿಶ್ವ ಜನಪದ ದಿನಾಚರಣೆ' ಕಾರ್ಯಕ್ರಮವನ್ನು ಡೋಲು ಬಾರಿಸುವ ಮೂಲಕ ಉದ್ಘಾಟಿಸಲಾಯಿತು.

ಮೈಸೂರು, ಸೆ.11(ಎಸ್‌ಪಿಎನ್)– ದೇಶಿಯ ವಾದ್ಯವಾದ 'ಏಕತಾರಿ' ವಾದ್ಯದ ಮೂಲಕ ಜಾನಪದ ಕಾವ್ಯಗಳ ಹಾಡುವುದನ್ನು ಅಭ್ಯಾಸ ಮಾಡಬೇಕು ಎಂದು ಹಿರಿಯ ಜಾನಪದ ಕಲಾವಿದ ಡಾ.ಅಪ್ಪಗೆರೆ ತಿಮ್ಮರಾಜು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರು ರಂಗಾಯಣ ಆವರಣದ ಶ್ರೀರಂಗ ಚಾವಡಿಯಲ್ಲಿ ಮೈಸೂರು ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ 15 ದಿನಗಳ ಕಾಲ ಆಯೋಜಿಸಿರುವ 'ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರ–2024'ರ ಉದ್ಘಾಟನೆ ಹಾಗೂ 'ವಿಶ್ವ ಜನಪದ ದಿನಾಚರಣೆ' ಕಾರ್ಯಕ್ರಮವನ್ನು ಡೋಲು ಬಾರಿಸುವ ಮೂಲಕ ಉದ್ಘಾಟಿಸಿದರು. ಜರ್ಮನಿಯಲ್ಲಿ ಉದ್ಭವವಾದ 'ಗಿಟಾರ್' ವಾದ್ಯ ಬಳಸಿ ಸಂಗೀತ ಕಲಿಯುತ್ತೇವೆ. ಆಫ್ರಿಕಾ ಖಂಡದಲ್ಲಿ ಉದ್ಭವವಾದ ವಾದ್ಯವನ್ನು ನುಡಿಸಿ ಹಾಡು ಕಟ್ಟಿದಂತೆ, ನಮ್ಮ ನೆಲದಲ್ಲಿ ಉದ್ಭವವಾಗಿರುವ 'ಏಕತಾರಿ' ವಾದ್ಯಗಳನ್ನು ಬಳಸಿ ಜನಪದ ಹಾಡುಗಳನ್ನು ಕಟ್ಟಬೇಕು ಎಂದು ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

ಎಲ್ಲಿ ಗೌರವ ಇದೆಯೋ ಅಲ್ಲಿ ಸಂಬಂಧ ಚೆನ್ನಾಗಿರುತ್ತದೆ. ಎಲ್ಲಿ ಪ್ರೀತಿ ಇರುತ್ತದೆಯೋ ಹೃದಯದ ಭಾವನೆಗಳು ಒಂದಾಗಿರುತ್ತದೆ. ಆ ಭಾವನೆಗಳು ಜಾನಪದ ಕಲಾವಿದರಿಗೆ ಇರುತ್ತದೆ. ಹಾಗಾಗಿ ಈ ಕಾರ್ಯಕ್ರಮದ ಉದ್ಘಾಟನೆಗೆ ಒಪ್ಪಿಕೊಂಡೆ ಎಂದ ಅವರು, ಈ ಶಿಬಿರಕ್ಕೆ ಬಂದಿರುವ ಪ್ರತಿಯೊಬ್ಬ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಪರಸ್ಪರ ಗೌರವಿಸುವುದನ್ನು ಪ್ರಥಮವಾಗಿ ಕಲಿತುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿ ದಿಸೆಯಲ್ಲಿ ಜಾನಪದ ಶಿಬಿರಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವ ವಿಕಸನದ ಜೊತೆಗೆ ವಿದ್ಯಾರ್ಥಿಗಳ ಹಾವ–ಭಾವಗಳು ಬದಲಾಗುತ್ತವೆ. ಅದು ವೃತ್ತಿ ಬದುಕು ಹಾಗೂ ದೇಶದ ಪ್ರಗತಿಗೆ ಪೂರಕವಾಗಿರುತ್ತದೆ. ಹಾಗಾಗಿ ಜಾನಪದ ಶಿಬಿರಗಳ ಕಲಿಕೆ ಮುಂದಿನ ಜೀವನ ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಬೇರೆಬೇರೆ ಇಲಾಖೆಗಳಿಗೆ ಹೋಗಬಹುದಿತ್ತು. ವೈಯಕ್ತಿಕ ಲಾಭ ಗಳಿಸಬಹುದಿತ್ತು ಹಾಗೂ ಲೋಕಾಯುಕ್ತದಂತಹ ಕಾರ್ಯಾಚರಣೆಗೂ ಅವಕಾಶವಾಗುವಂತೆ ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳಬಹುದಿತ್ತು. ಆದರೆ, ಎಲ್ಲವನ್ನು ಬಿಟ್ಟು ನಾಡು, ನುಡಿ, ಸಂಸ್ಕೃತಿ–ಪರಂಪರೆ ಉಳಿಸುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಾ, ಹಲವಾರು ಕಲಾವಿದರ ಬೆಳವಣಿಗೆ ಪ್ರತ್ಯಕ್ಷ, ಪರೋಕ್ಷವಾಗಿ ಕಾರಣಕರ್ತರಾಗಿದ್ದಾರೆ. ಇಂತಹ ಅಧಿಕಾರಿಗಳು ಸಮಾಜಕ್ಕೆ ಮಾದರಿ ಎಂದರು.

ಶಿಬಿರಾರ್ಥಿಗಳಾದ ಕೆ.ಆರ್.ಪಾಂಡು, ಟಿ.ಕೆ.ಭಾಸ್ಕರ, ಎಸ್.ವಿನಯ್, ಜಿ.ಲಕ್ಷ್ಮಿ, ಎಂ.ಪ್ರಿಯಾ, ಆರ್.ಅನುಪವಿತ್ರ, ಎ.ಆರ್.ಸ್ನೇಹ, ಎಚ್.ವಿದ್ಯಾಶ್ರೀ, ಎಂ.ಪಿ.ಸನಿಕಾ, ಎಂ.ರಕ್ಷಿತಾ, ಎನ್.ಹರ್ಷಿತಾ, ಶಶಿಕಲಾ, ಮಲ್ಲಿಕಾ, ಮಧು ಋತ್ವಿಕ್, ಎಸ್.ದೀಕ್ಷಿತ, ಜಿ.ಸಿಂಚನ, ಸಂಜನ, ಬಿ.ಆರ್.ಯುಕ್ತಾ, ಕೆ.ಕಿಶನ್, ಭಾನುಪ್ರಿಯಾ, ಸಂಜನ, ಎಂ.ಚೈತ್ರ, ಮೊಹಮ್ಮದ್ ಅಯಾಜ್, ಭಾಗ್ಯ, ಕೆ.ಸಂತೋಷ, ಎಂ.ಭೂಮಿಕಾ, ಕೆ.ಎಚ್.ಸಮನ್ವಯ, ಲೇಖನ, ಕೆ.ಹರ್ಷಿತಾ, ಬಿ.ಪುಷ್ಪಾ, ಆರ್.ಚಂದನ, ಎನ್.ನವ್ಯ, ಟಿ.ಎಸ್.ಸಿಂಚನ, ಎಸ್.ಆಕಾಶ್, ಹರ್ಷ, ಎಸ್.ಪುರುಷೋತ್ತಮ್, ನಾಗರಾಜ್, ಪಿ.ಶಿವಕುಮಾರ್, ವಿನಯ್ ಕುಮಾರ್, ಎಸ್.ಎಚ್. ಅಮೃತ, ಎಂ.ಅರುಣ ಸೇರಿದಂತೆ ಇತರರು ಭಾಗವಹಿಸಿದ್ದರು.

ವೇದಿಕೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾದ ಡಾ.ಉಮೇಶ್, ಗಾಯಕ ದೇವಾನಂದ ವರಪ್ರಸಾದ್, ಕೃಷ್ಣಮೂರ್ತಿ ತಲಕಾಡು, ಮಹಾರಾಜ ಕಾಲೇಜು ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಉಮೇಶ್, ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಜನಪದ ಗಾಯಕರಾದ ಡಾ.ಸೋಮಶೇಖರ್, ಸಿದ್ದೇಶ್ ಬದನವಾಳು, ವಿಶ್ವನಾಥ್ ಎಲ್.ಚಂಗಚ್ಚಹಳ್ಳಿ, ಸಿಂಚನ ಚಿಕ್ಕೊಳಲೆ, ರಶ್ಮಿ ರಾಂಪುರ ಸೇರಿದಂತೆ ಇತರರಿದ್ದರು.

ಅರ್ಜಿ ಆಹ್ವಾನ

ಮೈಸೂರು:ದೀನ್ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ದಡಿ ನಗರ ಅಭಿಯಾನ ನಿರ್ವಹಣಾ ಘಟಕದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿಯಲ್ಲಿನ ಮಲ್ಟಿ ಟಾಸ್ಕಿಂಗ್ ಅಫಿಷಿಯಲ್ಸ್ ಹುದ್ದೆಗೆ ಬಾಹ್ಯ ಸಂಪನ್ಮೂಲ ಸಂಸ್ಥೆಯ ಮೂಲಕ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕಾಗಿರುವುದರಿಂದ ಅರ್ಹ ಬಾಹ್ಯ ಮಾನವ ಸಂಪನ್ಮೂಲ ಸಂಸ್ಥೆ (ಏಜನ್ಸಿ)ಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಕಚೇರಿಯ ದೂ.ಸಂ: 0821–2970815 ಅನ್ನು ಸಂಪರ್ಕಿಸಬಹುದು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು